ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ | ಜೂನ್ 12 ಭಾನುವಾರ 2022

ಸಂಪುಟ: 43 | ಸಂಚಿಕೆ: 57 | ಪುಟಗಳು: 10 | ₹4

ದೂರವಾಣಿ: 2496520, 2496521, 2496526, 2496527, 2496528, ಜಾಹೀರಾತು: 2496522, 2496523,
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ, ಫೋಟೋಗೆ: news@mysurumithra.com ಜಾಹೀರಾತು: ad@mysurumithra.com

ಮೈಸೂರು ಮಿತ್ರ ಭಾನುವಾರ 12 ಜೂನ್ 2022

ಜೆಡಿಎಸ್ ಅಭ್ಯರ್ಥಿ ಹೆಚ್.ಕೆ.ರಾಮು ಬೆಂಬಲಿಸಿ

ಪದವೀಧರ ಮತದಾರರಲ್ಲಿ ಜೆಡಿಎಸ್ ಮಹಿಳಾ ಘಟಕ ಮನವಿ

ಮೈಸೂರು, ಜೂ.11(ಆರ್‌ಕೆಬಿ)– ಹೆಚ್.ಡಿ.ದೇವೇಗೌಡ ಮತ್ತು ಹೆಚ್.ಡಿ. ಕುಮಾರಸ್ವಾಮಿ ಅವರ ಆಡಳಿತ ಅವಧಿಯಲ್ಲಿನ ಜನಪರ ಕಾರ್ಯಗಳನ್ನು ಪರಿಗಣಿಸಿ



ಪದವೀಧರ ಮತದಾರರು ದಕ್ಷಿಣ ಪದವೀಧರ ಕ್ಷೇತ್ರದಿಂದ ವಿಧಾನಪರಿಷತ್ ಚುನಾವಣೆಯಲ್ಲಿ ಸ್ಪರ್ಧಿಸಿರುವ ಜೆಡಿಎಸ್ ಅಭ್ಯರ್ಥಿ ಹೆಚ್.ಕೆ.ರಾಮು ಅವರಿಗೆ ಮತ ನೀಡುವಂತೆ ಜೆಡಿಎಸ್ ಮಹಿಳಾ ಘಟಕದ ಅಧ್ಯಕ್ಷೂ ಆಗಿರುವ ನಗರಪಾಲಿಕೆ ಸದಸ್ಯೆ ಪ್ರೇಮಾ ಶಂಕರೇಗೌಡ ಮನವಿ ಮಾಡಿದರು.

ಮೈಸೂರು ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಪ್ರಾದೇಶಿಕ ಪಕ್ಷವಾದ ಜೆಡಿಎಸ್‌ನ ಎಚ್.ಡಿ.ದೇವೇಗೌಡ ಹಾಗೂ ಎಚ್.ಡಿ.ಕುಮಾರಸ್ವಾಮಿ ತಮ್ಮ ಆಡಳಿತಾವಧಿಯಲ್ಲಿ ರೈತರ ಸಾಲ ಮನ್ನಾ, ಅತಿ ಹೆಚ್ಚು ಪದವಿ ಕಾಲೇಜು ಮಂಜೂರು ಮಾಡಿದೆ. ಅಲ್ಲದೆ, ಸರ್ಕಾರಿ ನೌಕರಿ, ಶಾಲಾ ಕಾಲೇಜು ಶಿಕ್ಷಕರು, ಅತಿಥಿ ಉಪನ್ಯಾಸಕರ ಪರವಾಗಿಯೇ ಇರುವ ಜೆಡಿಎಸ್, ಈಗಾಗಲೇ ಘೋಷಣೆಯಾಗಿರುವ ಆರೋಗ್ಯ, ಕೃಷಿ, ಉದ್ಯೋಗ, ಶಿಕ್ಷಣ ಹಾಗೂ ವಸತಿ ಯೋಜನೆಗಳನ್ನು ಜಾರಿಗೊಳಿಸುವ ನಿಟ್ಟಿನಲ್ಲಿ ಹಾಗೂ ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಪಕ್ಷವನ್ನು ಮತ್ತೆ ಅಧಿಕಾರಕ್ಕೆ ತರುವ ನಿಟ್ಟಿನಲ್ಲಿ ಪದವೀಧರರು ಜೆಡಿಎಸ್ ಅಭ್ಯರ್ಥಿಯ ಗೆಲುವಿಗೆ ಸಹಕರಿಸುವಂತೆ ಮನವಿ ಮಾಡಿದರು. ಗೋಷ್ಠಿಯಲ್ಲಿ ನಗರಪಾಲಿಕೆ ವಿಪಕ್ಷ ನಾಯಕಿ ಅಶ್ವಿನಿ ಅನಂತ್, ಪಾಲಿಕೆ ಸದಸ್ಯೆ ಭಾಗ್ಯ ಮಾದೇಶ್, ಚಾಮರಾಜ ಕ್ಷೇತ್ರ ಅಧ್ಯಕ್ಷೆ ಲಕ್ಷ್ಮಿ ಶಿವರಾಜ್ ಉಪಸ್ಥಿತರಿದ್ದರು.



ದಕ್ಷಿಣ ಪದವೀಧರ ಕ್ಷೇತ್ರದ ಚುನಾವಣೆ ಬಿಜೆಪಿ ಅಭ್ಯರ್ಥಿ ಮೈ.ವಿ.ರವಿಶಂಕರ್ ಪರ ಬಿಜೆಪಿ ಮುಖಂಡರು ಮತಯಾಚಿಸಿದರು. ಈ ವೇಳೆ ಕಾರ್ಪೊರೇಟರ್ ಶಿವಕುಮಾರ್, ಮಾಜಿ ನಗರ ಅಧ್ಯಕ್ಷ ಶಿವಕುಮಾರ್, ಮುಡಾ ಸದಸ್ಯೆ ಲಕ್ಷ್ಮೀದೇವಿ ಇನ್ನಿತರರಿದ್ದರು.



ಕೆ.ಆರ್.ಪೇಟೆ ತಾಲೂಕು ಕುರುಬರ ಸಂಘದ ನೂತನ ಪದಾಧಿಕಾರಿಗಳನ್ನು ಕರ್ನಾಟಕ ಪ್ರದೇಶ ಕುರುಬರ ಸಂಘದ ರಾಜ್ಯಾಧ್ಯಕ್ಷ ಬಿ.ಸುಬ್ರಹ್ಮಣ್ಯ ಸನ್ಮಾನಿಸಿದರು.

ಜೂ.14ರಂದು ಶನಿ ಮಹಾಶಾಂತಿ

ಮೈಸೂರು, ಜೂ.11– ದೇವರಾಜ ಮೊಹಲ್ಲಾದಲ್ಲಿರುವ ಶ್ರೀ ಅಮೃತೇಶ್ವರ ದೇವಸ್ಥಾನದಲ್ಲಿ ಹುಣ್ಣಿಮೆ ಪ್ರಯುಕ್ತ ಜೂ.14ರಂದು ಮಂಗಳವಾರ ಮಿಥುನ, ಕನ್ಯಾ, ಧನಸ್ಸು, ಮಕರ, ಕುಂಭ ರಾಶಿಯವರಿಗೆ ಶನಿ ಮಹಾಶಾಂತಿಯನ್ನು ಏರ್ಪಡಿಸಲಾಗಿದೆ. ಇದಲ್ಲದೆ ಮಹಾ ಸುದರ್ಶನ ಹೋಮ, ಮಹಾ ಮೃತ್ಯುಂಜಯ ಹೋಮ ಸತ್ಯನಾರಾಯಣ ಪೂಜೆ ಏರ್ಪಡಿಸಲಾಗಿದೆ. ಬೆಳಗ್ಗೆ 8.30ಕ್ಕೆ ಪ್ರಾರಂಭವಾಗಿ 12 ಗಂಟೆಗೆ ಪೂರ್ಣಾಹುತಿ. ಹೆಚ್ಚಿನ ವಿವರಗಳಿಗೆ ಮೈ ಕುಮಾರ್ (ಜಾತಕ ವಿಮರ್ಶಕ)ರನ್ನು ಮೊ.ಸಂ. 9845183392, 9480966522 ಮೂಲಕ ಸಂಪರ್ಕಿಸಬಹುದು.

ಚಾಮುಂಡಿಬೆಟ್ಟದಲ್ಲಿ ಧರೆಗುರುಳಿದ ಭಾರೀ ಮರ



ಮೈಸೂರು, ಜೂ.11(ಎಂಕೆ)– ಮೈಸೂರಿನ ಚಾಮುಂಡಿಬೆಟ್ಟದಲ್ಲಿ ಬೃಹತ್ ಮರವೊಂದು ಧರೆಗುರುಳಿದ್ದು, ಅದೃಷ್ಟವಶಾತ್ ಯಾವುದೇ ಪ್ರಾಣಹಾನಿ ಸಂಭವಿಸಿಲ್ಲ.

ಶನಿವಾರ ಸಂಜೆ 4 ಗಂಟೆ ಸುಮಾರಿಗೆ ಚಾಮುಂಡಿ ಬೆಟ್ಟಕ್ಕೆ ಹೋಗುವ ಮಾರ್ಗದಲ್ಲಿರುವ ತಾವರೆಕಟ್ಟೆ ಬಳಿ ಬೃಹತ್ ಮರ ಉರುಳಿ ಬಿದ್ದಿದೆ. ಪರಿಣಾಮ ಗಂಟೆಗೂ ಹೆಚ್ಚುಕಾಲ ವಾಹನ ಸಂಚಾರಕ್ಕೆ ತೊಂದರೆ ಉಂಟಾಯಿತು. ಸ್ಥಳಕ್ಕಾಗಮಿಸಿದ ಪಾಲಿಕೆ ಅಭಯ ತಂಡ ಉರುಳಿಬಿದ್ದ ಮರ ತೆರವುಗೊಳಿಸುವ ಕಾರ್ಯಾಚರಣೆ ನಡೆಸಿದ್ದಾರೆ.

ಇನ್ನಷ್ಟು ಮರಗಳು ಧರೆಗುರುಳುವ ಸಾಧ್ಯತೆ: ಚಾಮುಂಡಿಬೆಟ್ಟಕ್ಕೆ ಸಾಗುವ ಮಾರ್ಗದಲ್ಲಿ ಹಲವು ಟೊಳ್ಳು ಮರಗಳಿದ್ದು, ಜೋರಾಗಿ ಗಾಳಿ ಬೀಸಿದರೆ ಬುಡ ಸಮೇತ ಮುರಿದು ಬೀಳುವ ಸಾಧ್ಯತೆ ಹೆಚ್ಚಾಗಿದೆ. ಕೂಡಲೇ ಸಂಬಂಧಪಟ್ಟ ಅಧಿಕಾರಿಗಳು ಪರಿಶೀಲನೆ ನಡೆಸಬೇಕು. ಇಲ್ಲದಿದ್ದರೆ ಚಾಮುಂಡಿಬೆಟ್ಟಕ್ಕೆ ಬರುವ ಭಕ್ತಾದಿಗಳಿಗೆ ತೊಂದರೆ ಉಂಟಾಗಲಿದೆ ಎಂದು ಸ್ಥಳೀಯ ನಿವಾಸಿಗಳು ಆತಂಕ ವ್ಯಕ್ತಪಡಿಸಿದ್ದಾರೆ.



ದಕ್ಷಿಣ ಪದವೀಧರ ಕ್ಷೇತ್ರದ ಚುನಾವಣೆಯ ಬಿಜೆಪಿ ಅಭ್ಯರ್ಥಿ ಮೈ.ವಿ.ರವಿಶಂಕರ್ ಪರ ಮೈಸೂರಿನ ಮಂಚೇಗೌಡನಕೊಪ್ಪಲಿನಲ್ಲಿ ಮೈಸೂರು ನಗರ ಉಪಾಧ್ಯಕ್ಷ ರಮೇಶ್, ಮಾಜಿ ಉಪ ಮೇಯರ್ ಮಹದೇವಪ್ಪ, ಚಾಮರಾಜ ಕ್ಷೇತ್ರದ ಪ್ರಧಾನ ಕಾರ್ಯದರ್ಶಿ ಪುನೀತ್, ಮುಖಂಡರಾದ ರವಿ, ಗೋವಿಂದರಾಜು, ಶಿವಕುಮಾರ್ ಮತಯಾಚಿಸಿದರು.



ದಕ್ಷಿಣ ಪದವೀಧರ ಚುನಾವಣೆ ಕಾಂಗ್ರೆಸ್ ಅಭ್ಯರ್ಥಿ ಮಧು ಜಿ.ಮಾದೇಗೌಡ ಪರ ಮತಯಾಚನೆ ಮಾಡಲಾಯಿತು. ಈ ಸಂದರ್ಭದಲ್ಲಿ ಹಿನಕಲ್ ಪ್ರಕಾಶ್, ಹಿನಕಲ್ ಗ್ರಾಪಂ ಮಾಜಿ ಉಪಾಧ್ಯಕ್ಷ ಹೊನ್ನಪ್ಪ, ಭೈರನಾಯಕ, ಗ್ರಾಪಂ ಮಾಜಿ ಸದಸ್ಯರಾದ ಶ್ರೀನಿವಾಸ್, ರಮೇಶ್, ಕೆ.ಜಿ.ನಾಗರಾಜ್, ಚಂದ್ರಶೇಖರ್, ರಾಜಣ್ಣ, ಯುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ನಿಶಾಂತ್, ಯುವ ಮುಖಂಡರಾದ ಕೀರ್ತಿ, ನವೀನ್ ಇದ್ದರು.

ಇಂದಿನಿಂದ 19ರವರೆಗೆ ಗ್ರೀಷ್ಮ ರಂಗಾಯಣೋತ್ಸವ

ರಂಗಭೂಮಿಯೊಂದಿಗೆ ವಿವಿಧ ಕಲೆಗಳ ಅಂತರ ಸಂಬಂಧ ಕುರಿತು ಸಂಪನ್ಮೂಲ ವ್ಯಕ್ತಿಗಳಿಂದ ವಿಚಾರ ಮಂಡನೆ

ಮೈಸೂರು,ಜೂ.11(ಪಿಎಂ)–ರಂಗಾಯಣ ಮೈಸೂರು ವತಿಯಿಂದ ಜೂ.12ರಿಂದ 19ರವರೆಗೆ ಗ್ರೀಷ್ಮ ರಂಗಾಯಣೋತ್ಸವ ಆಯೋಜಿಸಿದ್ದು, ರಂಗಾಯಣದಲ್ಲಿ ಈಗಾಗಲೇ ಸಿದ್ಧಪಡಿಸಿ ಪ್ರದರ್ಶನಗೊಂಡಿರುವ ನಾಟಕಗಳ ಉತ್ಸವ ಇದಾಗಿದೆ ಎಂದು ರಂಗಾಯಣ ನಿರ್ದೇಶಕ ಅಡ್ಡಂಡ ಸಿ.ಕಾರ್ಯಪ್ಪ ತಿಳಿಸಿದರು.

ರಂಗಾಯಣದ ಬಿ.ವಿ.ಕಾರಂತ ರಂಗಚಾವಡಿಯಲ್ಲಿ ಶನಿವಾರ ಹಮ್ಮಿಕೊಂಡಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ರಂಗಾಯಣದ ಅಂಗಸಂಸ್ಥೆಯಾದ 'ಭಾರತೀಯ ರಂಗವಿದ್ಯಾಲಯ'ವು ಭವಿಷ್ಯದ ರಂಗಭೂಮಿಯ ಪೀಳಿಗೆ ರೂಪಿಸುವಲ್ಲಿ ಮಹತ್ವದ ಪಾತ್ರ ವಹಿಸಲಿದೆ. ಹಾಗಾಗಿ ಈ ಸಂಸ್ಥೆ ಹೆಚ್ಚು ಸಕ್ರಿಯವಾಗಿರುವಂತೆ ನೋಡಿಕೊಳ್ಳಲಾಗಿದೆ. ಸದರಿ ರಂಗ ವಿದ್ಯಾಲಯದ 2021–22ನೇ ಸಾಲಿನ ಒಂದು ವರ್ಷದ ರಂಗಶಿಕ್ಷಣ ತರಬೇತಿಯನ್ನು (ಡಿಪ್ಲೊಮಾ) 15 ವಿದ್ಯಾರ್ಥಿಗಳು ಪೂರ್ಣಗೊಳಿಸಿದ್ದಾರೆ. ಈ ವಿದ್ಯಾರ್ಥಿಗಳು ಗ್ರೀಷ್ಮ ರಂಗಾಯಣೋತ್ಸವದಲ್ಲಿ 4 ನಾಟಕಗಳ ಪ್ರದರ್ಶನ ನೀಡಲಿದ್ದಾರೆ ಎಂದು ವಿವರಿಸಿದರು.

ಈ ವಿದ್ಯಾರ್ಥಿಗಳು ವರ್ಷದಲ್ಲಿ 4 ನಾಟಕಗಳನ್ನು ಕಲಿತಿದ್ದು, ಅವುಗಳ ಪ್ರದರ್ಶನ ನೀಡಲಿದ್ದಾರೆ. ಅಲ್ಲದೆ, ರಂಗಾಯಣ ಕಿರಿಯ ರೆಪರ್ಟರಿಯಿಂದ 2, ಸಂವಿಧಾನ ಆಶಯ ತಂಡ ಹಾಗೂ ರಂಗಾಯಣ ಹಿರಿಯ ರೆಪರ್ಟರಿಯಿಂದ ತಲಾ 1 ಸೇರಿದಂತೆ ಒಟ್ಟು 8 ನಾಟಕಗಳ ಪ್ರದರ್ಶನ ರಂಗಾಯಣೋತ್ಸವದಲ್ಲಿ ನಡೆಯಲಿದೆ. 50ರಿಂದ 30 ರೂ.ಗೆ ಟಿಕೆಟ್ ದರ ಇಳಿಕೆ ಮಾಡಿದ್ದೇವೆ. ಈ ಮೊದಲ ಹವ್ಯಾಸಿ ರಂಗಭೂಮಿ ಕಲಾವಿದರನ್ನು ಆಹ್ವಾನಿಸಿ ಗ್ರೀಷ್ಮ ರಂಗೋತ್ಸವ ಎಂದು ಮಾಡಲಾಗುತ್ತಿತ್ತು ಎಂದರು.

ರಂಗಾಯಣದ ಭೂಮಿಗೀತ ಸಭಾಂಗಣದಲ್ಲಿ ಪ್ರತಿದಿನ ಸಂಜೆ 6.30ಕ್ಕೆ ನಾಟಕಗಳ ಪ್ರದರ್ಶನ ಇರಲಿದೆ. ಇದರ ಜೊತೆಗೆ ಇದೇ ಅವಧಿಯಲ್ಲಿ ಪ್ರತಿದಿನ ಸಂಜೆ 4ರಿಂದ 5ರವರೆಗೆ ಬಿ.ವಿ.ಕಾರಂತ ರಂಗಚಾವಡಿಯಲ್ಲಿ ರಂಗಭೂಮಿಗೆ ಸಂಬಂಧಿಸಿದಂತೆ ಸಂವಾದ ಕಾರ್ಯಕ್ರಮ ಆಯೋಜಿಸಿದ್ದು, ಪ್ರತಿದಿನ ಒಬ್ಬರು ಸಂಪನ್ಮೂಲ ವ್ಯಕ್ತಿಗಳು ವಿಚಾರ ಮಂಡಿಸಲಿದ್ದಾರೆ. ಬಳಿಕ ಸಂವಾದಕ್ಕೆ ಅವಕಾಶ ಇರಲಿದೆ ಎಂದರು.

ಸಂವಾದದಲ್ಲಿ ಜೂ.12ರಂದು 'ಜನಪದದಲ್ಲಿ ರಂಗಭೂಮಿ' ಕುರಿತು ಜನಪದ ತಜ್ಞ ಯು.ಎಸ್.ರಾಮಣ್ಣ ಮಾತನಾಡಲಿದ್ದಾರೆ. ಅಂತೆಯೇ ಜೂ.13ರಂದು 'ಸಂಸ್ಕೃತ ನಾಟಕಗಳು–ರಂಗಭೂಮಿ' ಕುರಿತು ಹಿರಿಯ ಸಂಸ್ಕೃತ ವಿದ್ವಾಂಸ ಡಾ.ಹೆಚ್.ವಿ.ನಾಗರಾಜರಾವ್, ಜೂ.14ರಂದು 'ಆಧುನಿಕ ರಂಗಭೂಮಿ ಎತ್ತ ಸಾಗಿದೆ' ಕುರಿತು ರಂಗ ನಿರ್ದೇಶಕ ಪ್ರೊ.ಹೆಚ್.ಎಸ್.ಉಮೇಶ್, ಜೂ.15ರಂದು 'ರಂಗಭೂಮಿಯಲ್ಲಿ ನಾಟ್ಯ' ಕುರಿತು ಹಿರಿಯ ನೃತ್ಯ ಕಲಾವಿದೆ ವಿದುಷಿ ತುಳಸೀ ರಾಮಚಂದ್ರ, ಜೂ.16ರಂದು 'ರಂಗಭೂಮಿಯಲ್ಲಿ ಗೊಂಬೆಯಾಟ' ಕುರಿತು ಗೊಂಬೆಯಾಟ ಕಲಾವಿದ ರಂಗೋಲಿ ಶ್ರೀಕಾಂತ್, ಜೂ.17ರಂದು 'ನಾನೇಕೆ ಆರ್‌ಎಸ್‌ಎಸ್‌ನಲ್ಲಿ ಇದ್ದೇನೆ' ಕುರಿತು ಆರ್‌ಎಸ್‌ಎಸ್ ಹಿರಿಯ ಮುಖಂಡ ಮಾ.ವೆಂಕಟರಾಮು, ಜೂ.18ರಂದು 'ರಂಗಸಂಗೀತದ ಮಾಂತ್ರಿಕತೆ' ಕುರಿತು ರಂಗ ನಿರ್ದೇಶಕ ವೈ.ಎಂ.ಪುಟ್ಟಣ್ಣಯ್ಯ ಹಾಗೂ ಜೂ.19ರಂದು 'ಆಧುನಿಕ ಕಲಾವಿದರ ಸವಾಲು' ಕುರಿತು ರಂಗಭೂಮಿ ಮತ್ತು ಚಲನಚಿತ್ರ ಕಲಾವಿದ ಶಿವಾಜಿರಾವ್ ಜಾಧವ್ ಮಾತನಾಡಲಿದ್ದಾರೆ ಎಂದು ವಿವರಿಸಿದರು.



ಮೈಸೂರು ರಂಗಾಯಣದಲ್ಲಿ ಹಮ್ಮಿಕೊಂಡಿದ್ದ ಪತ್ರಿಕಾಗೋಷ್ಠಿಯಲ್ಲಿ ರಂಗಾಯಣ ನಿರ್ದೇಶಕ ಅಡ್ಡಂಡ ಸಿ.ಕಾರ್ಯಪ್ಪ ಮಾತನಾಡಿದರು. ಚಿತ್ರದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ಮಲ್ಲಿಕಾರ್ಜುನಸ್ವಾಮಿ ಇದ್ದಾರೆ.

ಅರ್ಜಿ ಆಹ್ವಾನ: ಭಾರತೀಯ ರಂಗವಿದ್ಯಾಲಯ ಪೂರ್ಣ ಪ್ರಮಾಣದ ರಂಗ ಶಿಕ್ಷಣ ನೀಡುವ ಸಂಸ್ಥೆ. ಈ ಸಂಸ್ಥೆ ಮೈಸೂರಿನ ಡಾ.ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯದ ಮಾನ್ಯತೆ ಪಡೆದಿದೆ. ಪ್ರತಿವರ್ಷ ರಂಗಶಿಕ್ಷಣದಲ್ಲಿ 10 ತಿಂಗಳ ಡಿಪ್ಲೊಮಾ ಕೋರ್ಸ್ ಅನ್ನು ನಡೆಸುವ ಈ ಸಂಸ್ಥೆಯು 2022–23ನೇ ಸಾಲಿಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಿದೆ. ಕನಿಷ್ಠ ದ್ವಿತೀಯ ಪಿಯುಸಿ ಅಥವಾ ತತ್ಸಮಾನ ಪರೀಕ್ಷೆ ತೇರ್ಗಡೆ ಹೊಂದಿದ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದು. ಜೂ.25 ಅರ್ಜಿ ಸಲ್ಲಿಸಲು ಕೊನೆ ದಿನವಾಗಿದ್ದು, ಜು.18ರಿಂದ ತರಗತಿಗಳು ಆರಂಭವಾಗಲಿವೆ ಎಂದು ಅಡ್ಡಂಡ ಕಾರ್ಯಪ್ಪ ಮಾಹಿತಿ ನೀಡಿದರು.


ರಂಗಾಯಣೋತ್ಸವ ಸಂಬಂಧ ಉದ್ಘಾಟನೆ ಸಮಾರಂಭ ಇಲ್ಲ. ನಾನು ರಂಗಾಯಣದ ನಿರ್ದೇಶಕನಾಗಿ ಬಂದ ಮೇಲೆ 16 ನಾಟಕಗಳನ್ನು ಇಲ್ಲಿ ನಿರ್ಮಾಣ ಮಾಡಲಾಗಿದೆ. ಕೋವಿಡ್ ಸವಾಲು ನಡುವೆ ಇಷ್ಟು ನಾಟಕಗಳ ನಿರ್ಮಾಣ ಕಡಿಮೆ ಸಂಖ್ಯೆಯಲ್ಲ. ಹೊರರಾಜ್ಯ ಮತ್ತು ರಾಜ್ಯದ 69 ನಾಟಕಗಳನ್ನು ಪ್ರಯೋಜನೆ ಮಾಡಿದ್ದೇವೆ. ಅವರೆಲ್ಲರಿಗೂ ಗೌರವ ಸಂಭಾವನೆ ನೀಡಿದ್ದೇವೆ. ಜುಲೈನಲ್ಲಿ ಹೊಸ ನಾಟಕಗಳ ಪ್ರದರ್ಶನ ಕೈಗೆತ್ತಿಕೊಳ್ಳಲಿದ್ದೇವೆ. ಬಳಿಕ ಡಿಸೆಂಬರ್‌ನಲ್ಲಿ 2022ನೇ ಸಾಲಿನ ಬಹುರೂಪಿ ನಡೆಯಲಿದೆ. ಇದಕ್ಕಾಗಿ ಶೀಘ್ರದಲ್ಲಿ ಸಿದ್ಧತೆ ನಡೆಸಲಿದ್ದೇವೆ. ಜುಲೈ ಕೊನೆಯಲ್ಲಿ ಕಾಲೇಜು ರಂಗೋತ್ಸವ ಆಯೋಜಿಸಲಿದ್ದೇವೆ. ಹಸಿರು ಮತ್ತು ಸ್ವಚ್ಛ ರಂಗಾಯಣ ಪರಿಕಲ್ಪನೆ ಈಡೇರಿಸಲು ಕಳೆದ 2 ವರ್ಷಗಳಿಂದ ಶಕ್ತಿ ಮೀರಿ ದುಡಿದಿದ್ದೇವೆ ಎಂದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ಎಂ.ಎನ್.ಮಲ್ಲಿಕಾರ್ಜುನಸ್ವಾಮಿ ಗೋಷ್ಠಿಯಲ್ಲಿದ್ದರು.

'ಪರ್ವ' ಮಹಾ ರಂಗ ಪ್ರಯೋಗ ಹೊರರಾಜ್ಯ ಪ್ರವಾಸ

'ಪರ್ವ' ಪ್ರದರ್ಶನ ಸಂಬಂಧ ರಾಜ್ಯ ಪ್ರವಾಸ ಪೂರ್ಣಗೊಳಿಸಿದ್ದೇವೆ. ಹೊರರಾಜ್ಯ ಪ್ರದರ್ಶನ ಸಂಬಂಧ ಎರಡು ಸ್ಥಳಗಳ ಪ್ರಯಾಣಕ್ಕೆ ಸಜ್ಜಾಗಿದ್ದೇವೆ. ರಾಜ್ಯದಲ್ಲಿ 38 ಪ್ರದರ್ಶನಗಳನ್ನು ಪೂರ್ಣಗೊಳಿಸಿರುವ ಪರ್ವ ತಂಡ, ಜೂ.26ರಂದು ಮುಂಬೈ ಮತ್ತು ಜು.3ರಂದು ಪುಣೆಯಲ್ಲಿ ಹೊರರಾಜ್ಯ ಪ್ರದರ್ಶನ ನೀಡಲಿದೆ. ಇದಕ್ಕಾಗಿ ಜೂ.23ರಂದು ಪ್ರವಾಸ ಹೊರಡಲಿದೆ. ಈ ಎರಡು ಪ್ರದರ್ಶನ ಬಳಿಕ ಒಟ್ಟು 40 ಪ್ರದರ್ಶನಗಳೊಂದಿಗೆ ಪರ್ವ ಪ್ರದರ್ಶನ ಮುಕ್ತಾಯಗೊಳ್ಳಲಿದೆ. ಪರ್ವ ಮಹಾ ರಂಗಪ್ರಯೋಗದಿಂದ ರಂಗಾಯಣಕ್ಕೆ ಆದಾಯ ಮತ್ತು ಹೆಸರು ಎರಡೂ ಬಂದಿದೆ.

–ಅಡ್ಡಂಡ ಸಿ.ಕಾರ್ಯಪ್ಪ

ಪ್ರದರ್ಶನಗೊಳ್ಳುವ ನಾಟಕಗಳು...



ಜೂ.12ರಂದು ರಂಗಾಯಣದ ಕಿರಿಯ ರೆಪರ್ಟರಿಯಿಂದ 'ಕೃಷ್ಣೇಗೌಡನ ಆನೆ', ಜೂ.13ರಂದು ಭಾರತೀಯ ರಂಗವಿದ್ಯಾಲಯದ ವಿದ್ಯಾರ್ಥಿಗಳಿಂದ 'ವಿದಿಶಾ ಪ್ರಹಸನ', ಜೂ.14ರಂದು ಭಾರತೀಯ ರಂಗವಿದ್ಯಾಲಯದ ವಿದ್ಯಾರ್ಥಿಗಳಿಂದ 'ಬೆಕ್ಕು–ಬಾವಿ', ಜೂ.15ರಂದು ಭಾರತೀಯ ರಂಗವಿದ್ಯಾಲಯ ವಿದ್ಯಾರ್ಥಿಗಳಿಂದ 'ವಾಸಾಂಸಿ ಜೀರ್ಣಾನಿ', ಜೂ.16ರಂದು ಭಾರತೀಯ ರಂಗವಿದ್ಯಾಲಯ ವಿದ್ಯಾರ್ಥಿಗಳಿಂದ 'ಪ್ರಮೀಳಾ ರ್ಜುನೀಯಂ', ಜೂ.17ರಂದು ರಂಗಾಯಣದ ಕಿರಿಯ ಕಲಾವಿದರಿಂದ 'ಸೂತ್ರಧಾರ', ಜೂ.18ರಂದು ರಂಗಾಯಣದ ಕಿರಿಯ ರೆಪರ್ಟರಿಯಿಂದ 'ಮೂಕನ ಮಕ್ಕಳು' ಮತ್ತು ಜೂ.19ರಂದು ರಂಗಾಯಣದ ಹಿರಿಯ ರೆಪರ್ಟರಿಯಿಂದ 'ಮಿಸ್ಟರ್ ಬೋಗೀಸ್' ನಾಟಕಗಳ ಪ್ರದರ್ಶನ ನಡೆಯಲಿದೆ.



ಮಾಜಿ ಸಚಿವೆ ಮೋಟಮ್ಮ ಅವರ 'ಬಿದಿರು ನೀನ್ಯಾರಿಗಲ್ಲದವಳು' ಆತ್ಮಚರಿತ್ರೆಯನ್ನು ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ಶನಿವಾರ ಬಿಡುಗಡೆ ಮಾಡಲಾಯಿತು. ಈ ವೇಳೆ ಮಾಜಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ಮೋಟಮ್ಮ, ಮಾಜಿ ಉಪಮುಖ್ಯಮಂತ್ರಿ ಡಾ.ಜಿ.ಪರಮೇಶ್ವರ್, ಬಿಟಿ ಲಲಿತಾ ನಾಯಕ್ ಸೇರಿದಂತೆ ಹಲವು ಗಣ್ಯರು ಉಪಸ್ಥಿತರಿದ್ದರು.

ಕೋಡಿಮಠ ಶ್ರೀಗಳಿಂದ ಮತ್ತೊಮ್ಮೆ ಸ್ಫೋಟಕ ಭವಿಷ್ಯ

ಬಳ್ಳಾರಿ: ಈಗಾಗಲೇ ರಾಜ್ಯ ರಾಜಕೀಯ, ದೇಶದ ಬಗ್ಗೆ ಭವಿಷ್ಯ ನುಡಿದಿದ್ದ ಕೋಡಿ ಮಠದ ಶ್ರೀಗಳು ಇದೀಗ ಮತ್ತೊಮ್ಮೆ ಸ್ಫೋಟಕ ಭವಿಷ್ಯ ನುಡಿದಿದ್ದಾರೆ. ಬಳ್ಳಾರಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಕೋಡಿ ಮಠದ ಶ್ರೀ ಶಿವಾನಂದ ಶಿವಯೋಗಿ ರಾಜೇಂದ್ರ ಸ್ವಾಮೀಜಿ, ರಾಜ್ಯದಲ್ಲಿ ಮಳೆ–ಬೆಳೆ ಕೆಂಡಮಂಡಲವಾಗಲಿದೆ. ಗುಡುಗು, ಸಿಡಿಲು, ಮಿಂಚು ಹೆಚ್ಚಾಗಲಿದೆ. ಮಲೆನಾಡು ಬಯಲಾಗಲಿದೆ. ಬಯಲು ಮಲೆನಾಡಾಗಲಿದೆ ಎಂದಿದ್ದಾರೆ.



ದೊಡ್ಡ ದೊಡ್ಡ ನಗರಕ್ಕೆ ಮಳೆಯಿಂದ ಹಾನಿ ಉಂಟಾಗಲಿದೆ. ಮುಂಗಾರು ಮಳೆ ಇನ್ನೂ ಹೆಚ್ಚಾಗಲಿದೆ. ಹಿಂಗಾರಿನಲ್ಲಿ ಅಕಾಲಿಕ ಮಳೆ ಆಗುವ ಲಕ್ಷಣಗಳಿವೆ. ಮತೀಯ ಗಲಭೆ ಹೆಚ್ಚಾಗಲಿದೆ. ಸಾವು–ನೋವುಗಳು ಉಂಟಾಗಲಿವೆ. ಕೋವಿಡ್ ಒಂದೂವರೆ ವರ್ಷದ ನಂತರ ಕಡಿಮೆ ಆಗಲಿದೆ. ಕೊರೊನಾ ಹೋಗುವ ಸಂದರ್ಭದಲ್ಲಿ ವಿಪರೀತ ಕಷ್ಟ ಕೊಟ್ಟು ಹೋಗಲಿದೆ. ಹೀಗಾಗಿ ಈಗಿನಿಂದಲೇ ಎಚ್ಚರಿಕೆ ವಹಿಸಬೇಕು ಎಂದಿದ್ದಾರೆ.

ಇಂದು ಇಂಜಿನಿಯರ್ಸ್ ಸಮ್ಮಿಲನ

ಮೈಸೂರು, ಜೂ.11– ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾನಿಲಯದ ವತಿಯಿಂದ ಯಾದವಗಿರಿಯ 2ನೇ ಮುಖ್ಯರಸ್ತೆಯ 'ಜ್ಞಾನ ಪ್ರಕಾಶ ಭವನ'ದಲ್ಲಿ ಜೂ.12ರಂದು ಭಾನುವಾರ ಬೆಳಗ್ಗೆ 11ರಿಂದ ಮಧ್ಯಾಹ್ನ 1ರವರೆಗೆ 'ಅನಿಶ್ಚಿತತೆಗಳನ್ನು ನಿಭಾಯಿಸುವುದು' ಎಂಬ ವಿಷಯದ ಕುರಿತು ಇಂಜಿನಿಯರ್‌ಗಳೊಂದಿಗೆ ಸಮ್ಮಿಲನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದ್ದು, ಬ್ರಹ್ಮಕುಮಾರೀಸ್ ಮೈಸೂರು ಉಪ–ವಿಭಾಗದ ಮುಖ್ಯ ಸಂಚಾಲಕಿ ರಾಜಯೋಗಿನಿ ಬಿ.ಕೆ.ಲಕ್ಷ್ಮೀಜಿ ಆಶೀರ್ವಚನ ನೀಡಲಿದ್ದಾರೆ. ನಗರದ ಇಂಜಿನಿಯರ್‌ಗಳು, ಸಾರ್ವಜನಿಕರು ಕಾರ್ಯಕ್ರಮದಲ್ಲಿ ಭಾಗವಹಿಸಬಹುದು.

ಪಿಹೆಚ್.ಡಿ




ಮೈಸೂರು, ಜೂ.11– ಡಾ.ರಂಗಸ್ವಾಮಿ ಮಾರ್ಗದರ್ಶನದಲ್ಲಿ ನಾಗೇಶ್ ಕನ್ನಡ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾ ಪ್ರಬಂಧವನ್ನು ಮದ್ರಾಸ್ ವಿಶ್ವವಿದ್ಯಾನಿಲಯ ಪಿಹೆಚ್.ಡಿ ಪದವಿಗೆ ಅಂಗೀಕರಿಸಿದೆ ಎಂದು ಪ್ರಕಟಣೆ ತಿಳಿಸಿದೆ.

ಬಸವರಾಜ ಹೊರಟ್ಟಿಗೆ ನೋಟಿಸ್

ಬೆಳಗಾವಿ: ವಿಧಾನಪರಿಷತ್ ಪದವೀಧರ ಮತ್ತು ಶಿಕ್ಷಕರ ಕ್ಷೇತ್ರದ ಚುನಾವಣೆ ಹೊತ್ತಿನಲ್ಲೇ ಪಶ್ಚಿಮ ಶಿಕ್ಷಕರ ಕ್ಷೇತ್ರದ ಅಭ್ಯರ್ಥಿ ಬಸವರಾಜ ಹೊರಟ್ಟಿಗೆ ನೋಟಿಸ್ ನೀಡಲಾಗಿದೆ. ಪುಸ್ತಕವೊಂದರ ಮುಖಪುಟದ ಮೇಲೆ ರಾಷ್ಟ್ರೀಯ ಲಾಂಛನ, ಪರಿಷತ್ ಸಭಾಪತಿ ಪೀಠ ಚಿತ್ರ ಪ್ರಕಟಿಸಿ ದುರ್ಬಳಕೆ ಮಾಡಿಕೊಂಡಿರುವ ಆರೋಪದ ಮೇಲೆ ಹೊರಟ್ಟಿ ಅವರಿಗೆ ನೋಟಿಸ್ ನೀಡಲಾಗಿದೆ ಎಂದು ಬೆಳಗಾವಿ ಪ್ರಾದೇಶಿಕ ಆಯುಕ್ತ ಆಮ್ಲಾನ್ ಆದಿತ್ಯ ಬಿಸ್ವಾಸ್ ತಿಳಿಸಿದ್ದಾರೆ. ರಾಜ್ಯ ಮಾಧ್ಯಮಿಕ ಶಾಲಾ ನೌಕರರ ಸಂಘ 'ಬಸವರಾಜ ಪಥ' ಎಂಬ ಪುಸ್ತಕ ಪ್ರಕಟಿಸಿತ್ತು. ಪುಸ್ತಕದ ಮುಖಪುಟದ ಮೇಲೆ ರಾಷ್ಟ್ರೀಯ ಲಾಂಛನ, ಪರಿಷತ್ ಸಭಾಪತಿ ಪೀಠದ ದುರ್ಬಳಕೆ ಮಾಡಿಕೊಳ್ಳಲಾಗಿದೆ. ಈ ಸಂಬಂಧ ವಿವರಣೆ ಕೇಳಿ ಹೊರಟ್ಟಿ ಅವರಿಗೆ ನೋಟಿಸ್ ಜಾರಿ ಮಾಡಲಾಗಿದೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

12.06.2022 ಭಾನುವಾರ, ಮಳೆ ನಕ್ಷತ್ರ : ಮೃಗಶಿರ 08.06.2022 ರಿಂದ 21.06.2022
ಶ್ರೀ ಶುಭಕೃತುನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಜ್ಯೇಷ್ಠ ಮಾಸ, ಶುಕ್ಲ ಪಕ್ಷ
ತಿಥಿ: ತ್ರಯೋದಶಿ, ನಕ್ಷತ್ರ : ವಿಶಾಖ, ರಾಹುಕಾಲ: ಸಂಜೆ 4.30 ರಿಂದ 6ರವರೆಗೆ

■ **ಮೈಸೂರು ಜಿಮ್ ಮತ್ತು ಫಿಟ್ನೆಸ್ ಮಾಲೀಕರ ಸಂಘ** : ಯೋಗ ಪೂರ್ವಭಾವಿ ತಾಲೀಮು, ಸ್ಥಳ: ಅರಮನೆ ಆವರಣ, ಬೆಳಗ್ಗೆ 6ಕ್ಕೆ.

■ **ವ್ಯವಸ್ಥಾಪಕರು:** ಕಲಾವಿದ ಶಿವಕುಮಾರ್ ದೊಡ್ಡರಸಿನಕೆರೆ ಅವರ ಯೋಗ ಡೇ–ಚಿತ್ರಕಲಾ ಪ್ರದರ್ಶನ, ಉಪಸ್ಥಿತರು: ಅರಮನೆ ಮಂಡಳಿ ಉಪನಿರ್ದೇಶಕ ಟಿ.ಎಸ್.ಸುಬ್ರಹ್ಮಣ್ಯ, ಜೆಎಸ್‌ಎಸ್ ಸಂಸ್ಥೆ ಅಧ್ಯಕ್ಷ ಡಿ.ಶ್ರೀಹರಿ, ಶ್ರೀ ಕಲಾನಿಕೇತನ ಕಲಾ ಶಾಲೆ ಪ್ರಿನ್ಸಿಪಾಲ್ ಮಹದೇವಶೆಟ್ಟಿ, ಸ್ಥಳ: ಅರಮನೆ ಆವರಣ, ಬೆಳಗ್ಗೆ 9ರಿಂದ.

■ **ಶ್ರೀ ಚಂದ್ರಮೌಳೀಶ್ವರ ಸ್ವಾಮಿ ದೇವಸ್ಥಾನಂ ಚಾರಿಟಬಲ್ ಟ್ರಸ್ಟ್** : 80ನೇ ಜಯಂತ್ಯುತ್ಸವ, ಬೆಳಗ್ಗೆ 9.30ಕ್ಕೆ ಶತಕಲಶಾಭಿಷೇಕ, ಸ್ಥಳ: ಶ್ರೀ ಚಂದ್ರಮೌಳೀಶ್ವರ ಸ್ವಾಮಿ ದೇವಸ್ಥಾನ, ವಿ.ವಿ. ಮೊಹಲ್ಲಾ.

■ **ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ:** ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿಯವರ 80ನೇ ಜನ್ಮ ದಿನೋತ್ಸವ, ಲಕ್ಷ ಶ್ರೀಸೂಕ್ತ ಮಹಾಯಾಗ ಮತ್ತು ಕೋಟಿ ದತ್ತ ಹೋಮ, ಸ್ಥಳ: ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ.

■ **ಶ್ರೀ ಸುಬ್ರಹ್ಮಣ್ಯಸ್ವಾಮಿ ದೇವಸ್ಥಾನ**: ವಿಮಾನ ಗೋಪುರ ಮತ್ತು ರಾಜಗೋಪುರ ಮಹಾ ಕುಂಭಾಭಿಷೇಕ ಮಹೋತ್ಸವ, ಭಕ್ತಾದಿಗಳೆಲ್ಲರಿಗೂ ಅನ್ನಸಂತರ್ಪಣೆ, ಸ್ಥಳ: ದೇವಸ್ಥಾನ, ವಿಶ್ವೇಶ್ವರನಗರ.

■ **ಮೈಸೂರು ಆರ್ಟ್ ಗ್ಯಾಲರಿ** : ಕಲಾವಿದ ಎಂ.ಆರ್. ಮನೋಹರ ಅವರು ಜಂಗಮ ವಾಣಿ (ಮೊಬೈಲ್) ಮೂಲಕ ಸೆರೆಹಿಡಿದ ವೈವಿಧ್ಯಮಯ ಛಾಯಾಚಿತ್ರ ಪ್ರದರ್ಶನ, ಸ್ಥಳ: ಮೈಸೂರು ಆರ್ಟ್ ಗ್ಯಾಲರಿ, ಬೆಳಗ್ಗೆ 10 ರಿಂದ

■ **ಬಿಲ್ಡರ್ಸ್ ಅಸೋಸಿಯೇಷನ್ ಆಫ್ ಇಂಡಿಯಾ, ಮೈಸೂರು ಸೆಂಟರ್, ಮೈಸೂರು ಬಿಲ್ಡರ್ಸ್ ಚಾರಿಟಬಲ್ ಟ್ರಸ್ಟ್** : ಮೈಗ್ರೀನ್–2022, ಪರಿಸರ ಸ್ನೇಹಿ ಕಟ್ಟಡ ಸಾಮಗ್ರಿಗಳು ಮತ್ತು ಗ್ರೀನ್ ಲೈಫ್ ಸ್ಟೈಲ್ಸ್ ವಸ್ತುಪ್ರದರ್ಶನ, ಸ್ಥಳ: ನಂಜರಾಜ ಬಹದ್ದೂರ್ ಛತ್ರ, ಮೆಟ್ರೋಪೋಲ್ ಸರ್ಕಲ್, ಬೆಳಗ್ಗೆ 10 ರಿಂದ.

■ **ಕಾವ್ಯರಂಜನೀ ಸಭಾ:** ಪ್ರೊ.ಕೆ.ಎಲ್.ಪದ್ಮಿನಿ ಹೆಗಡೆ ಅವರ 'ರಸಹರ್ಷವರ್ಷ' ಕೃತಿ ಬಿಡುಗಡೆ ಸಮಾರಂಭ, ಉಪಸ್ಥಿತರು: ಕೆ.ಕೃಷ್ಣಮೂರ್ತಿ ಹೆಬ್ಬಾರ್ ಕರ್ಕಿ, ಪ್ರೊ.ರಾಘವೇಂದ್ರ ಭಟ್ಟ, ಡಾ.ಮಲ್ಲಪ್ಪ ಬಸವರಾಜ್, ಡಾ.ಪ್ರಸನ್ನಾಕ್ಷಿ, ಪ್ರೊ. ಪದ್ಮಿನಿ ಹೆಗಡೆ, ಗಜಾನನ ಈಶ್ವರ ಹೆಗಡೆ, ಸ್ಥಳ: ನಮನ ಕಲಾ ಮಂಟಪ, ಬೆಳಗ್ಗೆ 10ಕ್ಕೆ

■ **ಅಖಿಲ ಭಾರತೀಯ ಸಾಹಿತ್ಯ ಪರಿಷತ್, ಬಿಜಿಎಸ್ ಬಿಇಡಿ ಕಾಲೇಜು** : ನೀವೂ ಬರೆಯಬಲ್ಲಿರಿ ಒಂದು ದಿನದ ಕಾರ್ಯಾಗಾರ, ಉದ್ಘಾಟನೆ: ಶ್ರೀ ಸೋಮನಾಥ ಸ್ವಾಮೀಜಿ, ಅಧ್ಯಕ್ಷತೆ : ವಿಶ್ರಾಂತ ಇತಿಹಾಸ ಪ್ರಾಧ್ಯಾಪಕ ಪ್ರೊ.ಜಿ.ರಾಮರತನ್, ಮುಖ್ಯ ಅತಿಥಿಗಳು: ಕಾಲೇಜು ಆಡಳಿತಾಧಿಕಾರಿ ಯಶೋಧ, ಪ್ರಿನ್ಸಿಪಾಲ್ ಡಾ.ನಾಗರಾಜು, ಸ್ಥಳ: ಬಿಜಿಎಸ್ ಬಿಇಡಿ ಕಾಲೇಜು ಸಭಾಂಗಣ, ಕುವೆಂಪುನಗರ, ಬೆಳಗ್ಗೆ 10 ರಿಂದ.

■ **ಬಸವ ಸಮಿತಿ:** ಶರಣ ಸಂಗಮ–270, ಸಾನ್ನಿಧ್ಯ: ಬೇಬಿಬೆಟ್ಟ ಶ್ರೀ ರಮಯೋಗೀಶ್ವರ ಮಠದ ಶ್ರೀ ಶಿವಬಸವಸ್ವಾಮೀಜಿ, ಜೆಎಸ್‌ಎಸ್ ವಿದ್ಯಾಸಂಸ್ಥೆ ಮುಖ್ಯ ಶಿಕ್ಷಕ ಮಹಮದ್ ಅಂಜುಮ್ ಪಾಷರಿಂದ ಉಪನ್ಯಾಸ, ಅಧ್ಯಕ್ಷತೆ: ಅಧ್ಯಕ್ಷ ಹೆಚ್.ವಿ.ಬಸವರಾಜು, ಸ್ಥಳ: ಬಸವ ಭವನ, ವಿಜಯನಗರ 1ನೇ ಹಂತ, ಬೆಳಗ್ಗೆ 10.30ಕ್ಕೆ.

■ **ವಿವೇಕ ಜಾಗೃತ ಬಳಗಗಳು, ದಕ್ಷಿಣ ವಲಯ–3:** ಚಿಂತನ ವಿಚಾರ: ವ್ಯಕ್ತಿ ವಿಕಸನಕ್ಕಾಗಿಯೇ ಯೋಗ ಕಹಳೆ, ಉಪಸ್ಥಿತರು : ವೈದ್ಯಕೀಯ ನಿರ್ದೇಶಕ ಡಾ. ವಿವೇಕ ಉಡುಪ, ಸ್ಥಳ: ಮಹಾರಾಜ ಕಾಲೇಜು ಶತಮಾನೋತ್ಸವ ಭವನ, ರಾಮಸ್ವಾಮಿ ಸರ್ಕಲ್ ಬಳಿ, ಬೆಳಗ್ಗೆ 10.30 ರಿಂದ.

■ **ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾನಿಲಯ** : 'ಅನಿಶ್ಚಿತತೆಗಳನ್ನು ನಿಭಾಯಿಸುವುದು' ಎಂಬ ವಿಷಯದ ಕುರಿತು ಇಂಜಿನಿಯರ್ಸ್‌ಗಳೊಂದಿಗೆ ಸಮ್ಮಿಲನ ಕಾರ್ಯಕ್ರಮ, ಆಶೀರ್ವಚನ : ಬ್ರಹ್ಮಕುಮಾರೀಸ್ ಮೈಸೂರು ಉಪ–ವಿಭಾಗದ ಮುಖ್ಯ ಸಂಚಾಲಕಿ ರಾಜಯೋಗಿನಿ ಬಿ.ಕೆ.ಲಕ್ಷ್ಮೀಜಿ ಅವರಿಂದ ಸ್ಥಳ: ಜ್ಞಾನ ಪ್ರಕಾಶ ಭವನ, 2ನೇ ಮುಖ್ಯ ರಸ್ತೆ, ಯಾದವಗಿರಿ, ಬೆಳಿಗ್ಗೆ 11 ಗಂಟೆಯಿಂದ.

■ **ಅಖಿಲ ಭಾರತೀಯ ಗ್ರಾಹಕ ಪಂಚಾಯತ್, ಮೈಸೂರು ಜಿಲ್ಲೆ:** ಗ್ರಾಹಕರ ಹಿತ ಚಿಂತನಾ ಸಭೆ, ಉದ್ಘಾಟನೆ: ಮುಖ್ಯ ವಕ್ತಾರ ವಿಜಯ್ ಸಾಗರ್, ಉಪಸ್ಥಿತರು: ಎಬಿಜಿಪಿ ಮೈಸೂರು ಜಿಲ್ಲೆಯ ಅಧ್ಯಕ್ಷ ರವಿಶಂಕರ್, ಸಂಘಟನಾ ಕಾರ್ಯದರ್ಶಿ ವಿಕ್ರಂ ಅಯ್ಯಂಗಾರ್, ಸ್ಥಳ: ಮಾಧವ ಕೃಪಾ, ಜೆಎಲ್‌ಬಿ ರಸ್ತೆ, ಬೆಳಗ್ಗೆ 11ಕ್ಕೆ

■ **ಸಪ್ತಗಿರಿ ಮೆಲೋಡಿಸ್** : ಎಸ್.ಪಿ. ಬಾಲಸುಬ್ರಹ್ಮಣ್ಯಂ ಜನ್ಮ ದಿನೋತ್ಸವ ಅಂಗವಾಗಿ ಗಾನಗಂಧರ್ವ ರಸಮಂಜರಿ ಕಾರ್ಯಕ್ರಮ, ಸಾನ್ನಿಧ್ಯ : ಇಳೈ ಆಳ್ವಾರ್ ಸ್ವಾಮೀಜಿ, ವಿಶೇಷ ಆಹ್ವಾನಿತರು : ಹಿರಿಯ ಸಮಾಜ ಸೇವಕ ಡಾ. ಕೆ. ರಘುರಾಂ ವಾಜಪೇಯಿ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಮಾಜಿ ಕಸಾಪ ಅಧ್ಯಕ್ಷ ವೈ.ಡಿ.ರಾಜಣ್ಣ, ಡಾ.ಸುರೇಂದ್ರ, ಡಾ.ರೇಖಾ, ಡಾ.ರವೀಂದ್ರಕುಮಾರ್, ವೆಂಕಟೇಶ್, ಎಸ್.ಎ.ಶ್ರೀನಿವಾಸ್, ಸ್ಥಳ: ನಾದಬ್ರಹ್ಮ ಸಂಗೀತ ಸಭಾಂಗಣ, ನಂಜು ಮಳಿಗೆ, ಸಂಜೆ 4ಕ್ಕೆ.

■ **ಕರಾವಳಿ ಯಕ್ಷಗಾನ ಕೇಂದ್ರ** : ಯಕ್ಷಗಾನ ನಾಟ್ಯ ತರಗತಿಗಳ ಉದ್ಘಾಟನಾ ಸಮಾರಂಭ ಹಾಗೂ ತಾಳಮದ್ದಳೆ ಕಾರ್ಯಕ್ರಮ, ಸ್ಥಳ: ವಿಜಯ ವಿಠ್ಠಲ ವಿದ್ಯಾಶಾಲಾ ಆವರಣ, ಸರಸ್ವತಿಪುರಂ, ಸಂಜೆ 4ಕ್ಕೆ.

■ **ಯದುನಂದನ ಪ್ರಕಾಶನ, ಉಪಾಸನಾ, ಬೆಂಗಳೂರು:** ಡಾ. ಸಂತೋಷ ಚೊಕ್ಕಾಡಿಯವರ ನಮಗಿಲ್ಲ ಹಕ್ಕಿಹಾಡು ಭಾವಗೀತೆಗಳ ಸಂಕಲನ ಬಿಡುಗಡೆ ಸಮಾರಂಭ, ಕೃತಿ ಬಿಡುಗಡೆ: ಕವಿ ಲಕ್ಷ್ಮಣರಾವ್, ಕೃತಿ ಕುರಿತು ಮಾತನಾಡುವವರು: ಲೇಖಕ ಡಾ.ಸತ್ಯನಾರಾಯಣ, ಅಧ್ಯಕ್ಷತೆ : ಲೇಖಕ ಪ್ರೊ. ಸಿ.ನಾಗಣ್ಣ, ಮುಖ್ಯ ಅತಿಥಿಗಳು: ಕವಿ ಸುಬ್ರಾಯ ಚೊಕ್ಕಾಡಿ, ಉಪಾಸನಾ ಮೋಹನ್, ಯದುನಂದನ ಪ್ರಕಾಶನದ ರಾಜೇಶ್ ಹೊನ್ನೇನಹಳ್ಳಿ, ಸ್ಥಳ: ರಮಾಗೋವಿಂದ ರಂಗಮಂದಿರ, ರಾಮಕೃಷ್ಣನಗರ, ಸಂಜೆ 4.30ಕ್ಕೆ.

■ **ಶ್ರೀರಾಮಕೃಷ್ಣ ಆಶ್ರಮ** : ಸ್ವಾಮಿ ಜ್ಞಾನಯೋಗಾನಂದ ಅವರಿಂದ ಶ್ರೀರಾಮಕೃಷ್ಣ ವಚನವೇದ ಕುರಿತು ಉಪನ್ಯಾಸ, ಸ್ಥಳ: ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

■ **ನಟನ ರಂಗಶಾಲೆ:** ರಂಗಕರ್ಮಿ, ಚಲನಚಿತ್ರ ನಿರ್ಮಾಪಕ, ನಿರ್ದೇಶಕ ಬಿ. ಸುರೇಶ ಅವರ ನಿರ್ದೇಶನದ ಉಪ್ಪಿನ ಕಾಗದ ಚಲನಚಿತ್ರ ಪ್ರದರ್ಶನ, ಸ್ಥಳ: ನಟನಾ ರಂಗಶಾಲೆ, ರಾಮಕೃಷ್ಣನಗರ, ಸಂಜೆ 6.30ಕ್ಕೆ.

■ **ಗಾನಭಾರತೀ** : ವಾಲ್ಮೀಕಿ ರಾಮಾಯಣ ಆಧಾರಿತ ನಾಟಕ 'ಅಯೋಧ್ಯ ಕಾಂಡ' ನಾಟಕ ಪ್ರದರ್ಶನ, ನಿರ್ದೇಶನ : ಹಿರಿಯ ರಂಗನಿರ್ದೇಶಕ ಪ್ರಸನ್ನ, ಸಂಗೀತ : ಅನುಶೆಟ್ಟಿ, ಸ್ಥಳ: ವೀಣೆ ಶೇಷಣ್ಣ ಭವನ, ಆದಿಚುಂಚನಗಿರಿ ರಸ್ತೆ, ಕುವೆಂಪುನಗರ, ಸಂಜೆ 7ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.05 ಚಿಂತನ, 6.20 ಗೀತಾರಾಧನ, 6.30 ಮೈಸೂರಿನ ಯೋಗ ವಿದ್ಯಾ ಪರಂಪರೆ–ಮಾಲಿಕೆ, ಲೇಖನ ಪ್ರಸ್ತುತಿ– ಡಾ. ಎ.ಎಸ್. ಚಂದ್ರಶೇಖರ್, 6.35 "ಬದುಕು ಬದಲಿಸಿದ ಶೋಧ"–ಲೇಖನ ಮತ್ತು ಪ್ರಸ್ತುತಿ–ಸುರೇಂದ್ರನಾಥ್ ಸಾತ್ವಿಕ್, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಕಾರ್ಯಕ್ರಮ ಸರಣಿ, ಗಾಯನ– ಅಂಬಯ್ಯನುಲಿ, ಡಾ. ಪಿ.ಎಸ್. ಮುರಳೀಧರ್, ವ್ಯಾಖ್ಯಾನ– ಡಾ. ಬೋರೇಗೌಡ ಚಿಕ್ಕಮರಳಿ, 7.15 ಪ್ರಾಯೋಜಿತ ಕಾರ್ಯಕ್ರಮ "ಸಮಗ್ರ ವಿಕಾಸಕ್ಕಾಗಿ ದಿಟ್ಟ ಹೆಜ್ಜೆ", ಪ್ರಾಯೋಜಕರು ವಿಕಾಸ್ ಅಕಾಡೆಮಿ, ಕಲಬುರ್ಗಿ, 9.05 ಈಸಿ ಇಂಗ್ಲೀಷ್– ಕನ್ನಡದ ಮೂಲಕ ಇಂಗ್ಲೀಷ್ ಕೈಕೆಯ ಬಾನುಲಿ ಸರಣಿ, ರಚನೆ ಮತ್ತು ಪ್ರಸ್ತುತಿ– ಸಿ.ಕೆ. ವಿಜಯನಾರಸಿಂಹ, 9.30 ಆಕಾಶವಾಣಿಯೊಂದಿಗೆ ಸ್ವಾತಂತ್ರ್ಯ ಚಳುವಳಿಯ ಪಯಣ, 9.40 ನಮ್ಮ ಆರೋಗ್ಯ, "ಮಿದುಳಿನ ರಕ್ತಸ್ರಾವ" ಕುರಿತು ಡಾ. ಎಂ.ಎಸ್.ಭಾಸ್ಕರ್ ಅವರೊಂದಿಗೆ ಮಾತುಕತೆ, 10.00 ಕೇಳಿಗಿಳಿಗಳೇ–ಕಥೆ ಕೇಳುಪುಟ್ಟಾ, ಪಂಚತಂತ್ರದ ಕಥೆ ಹೇಳುತ್ತಾರೆ ಬಿ.ಜಿ.ಕವಿತಾ, 10.30 ಮಕ್ಕಳ ಮಂಟಪ, ನಾನು ಮತ್ತು ಪರಿಸರ ಕುರಿತು ಮುಖಾಮುಖಿ ಕಾರ್ಯಕ್ರಮದಲ್ಲಿ ಪ್ರಶ್ನೆಗಳಿಗೆ ಉತ್ತರಿಸುವವರು ಪರಿಸರ ತಜ್ಞ ಮನು, ಪ್ರಸ್ತುತಿ– ಎಸ್.ಎಸ್. ಭಾರತಿ, 11.15 ಯೋಗದತ್ತ ಜಗತ್ತು–ವಿಶೇಷ ಸರಣಿ

ಮಧ್ಯಾಹ್ನ: 12.35 ದೇವರನಾಮ–ಬಿ.ಎನ್. ಮಂಜುಳಾ, 12.45 ಜನಪದ ಸಂಗೀತ–ಮಂಟೆಸ್ವಾಮಿ ಮತ್ತು ತಂಡ, 1.20 ಅಂತಾರಾಷ್ಟ್ರೀಯ ಯೋಗ ದಿನದ ಅಂಗವಾಗಿ "ಯೋಗ ಸುಯೋಗ" ಬಾನುಲಿ ಸರಣಿ, 2.35 ಚಲನ ಚಿತ್ರ ಧ್ವನಿ ವಾಹಿನಿ, 3.40 ಯಕ್ಷಗಾನ ತಾಳ ಮದ್ದಲೆ, ಪ್ರಸಂಗ "ಸುಂದರಕಾಂಡ", ಪ್ರಸ್ತುತಿ– ಧರ್ಮಸ್ಥಳದ ಬಿ.ಭುಜಬಲಿ ಮತ್ತು ಸಂಗಡಿಗರು, 9.05 ಚಿಣ್ಣರ ಸುದ್ದಿ ಲೋಕ–ಪ್ರಚಲಿತ ವಿದ್ಯಮಾನಗಳ ವಾರ್ತಾ ಸಂಚಿಕೆ, 9.30 ರವಿವಾಸರೀಯ ಅಖಿಲ ಭಾರತೀಯ ಸಂಗೀತ ಸಭಾ–ಗಜಧರ್ ಪಾಟಕ್– ಇಸ್ ರಾಜ್, ಕೃಷನ್ ಗೋಪಾಲ್ – ಫಖವಾಜ್, 11.00 ಸವಿನೆನಪು



ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ


ಜೂನ್ 12 ಭಾನುವಾರ 2022

ಸಂಪುಟ: 43 | ಸಂಚಿಕೆ: 57 | ಪುಟಗಳು: 10

ದೂರವಾಣಿ: 2496520, 2496521, 2496526, 2496527, 2496528, ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4



ದಕ್ಷಿಣ ಪದವೀಧರ ಕ್ಷೇತ್ರದ ಚುನಾವಣೆ

ನಾಳೆ ಮತದಾನ

- ಸೋಮವಾರ ಬೆಳಗ್ಗೆ 8ರಿಂದ ಸಂಜೆ 5ರವರೆಗೆ ಪದವೀಧರರು ಹಕ್ಕು ಚಲಾಯಿಸಲು ಅವಕಾಶ
- ಜೂ.15, ಮೈಸೂರು ಮಹಾರಾಣಿ ಕಾಮರ್ಸ್ ಅಂಡ್ ಮ್ಯಾನೇಜ್‌ಮೆಂಟ್ ಕಾಲೇಜಿನಲ್ಲಿ ಮತ ಎಣಿಕೆ

ಮೈಸೂರು,ಜೂ.11(ಆರ್‌ಕೆ)–ಕರ್ನಾಟಕ ದಕ್ಷಿಣ ಪದವೀಧರ ಕ್ಷೇತ್ರದಿಂದ ವಿಧಾನಪರಿಷತ್ ಸದಸ್ಯ ಸ್ಥಾನಕ್ಕೆ ಜೂ.13 (ಸೋಮವಾರ)ರಂದು ಚುನಾವಣೆ ನಡೆಯಲಿದೆ.


ಡಾ.ಜೆ.ಸಿ.ಪ್ರಕಾಶ್ ಚುನಾವಣಾಧಿಕಾರಿ


ಅಂದು ಬೆಳಗ್ಗೆ 8 ರಿಂದ ಸಂಜೆ 5 ಗಂಟೆವರೆಗೆ ಮೈಸೂರು, ಮಂಡ್ಯ, ಹಾಸನ ಹಾಗೂ ಚಾಮರಾಜನಗರ ಜಿಲ್ಲೆಗಳ 150 ಮತಗಟ್ಟೆಗಳಲ್ಲಿ ಮತದಾನ ನಡೆಯಲಿದ್ದು, 82,505 ಪುರುಷರು, 59,432 ಮಹಿಳೆಯರು, 24 ಇತರರು ಸೇರಿ ಒಟ್ಟು 1,41,961 ಮತದಾರರು ತಮ್ಮ ಹಕ್ಕು ಚಲಾಯಿಸುವರು. ಮೈಸೂರು ಜಿಲ್ಲೆಯಲ್ಲಿ 66, ಮಂಡ್ಯದಲ್ಲಿ 45, ಹಾಸನದಲ್ಲಿ 45 ▶ 6ನೇ ಪುಟಕ್ಕೆ

ಎಂ.ವಿ.ರವಿಶಂಕರ್, ಮಧು ಜಿ. ಮಾದೇಗೌಡ, ಹೆಚ್.ಕೆ.ರಾಮು ಸೇರಿ ಕಣದಲ್ಲಿ 19 ಅಭ್ಯರ್ಥಿಗಳು


ರವಿಶಂಕರ್ | ಮಧು ಮಾದೇಗೌಡ | ಹೆಚ್.ಕೆ.ರಾಮು | ವಾಟಾಳ್ | ಪ್ರಸನ್ನ | ವಿನಯ್

ಮೈಸೂರು: ದಕ್ಷಿಣ ಪದವೀಧರ ಕ್ಷೇತ್ರದಿಂದ ವಿಧಾನ ಪರಿಷತ್‌ಗೆ ಜೂನ್ 13ರಂದು ನಡೆಯಲಿರುವ ಚುನಾವಣೆಯಲ್ಲಿ ಒಟ್ಟು 19 ಅಭ್ಯರ್ಥಿಗಳು ಕಣದಲ್ಲಿದ್ದಾರೆ. ಬಿಜೆಪಿಯ ಎಂ.ವಿ.ರವಿಶಂಕರ್, ಕಾಂಗ್ರೆಸ್‌ನ ಮಧು ಜಿ.ಮಾದೇಗೌಡ, ಜೆಡಿಎಸ್‌ನ ಹೆಚ್.ಕೆ.ರಾಮು, ಎಸ್‌ಡಿಪಿಐನ ರಫತುಲ್ಲಾ ಖಾನ್, ▶ 6ನೇ ಪುಟಕ್ಕೆ

ಪರಿಷತ್‌ನಲ್ಲೂ ನಮ್ಮದೇ ಅಭ್ಯರ್ಥಿಗಳ ಗೆಲುವು



ಹುಬ್ಬಳ್ಳಿ: ವಿಧಾನಪರಿಷತ್ 4 ಕ್ಷೇತ್ರದ ಚುನಾವಣೆಯಲ್ಲಿಯೂ ಬಿಜೆಪಿ ಅಭ್ಯರ್ಥಿಗಳು ಗೆಲುವು ಸಾಧಿಸಲಿದ್ದಾರೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ವಿಶ್ವಾಸ ವ್ಯಕ್ತಪಡಿಸಿದ್ದಾರೆ. ಈಗಾಗಲೇ ರಾಜ್ಯಸಭೆ ಚುನಾವಣೆಯಲ್ಲಿ ಬಿಜೆಪಿ ಗೆಲುವು ಸಾಧಿಸಿದೆ. ಅದರಂತೆ ವಿಧಾನ ಪರಿಷತ್ ಚುನಾವಣೆ ಪ್ರಚಾರ ನಡೆಯುತ್ತಿದೆ. ಇಂದು ನಾನು ಬೆಳಗಾವಿ, ಹುಬ್ಬಳ್ಳಿಯಲ್ಲಿ ಅಭ್ಯರ್ಥಿಗಳ ಪರವಾಗಿ ಪ್ರಚಾರ ಮಾಡಲು ಬಂದಿದ್ದೇನೆ. ಈವರೆಗೆ ನಡೆದ ಚುನಾವಣೆ ಪ್ರಚಾರ ನೋಡಿದರೆ ನಮ್ಮ ಅಭ್ಯರ್ಥಿಗಳ ಗೆಲುವು ಸಾಧಿಸಲಿದ್ದಾರೆ ಎಂದರು.

ಮತದಾನಕ್ಕೆ ಇವುಗಳಲ್ಲಿ ಒಂದು ತಂದರೆ ಸಾಕು...

ಮೈಸೂರು: ಜೂನ್ 13ರಂದು ನಡೆಯಲಿರುವ ದಕ್ಷಿಣ ಪದವೀಧರ ಚುನಾವಣೆಯಲ್ಲಿ ಮತ ಚಲಾಯಿಸಲು ಈ ಕೆಳಕಂಡ ದಾಖಲಾತಿಗಳಲ್ಲಿ ಯಾವುದಾದರೂ ಒಂದನ್ನು ಗುರುತಿಗಾಗಿ ತರುವಂತೆ ಭಾರತ ಚುನಾವಣಾ ಆಯೋಗವು ಸೂಚಿಸಿದೆ. ನೋಂದಾಯಿತ ಪದವೀಧರ ಮತದಾರರು ಆಧಾರ್, ಡಿಎಲ್, ಪಾನ್ ಕಾರ್ಡ್, ಇಂಡಿಯನ್ ಪಾಸ್‌ಪೋರ್ಟ್, ಸೇವೆ ಗುರುತಿನ ಚೀಟಿ, ಸಂಸದ, ಶಾಸಕ, ವಿಧಾನಪರಿಷತ್ ಸದಸ್ಯರಿಗೆ ನೀಡಿರುವ ಅಧಿಕೃತ ಗುರುತಿನ ಚೀಟಿ, ಡಿಗ್ರಿ, ಡಿಪ್ಲೊಮಾ ಪ್ರಮಾಣ ಪತ್ರ, ಅಂಗವಿಕಲರ ಗುರುತಿನ ಚೀಟಿ ಸೇರಿದಂತೆ 10 ಬಗೆಯ ದಾಖಲಾತಿಗಳನ್ನು ಸಲ್ಲಿಸಿ ಮತದಾನ ಮಾಡಬಹುದೆಂದು ಆಯೋಗವು ತಿಳಿಸಿದೆ.

ದೇಶದ ನಾನಾ ಕಡೆ ಹಿಂಸಾಚಾರ

ರಾಜ್ಯದಲ್ಲಿ ಭಾರೀ ಮುನ್ನೆಚ್ಚರಿಕಾ ಕ್ರಮ

- ಸೂಕ್ಷ್ಮ ಪ್ರದೇಶಗಳಲ್ಲಿ ಕಟ್ಟೆಚ್ಚರಕ್ಕೆ ಸೂಚನೆ
- ಕೋಮು ಸೌಹಾರ್ದತಾ ಸಭೆ ನಡೆಸಲು ಸಲಹೆ

ಬೆಂಗಳೂರು, ಜೂ.11(ಕೆಎಂಶಿ)– ಪ್ರವಾದಿ ಮೊಹಮ್ಮದ್ ಪೈಗಂಬರ್ ಕುರಿತು ಬಿಜೆಪಿ ಮುಖಂಡರ ವಿವಾದಾತ್ಮಕ ಹೇಳಿಕೆ ಹಿನ್ನೆಲೆಯಲ್ಲಿ ರಾಜ್ಯದಲ್ಲೂ ಮುನ್ನೆಚ್ಚರಿಕಾ ಕ್ರಮ ಕೈಗೊಳ್ಳಲು ಪೊಲೀಸರು ಮುಂದಾಗಿದ್ದಾರೆ.

ಮುಖ್ಯಮಂತ್ರಿ ಬಸವರಾಜ್ ಬೊಮ್ಮಾಯಿ ಅವರ ಸೂಚನೆಯಂತೆ ಹಿರಿಯ ಅಧಿಕಾರಿಗಳು ಸಭೆ ನಡೆಸಿ, ರಾಜ್ಯದ ಸೂಕ್ಷ್ಮ ಪ್ರದೇಶಗಳಲ್ಲಿ ಕಟ್ಟೆಚ್ಚರ ಮತ್ತು ಬಿಗಿ ಬಂದೋಬಸ್ತ್ ಮಾಡಲು ತೀರ್ಮಾನ ಕೈಗೊಂಡಿದ್ದಾರೆ.


ಫೈಲ್ ಚಿತ್ರ


ನಗರ ಪೊಲೀಸ್ ಆಯುಕ್ತರು ಹಾಗೂ ಜಿಲ್ಲಾ ಪೊಲೀಸ್ ವರಿಷ್ಠರು ಆಯಾ ಪ್ರದೇಶದಲ್ಲಿ ಕೋಮು ಸೌಹಾರ್ದತೆ ಸಭೆ ನಡೆಸಬೇಕು ಹಾಗೂ ಮುನ್ನೆಚ್ಚರಿಕೆಯಾಗಿ ಗೂಂಡಾಗಳನ್ನು ವಶಕ್ಕೆ ತೆಗೆದುಕೊಳ್ಳುವಂತೆ ಸೂಚಿಸಿದ್ದಾರೆ.

ಕೋಮು ಗಲಭೆ ನಡೆಯುವ ಪ್ರದೇಶಗಳಲ್ಲಿ ದಿನವಿಡೀ ಬಂದೋಬಸ್ತ್ ವಹಿಸಬೇಕು ಹಾಗೂ ಮುನ್ನೆಚ್ಚರಿಕೆಯಾಗಿ ಕಿಡಿಗೇಡಿಗಳ ಮೇಲೆ ಕಣ್ಣಿಡುವಂತೆ ಸ್ಥಳೀಯ ಠಾಣೆಗಳಿಗೆ ಆದೇಶ ನೀಡಿರುವುದಲ್ಲದೆ, ಗುಪ್ತಚರ ವಿಭಾಗ ಪರಿಸ್ಥಿತಿಯ ಬಗ್ಗೆ ಜಿಲ್ಲಾಡಳಿತಕ್ಕೆ ಆಗಿಂದಾಗ್ಗೆ ಮಾಹಿತಿ ನೀಡುವಂತೆ ಹೇಳಲಾಗಿದೆ. ಪೈಗಂಬರ್ ಕುರಿತು ವಿವಾದಾತ್ಮಕ ಹೇಳಿಕೆ ನೀಡಿ, ಈಗಾಗಲೇ ಬಿಜೆಪಿಯಲ್ಲಿ ಅಮಾನತುಗೊಂಡಿರುವ ನೂಪುರ್ ಶರ್ಮಾ ಹಾಗೂ ನವೀನ್ ಜಿಂದಾಲ್ ಅವರನ್ನು ಬಂಧಿಸುವಂತೆ ಒತ್ತಾಯಿಸಿ ಹೊಸ ದೆಹಲಿ, ಉತ್ತರ ಪ್ರದೇಶ, ಕೊಲ್ಕತ್ತಾ, ಪಂಜಾಬ್, ಜಾರ್ಖಂಡ್, ತೆಲಂಗಾಣ ಸೇರಿದಂತೆ ದೇಶದ ಹಲವೆಡೆ ಮುಸ್ಲಿಮರು ಪ್ರತಿಭಟನೆ, ಮತ್ತೆ ಕೆಲವೆಡೆ ಇಂತಹ ಪ್ರತಿಭಟನೆ ಹಿಂಸಾಚಾರಕ್ಕೆ ತಿರುಗಿ, ಕಲ್ಲು ತೂರಾಟ ನಡೆದಿದೆ. ▶ 6ನೇ ಪುಟಕ್ಕೆ

> ರಾಜ್ಯದಲ್ಲಿ ಪ್ರಸ್ತುತ ಪರಿಸ್ಥಿತಿ ಶಾಂತಿಯುತವಾಗಿದ್ದು, ನಿಯಂತ್ರಣದಲ್ಲಿದೆ. ಪ್ರತಿಯೊಂದು ಪೊಲೀಸ್ ಠಾಣೆಯ ವ್ಯಾಪ್ತಿಯಲ್ಲಿ ಸೂಕ್ಷ್ಮ ಪ್ರದೇಶಗಳಿಗೆ ಪೊಲೀಸ್ ತುಕಡಿಗಳ ನಿಯೋಜಿಸಲಾಗಿದೆ. ಕೆಎಸ್‌ಆರ್‌ಪಿ ತುಕಡಿಗಳ ಚಲನೆ ಪ್ರಾರಂಭವಾಗಿದೆ. ಹುಬ್ಬಳ್ಳಿ ಪೊಲೀಸ್ ಆಯುಕ್ತರು ಮತ್ತು ಧಾರವಾಡ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗೆ ಸಲಹೆ, ಸೂಚನೆ ನೀಡಿದ್ದೇನೆ. ಎಲ್ಲಾ ಸಮುದಾಯಗಳ ನಾಯಕರೊಂದಿಗೆ ಮಾತುಕತೆ ನಡೆಸಿ, ಸೌಹಾರ್ದತೆ ಕಾಪಾಡುವಂತೆ ಪೊಲೀಸ್ ಇನ್ಸ್‌ಪೆಕ್ಟರ್‌ಗಳಿಗೆ ತಿಳಿಸಲಾಗಿದೆ.
> –ಬಸವರಾಜ ಬೊಮ್ಮಾಯಿ, ಸಿಎಂ.

ಮೈಸೂರಲ್ಲೂ ಕಟ್ಟೆಚ್ಚರ

ಮೈಸೂರು, ಜೂ. 11(ಆರ್‌ಕೆ)– ಪ್ರವಾದಿ ಮೊಹಮ್ಮದ್ ಪೈಗಂಬರ್ ಬಗ್ಗೆ ವಿವಾದಾತ್ಮಕ ಹೇಳಿಕೆ ನೀಡಿರುವ ನೂಪುರ್ ಶರ್ಮಾ ಮತ್ತು ನವೀನ್ ಜಿಂದಾಲ್‌ರನ್ನು ಬಂಧಿಸುವಂತೆ ಆಗ್ರಹಿಸಿ ಉತ್ತರ ಭಾರತದ ಕೆಲ ರಾಜ್ಯಗಳಲ್ಲಿ ಹಿಂಸಾಚಾರ ಭುಗಿಲೆದ್ದಿರುವ ಹಿನ್ನೆಲೆಯಲ್ಲಿ ಮುಂಜಾಗ್ರತೆಗಾಗಿ ಮೈಸೂರಿನಲ್ಲಿ ಶುಕ್ರವಾರ ಸಂಜೆಯಿಂದಲೇ ಭಾರೀ ಬಿಗಿ ಬಂದೋಬಸ್ತ್ ಮಾಡಲಾಗಿದೆ. ವಿವಾದಾತ್ಮಕ ಹೇಳಿಕೆ ಖಂಡಿಸಿ ಎಸ್‌ಡಿಪಿಐ ಕಾರ್ಯಕರ್ತರು ಶುಕ್ರವಾರ ಅಶೋಕ ರಸ್ತೆಯ ಮಿಲಾದ್‌ಬಾಗ್ ಪಾರ್ಕ್ ಬಳಿ ಭಾರೀ ಪ್ರತಿಭಟನೆ ನಡೆಸಿದ್ದರು. ಅಂದು ಸಂಜೆಯಿಂದಲೇ ಸೂಕ್ಷ್ಮ ಪ್ರದೇಶಗಳು ಸೇರಿದಂತೆ ಮೈಸೂರು ನಗರದಾದ್ಯಂತ ಹೆಚ್ಚುವರಿ ಸಿಬ್ಬಂದಿ ನಿಯೋಜಿಸಿ, ಕಟ್ಟೆಚ್ಚರ ವಹಿಸಲಾಗಿದೆ.


ಡಾ.ಚಂದ್ರಗುಪ್ತ

ಈ ಕುರಿತು 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯಿಸಿರುವ ನಗರ ಪೊಲೀಸ್ ಆಯುಕ್ತ ಡಾ.ಚಂದ್ರಗುಪ್ತ, ಮುಂಜಾಗ್ರತಾ ಕ್ರಮವಾಗಿ ಎಲ್ಲೆಡೆ ಹೆಚ್ಚುವರಿ ಪೊಲೀಸ್ ಸಿಬ್ಬಂದಿ ನಿಯೋಜಿಸಿ ಬಂದೋಬಸ್ತ್ ಮಾಡಿದ್ದೇವೆ. ಪ್ರತಿಭಟನೆಗೆ ಪ್ರಚೋದನೆ ನೀಡದಂತೆ ಸಂಘಟನೆಗಳ ಪ್ರಮುಖರಿಗೆ ಸಲಹೆ ನೀಡುತ್ತಿದ್ದೇವೆ ಎಂದರು. ಧಾರ್ಮಿಕ ಸ್ಥಳಗಳು, ಸೂಕ್ಷ್ಮ ಪ್ರದೇಶಗಳಲ್ಲಿ ಗಸ್ತು ತೀವ್ರಗೊಳಿಸಿ ನಿಗಾ ವಹಿಸಲಾಗಿದೆ. ಧಾರ್ಮಿಕ ಮುಖಂಡರೊಂದಿಗೆ ಆಯಾ ಠಾಣಾ ಇನ್ಸ್‌ಪೆಕ್ಟರ್‌ಗಳು ಸಭೆ ನಡೆಸಿ ▶ 6ನೇ ಪುಟಕ್ಕೆ

ನಕ್ಕರೆ ಅದೇ ಸ್ವರ್ಗ

ಗಿರಾಕಿ : ಏನಂಯ್ಯಾ ಒಂದು ಪ್ಲೇಟ್ ಇಡ್ಲಿ ತಗೊಂಡು ಬಾ ಅಂದರೆ ಪ್ಲೇಟಿನಲ್ಲಿ ಎರಡು ಚಮಚ ಮಾತ್ರಾ ಕಾಣ್ತಾ ಇದೆ.

ಮಾಣಿ : ಸಾರ್ ದಯವಿಟ್ಟು ಚಮಚ ಎತ್ತಿ ನೋಡಿ. ಇಡ್ಲಿ ಕಾಣಿಸುತ್ತೆ

ಮೈಸೂರು ಮಿತ್ರ

ಭಾನುವಾರ, 12 ಜೂನ್ 2022

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!

(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ. ಗೋವಿಂದೇಗೌಡ *M.A.*

ಅಮೃತವಾಹಿನಿ

ಈ ಜಗತ್ತಿನಲ್ಲಿ ಒಳಿತನ್ನು ಸಾಧಿಸಲು ಸಾಧ್ಯ ಎನ್ನುವ ನಂಬಿಕೆ ಇದ್ದರೆ, ಅದಕ್ಕೆ ಬೇಕಾದ ಎಲ್ಲಾ ಶಕ್ತಿಗಳೂ ತನ್ನಷ್ಟಕ್ಕೇ ಒದಗುತ್ತವೆ. – ಡೋರಾ ಆಲ್ಬರ್ಟ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು

ಒಗ್ಗಟ್ಟಿಲ್ಲದ ಊರಲ್ಲಿ ಒಪ್ಪತ್ತೂ ಇರಬೇಡ

ನಿಮ್ಮ ಪತ್ರಗಳು

ಯೋಗ ದಿನನಿತ್ಯ ಬದುಕಿನ ಒಂದು ಅಂಗವಾಗಲಿ

ಮಾನ್ಯರೆ,

ಇಂದಿನ ಒತ್ತಡದ ಬದುಕಿನ ಆಧುನಿಕ ಜೀವನ ಶೈಲಿ ಪದ್ಧತಿಯಿಂದ ಕೆಲವು ಮನುಷ್ಯರು ತಮಗೆ ಅರಿವಿಲ್ಲದೆ ಅನಾರೋಗ್ಯದ ಕಡೆಗೆ ವಾಲುತ್ತಿರುವುದು ಶೋಚನೀಯ. ಯಾವ ಪ್ರದೇಶದಲ್ಲಿ ಆಸ್ಪತ್ರೆಯ ಸಂಖ್ಯೆಗಳು ಕಡಿಮೆ ಇರುತ್ತದೆಯೋ ಆ ಪ್ರದೇಶದಲ್ಲಿ ಆರೋಗ್ಯವಂತರ ಸಂಖ್ಯೆ ಜಾಸ್ತಿ ಇರುತ್ತದೆ. ಎಲ್ಲಿ ಪೊಲೀಸ್ ಠಾಣೆಗಳ ಸಂಖ್ಯೆ ಕಡಿಮೆ ಇರುತ್ತದೆಯೋ ಆ ಪ್ರದೇಶದಲ್ಲಿ ಅಪರಾಧ ಪ್ರಕರಣಗಳು ಕಡಿಮೆ ಇರುತ್ತವೆ.

ಎಲ್ಲಿ ಯೋಗ ಕೇಂದ್ರಗಳು ಜಾಸ್ತಿ ಇರುತ್ತವೆಯೋ ಆ ಪ್ರದೇಶದಲ್ಲಿ ಮನುಷ್ಯನ ಆರೋಗ್ಯ ಮತ್ತು ಮಾನಸಿಕ ನೆಮ್ಮದಿ ಇರುತ್ತದೆ ಎನ್ನುವ ಮನೋಭಾವ ಇಂದು ಕೆಲವರಲ್ಲಿ ಮೊಳಕೆಯೊಡೆಯುತ್ತಿರುವುದು ಮತ್ತು ವಿದೇಶಿಗರು ಭಾರತವನ್ನು 'ವಿಶ್ವದ ಯೋಗ ಗುರು' ಎಂದು ಪರಿಗಣಿಸುತ್ತಿರುವುದು ಮತ್ತು ಬೇರೆ ಬೇರೆ ದೇಶಗಳಿಂದ ನೂರಾರು ಯೋಗ ವಿದ್ಯಾರ್ಥಿಗಳು ಭಾರತಕ್ಕೆ ಬಂದು ಯೋಗವನ್ನು ಕಲಿಯುತ್ತಿರುವುದು ಇದು ಎಲ್ಲರೂ ಹೆಮ್ಮೆ ಪಡಬೇಕಾದ ವಿಚಾರವೂ ಕೂಡ.

ಭಾರತದಲ್ಲಿ ಯೋಗವು ಕ್ರಿ.ಪೂ ಐದು ಸಾವಿರ ವರ್ಷಗಳ ಹಿಂದೆಯೇ ಇತ್ತು ಎಂದು ಇತಿಹಾಸ ಹೇಳುತ್ತದೆ ಹಾಗೂ ಪ್ರಚಲಿತವಾಗಿದೆ. ಇಂತಹ ಯೋಗದ ತವರಾದ ದೇಶದಲ್ಲಿ ಪಾಶ್ಚಾತ್ಯ ರಾಷ್ಟ್ರಗಳ ಆಧುನಿಕತೆಯ ಜೀವನಕ್ಕೆ ಮಾರುಹೋಗಿ ತಮ್ಮ ದಿನನಿತ್ಯದ ಜೀವನ ಶೈಲಿಯನ್ನು ಬದಲಿಸಿಕೊಂಡಿರುವ ಕೆಲವರು ಅನಾರೋಗ್ಯಕ್ಕೆ ತುತ್ತಾಗಿರುವ ಉದಾಹರಣೆಗಳು ಉಂಟು.

ದೇಹದ ಎಲ್ಲಾ ಅಂಗಾಂಗಗಳು ಸರಿಯಾಗಿ ಕಾರ್ಯ ನಿರ್ವಹಿಸಿ ದೇಹ ಸದಾ ಲವಲವಿಕೆಯಿಂದ ಚೈತನ್ಯದಿಂದ ಇರಬೇಕೆಂದರೆ ಯೋಗಾಸನ ಬಹಳ ಮುಖ್ಯ. ಮಾನಸಿಕ ಒತ್ತಡ, ಆತುರ, ಸಿಟ್ಟು, ಕೋಪ, ದ್ವೇಷ ಎಲ್ಲವನ್ನೂ ಕಡಿಮೆ ಮಾಡಿಕೊಳ್ಳಲು ಯೋಗಾಸನ ಅತ್ಯಗತ್ಯ. ಮನಸ್ಸು ಮತ್ತು ಏಕಾಗ್ರತೆ, ಮನಸ್ಸಿನ ಶಾಂತಿ, ಸುಸ್ಥಿರ ಮತ್ತು ದೈಹಿಕವಾಗಿ ಆರೋಗ್ಯವಾಗಿರಲು ಯೋಗಾಭ್ಯಾಸ ಮುಖ್ಯ. ಈ ಯೋಗಾಸನವನ್ನು ಜನತೆ ತಮ್ಮ ದಿನನಿತ್ಯ ಜೀವನದಲ್ಲಿ ಅಳವಡಿಸಿಕೊಂಡು ಆರೋಗ್ಯದ ಭಾಗ್ಯವಂತರಾಗಲಿ ಎಂಬುವುದು ನಮ್ಮೆಲ್ಲರ ಆಶಯ.

– ಕಂಗಾಣಿಸೋಮು ಪಿ.ಸಿ, ಕ್ಯಾತಮಾರನಹಳ್ಳಿ, ಮೈಸೂರು

ಸದ್ದಿಲ್ಲದೆ ಮತ್ತೆ ಏರುತ್ತಿರುವ ಕೋವಿಡ್

ಮಾನ್ಯರೆ,

ಕಳೆದ ಮೂರು ವರ್ಷಗಳಿಂದ ಜಗತ್ತಿನ ನಿದ್ದೆ ಕೆಡಿಸಿರುವ ಕೊರೊನಾ ಮಹಾಮಾರಿ ಇನ್ನೇನು ಹೊರಟೇ ಹೋಯಿತೆಂದು ಜನ ನೆಮ್ಮದಿಯಿಂದ ಇರುವಾಗ ಕೇರಳ ಮತ್ತು ಮಹಾರಾಷ್ಟ್ರ ರಾಜ್ಯಗಳಲ್ಲಿ ಕೊರೊನಾ ಪ್ರಕರಣಗಳಲ್ಲಿ ಏರಿಕೆಯಾಗಿರುವುದು ಕರ್ನಾಟಕ ರಾಜ್ಯಕ್ಕೆ ಎಚ್ಚರಿಕೆಯ ಗಂಟೆ ಬಾರಿಸಿದಂತೆ.

ದೇಶದಲ್ಲಿ ಒಂದೇ ದಿನ 4270 ಕೊರೊನಾ ಪ್ರಕರಣಗಳು ದಾಖಲಾಗಿದ್ದು, ದೇಶ ಇನ್ನೂ ಸಂಪೂರ್ಣವಾಗಿ ಕೊರೊನಾದಿಂದ ಮುಕ್ತವಾಗಿಲ್ಲದಿರುವುದು ತಿಳಿದುಬರುತ್ತದೆ. ವಿಶೇಷವಾಗಿ ಕೇರಳ ಮತ್ತು ಮಹಾರಾಷ್ಟ್ರ ರಾಜ್ಯಗಳಲ್ಲಿ ಸೋಂಕು ಹರಡುವ ಭೀತಿ ಹೆಚ್ಚಾಗಿದೆ.

ಮಹಾರಾಷ್ಟ್ರ ರಾಜ್ಯದ ಮುಂಬಯಿ ನಗರ ವಲಸಿಗರ ಸ್ವರ್ಗವಾಗಿದ್ದು, ಒಂದೇ ದಿನ 889 ಪ್ರಕರಣಗಳು ದಾಖಲಾಗಿರುವುದು ಸೋಂಕು ವ್ಯಾಪಕವಾಗಿ ಹರಡುವ ಸೂಚನೆ ನೀಡಿದೆ. ಮುಂಬಯಿ ನಗರಿಯಲ್ಲಿ ಸ್ಲಂಗಳ ಸಂಖ್ಯೆ ಕೂಡ ಹೆಚ್ಚಾಗಿದ್ದು, ಧಾರವಿಯಂತಹ ಸ್ಲಂಗಳಲ್ಲಿ ಒಂದು ಪ್ರಕರಣ ಕಾಣಿಸಿಕೊಂಡರೂ ಅದು ಎಲ್ಲೆಡೆ ವ್ಯಾಪಿಸಬಹುದಾಗಿದೆ.

ಕರ್ನಾಟಕ, ತಮಿಳುನಾಡು, ತೆಲಂಗಾಣ ರಾಜ್ಯಗಳಲ್ಲೂ ಕೊರೊನಾ ಪ್ರಕರಣಗಳಲ್ಲಿ ಏರಿಕೆ ಕಂಡುಬರುತ್ತಿದ್ದು, ಸೋಂಕು ಪತ್ತೆ, ಲಸಿಕಾಕರಣ, ಚಿಕಿತ್ಸೆಗಳನ್ನು ಹೆಚ್ಚು ಮಾಡಲು ಕೇಂದ್ರ ಸೂಚಿಸಿರುವುದು ಗಮನಾರ್ಹವಾಗಿದೆ. ದೇಶದಲ್ಲಿ ಕೊರೊನಾ ಪಾಸಿಟಿವ್ ದರ ಶೇಕಡ 1 ರಷ್ಟು ಹೆಚ್ಚಾಗಿದ್ದು ಎಚ್ಚರಿಕೆ ವಹಿಸುವುದು ಅಗತ್ಯವಾಗಿದೆ.

ಸಾರ್ವಜನಿಕ ಸ್ಥಳಗಳಲ್ಲಿ ಮಾಸ್ಕ್ ಧರಿಸುವುದು, ಸ್ಯಾನಿಟೈಸರ್ ಬಳಸುವುದು, ಬೂಸ್ಟರ್ ಡೋಸ್ ಲಸಿಕೆ ಹಾಕಿಸಿಕೊಳ್ಳುವುದು, ಸಾಮಾಜಿಕ ಅಂತರ ಕಾಪಾಡಿಕೊಳ್ಳುವ ಮೂಲಕ ಕೊರೊನಾ ತಡೆಗಟ್ಟಬಹುದಾಗಿದೆ. ಆದರೆ ಕೊರೊನಾ ಉತ್ತುಂಗದಲ್ಲಿದ್ದ ಸಮಯದಲ್ಲಿ ಮಾತ್ರ ಈ ನಿಯಮಗಳನ್ನು ಪಾಲಿಸುವ ಜನ, ಸ್ವಲ್ಪ ಕೊರೊನಾ ಪ್ರಕರಣಗಳು ಇಳಿಕೆಯಾದರೆ ಈ ನಿಯಮಗಳನ್ನು ಗಾಳಿಗೆ ತೂರುತ್ತಾರೆ.

ಜಪಾನ್ ದೇಶದಲ್ಲಿ ವರ್ಷಪೂರ್ತಿ ಸಾರ್ವಜನಿಕ ಸ್ಥಳಗಳಲ್ಲಿ ಮಾಸ್ಕ್ ಬಳಸಲಾಗುತ್ತದೆ. ಮಾಸ್ಕ್‌ಗಳನ್ನು ಬಳಸಿದರೆ ಕೊರೊನಾ ಜೊತೆಗೆ ಧೂಳು, ವಾಹನಗಳ ಹೊಗೆಯಿಂದ ಎದುರಾಗಬಹುದಾದ ಶ್ವಾಸಕೋಶದ ಕಾಯಿಲೆಗಳಿಂದ ಸಹ ಮುಕ್ತಿ ಪಡೆಯಬಹುದಾಗಿದೆ.

–ರಾಸುಮ ಭಟ್, ಚಿಕ್ಕಮಗಳೂರು.

ಫುಟ್‌ಪಾತ್ ಅಲ್ಲ ಈಗ ರಸ್ತೆ ವ್ಯಾಪಾರ!



ಮಾನ್ಯರೆ,

ಇದುವರೆಗೆ ಫುಟ್‌ಪಾತ್ ಅತಿಕ್ರಮಿಸಿ ಪಾದಚಾರಿಗಳನ್ನು ರಸ್ತೆಗಿಳಿಸಿ ಅನಾಹುತಕ್ಕೆ ಆಸ್ಪದ ಮಾಡಿಕೊಡುತ್ತಿದ್ದ ಮೈಸೂರು ನಗರ ಪಾಲಿಕೆ ಸಿಬ್ಬಂದಿ ಹಾಗೂ ಮೈಸೂರು ನಗರ ಸಂಚಾರಿ ಪೊಲೀಸರು ಈಗ ವಾಹನ ಚಾಲಕರಿಗೂ ಆತಂಕ ತಂದೊಡ್ಡಿದ್ದಾರೆ. ಇದುವರೆಗೆ ಫುಟ್‌ಪಾತ್ ಅತಿಕ್ರಮಿಸಿ ನಡೆಯುತ್ತಿದ್ದ ವ್ಯಾಪಾರ ಈಗ ರಸ್ತೆಗೆ ಬಂದಿದೆ. ಮೈಸೂರು ವಿಶ್ವವಿದ್ಯಾನಿಲಯ, ಮಹಾರಾಜ ಕಾಲೇಜು ಹಿಂಭಾಗ ಬುಲೇವಾರ್ಡ್ ರಸ್ತೆ, ಕೋರ್ಟ್ ಮುಂಭಾಗ, ಸಯ್ಯಾಜಿರಾವ್ ರಸ್ತೆ ಹೀಗೆ ಎಲ್ಲಿ ಹೋದರೂ ರಸ್ತೆಯಲ್ಲೇ ಗಾಡಿಗಳ ನಿಲ್ಲಿಸಿಕೊಂಡು ರಾಜಾರೋಷವಾಗಿ ಹಣ್ಣು ಹಂಪಲು, ಆಟಿಕೆ, ಎಳನೀರು ಹೀಗೆ ನಾನಾ ಪದಾರ್ಥಗಳ ವ್ಯಾಪಾರ ನಡೆಸಲಾಗುತ್ತಿದೆ. ಪದಾರ್ಥಗಳ ಖರೀದಿಸಲು ಜನ ಮುಗಿಬಿದ್ದು, ರಸ್ತೆಯಲ್ಲಿ ವಾಹನ ಚಾಲಕರು ಪರದಾಡುವ ಪರಿಸ್ಥಿತಿ ತಂದಿಟ್ಟಿದ್ದಾರೆ. ಮೊದಲೇ ವಾಹನ ಸಂಖ್ಯೆ ದಿನೇ ದಿನೆ ಜಾಸ್ತಿಯಾಗುತ್ತಿದೆ. ಪಾದಚಾರಿಗಳ ಪರಿಸ್ಥಿತಿಯಂತೂ ಹೇಳತೀರದಾಗಿದೆ. ಇದರ ಬಗ್ಗೆ ಯಾರಿಗೆ ಹೇಳುವುದು? ಏನಾದರೂ ಅನಾಹುತ ಸಂಭವಿಸಿ ಪ್ರಾಣಹಾನಿ ಉಂಟಾದರೆ ಹೊಣೆ ಯಾರು?

–ರಂಗನಾಥ್, ಚಾಮರಾಜಪುರಂ, ಮೈಸೂರು.

ಕಾಲ–ಕ್ಕೆ (ನಿಗೆ) ಶರಣು!

ಮಾನ್ಯರೆ,

ಇತ್ತೀಚೆಗೆ ನನ್ನ ಇಬ್ಬರು ಶಿಷ್ಯ ಮಿತ್ರರು–ಸಹಪಾಠಿಗಳು ತೀರಿಕೊಂಡರು. ಪ್ರೊ. ಕೆ. ಭೈರವಮೂರ್ತಿ ಮತ್ತು ಡಾ. ತೀ.ನಂ. ಶಂಕರನಾರಾಯಣ (ಒಬ್ಬರು ಮೈಸೂರಿನಲ್ಲಿ, ಮತ್ತೊಬ್ಬರು ಶಿವಮೊಗ್ಗದಲ್ಲಿ). ಇಬ್ಬರ ಸಾಧನೆಯೂ ದೊಡ್ಡದು. (ಭೈರವ, ಶಂಕರ ಒಂದೇ ಶಕ್ತಿಯ ಎರಡು ರೂಪಗಳಷ್ಟೆ).

ಒಂದು ಗಮನಾರ್ಹ ಸಂಗತಿಯೆಂದರೆ, ಅವರಿಗಿಂತ ಮೊದಲೇ ಅವರ ಪತ್ನಿಯರು ಗತಿಸಿದ್ದರು. (ಪ್ರೊ. ನಿಸಾರ್ ಅಹಮದರ ವಿಷಯವನ್ನು ಸ್ಮರಿಸಬಹುದು). ಬಹುಶಃ ಪತ್ನಿ ತೀರಿಕೊಂಡ ಮೇಲೆ ಪತಿಯ ಚೈತನ್ಯ ಅರ್ಧ ಉಡುಗುತ್ತದೆ ! ಆದರೆ ಅದನ್ನೆಲ್ಲ ಕಟ್ಟಿಕೊಂಡು ವಿಧಿಗೆ ಏನಾಗಬೇಕು? "ಕಾಲಾಯ ತಸ್ಮೈ ನಮಃ" (ಕಾಲೋ ಜಗದ್ಭಕ್ಷಕಃ:" ಎಂಬುದನ್ನು ಸ್ಮರಿಸೋಣ).

–ಸಿಪಿಕೆ, ದತ್ತಪೀಠ ಆಸ್ಥಾನ ವಿದ್ವಾನ್.



ಡಾ. ವಿ. ರಂಗನಾಥ್

ಲೇಖಕರು ಹಾಗೂ ನಿವೃತ್ತ ತಹಸೀಲ್ದಾರರು

ಮೊ : 94482 08746 / 97421 79000

ಚಿಂತನೆ

ಸವಕಲಾಗುತ್ತಿವೆಯೇ ಮೌಲ್ಯಗಳು?

ಇತ್ತೀಚೆಗೆ ನನ್ನ ಸ್ನೇಹಿತರೊಬ್ಬರನ್ನು ಭೇಟಿಯಾದಾಗ ಅವರು ತಾವು ಭಾಗವಹಿಸಿದ್ದ ಒಂದು ಸಭೆಯ ವಿಷಯ ಪ್ರಸ್ತಾಪಿಸಿದರು. ಆ ಸಭೆಗೆ ಸಚಿವರು ಬರುವವರಿದ್ದು, ಸಂಘಟಕರು ಇವರನ್ನು ಆಹ್ವಾನಿಸಿದ್ದರು. ಸಚಿವರು ಬರುತ್ತಿರುವುದರಿಂದ ಹಾಗೂ ಸಂಘಟಕರಿಗೆ ಏನೋ ಅನುಕೂಲವಾಗಬೇಕಾದ್ದರಿಂದ, ತಮಗೆ ಬೇಕಾದವರನ್ನೇ ಸಭೆಗೆ ಆಹ್ವಾನಿಸಿದ್ದರು. ಸಚಿವರ ಸಭೆ ಎಂದ ಮೇಲೆ ಕಡಿಮೆ ಜನ ಇದ್ದರೆ ಏನು ಚೆನ್ನ? ಅದು ಸಂಘಟಕರ ಘನತೆ ಪ್ರಶ್ನೆಯೂ ಅಲ್ಲವೆ? ಸಾಕಷ್ಟು ಜನರನ್ನು ಕರೆದಿದ್ದರು. ಕರೆಯುವಾಗ ಎಚ್ಚರಿಕೆಯನ್ನೂ ವಹಿಸಿದ್ದರು. ಸ್ವಲ್ಪ ಗಟ್ಟಿಯಾಗಿ ಮಾತನಾಡುವವರು, ಏರು ಧನಿಯಲ್ಲಿ ಮಾತನಾಡುವವರನ್ನು ಸಭೆಗೆ ಕರೆಯದಿರುವ ಎಚ್ಚರಿಕೆ ವಹಿಸಿದ್ದರು. ಅಲ್ಲದೇ ಬರುವವರಲ್ಲೂ ಅವರು ಮನವಿ ಮಾಡಿಕೊಂಡಿದ್ದರು; ಸಚಿವರಿಗೆ ಇರಿಸು–ಮುರಿಸಾಗದಂತೆ ಮಾತನಾಡಬೇಕು, ಯಾವುದೇ ಚರ್ಚೆಗಳಿಗೆ ಅವಕಾಶವಿಲ್ಲ, ಸಮಸ್ಯೆ ಹೇಳುವುದಾದರೂ ಸೌಮ್ಯ ಭಾಷೆಯಲ್ಲಿ ಹೇಳಬೇಕು ಇತ್ಯಾದಿ ಸೂಚನೆ ನೀಡಿದ್ದರು. ಅದರಂತೆ ಸಚಿವರು ಬಂದರು, ಸಭೆ ನಡೆಯಿತು. ಸಂಘಟಕರು ಸಭೆ ಯಶಸ್ವಿಯಾಯಿತು ಎಂದು ತಮ್ಮ ಬೆನ್ನನ್ನು ತಾವೇ ತಟ್ಟಿಕೊಂಡರು.

ಇದು ಒಂದು ಸಭೆಯ ಸಂಗತಿಯಲ್ಲ. ಸಚಿವರು ಬರುತ್ತಾರೆ ಎಂದಾದಾಗ ಸಂಘಟಕರು ಸಾಮಾನ್ಯವಾಗಿ ಇಂತಹ ಎಚ್ಚರಿಕೆ ವಹಿಸುತ್ತಾರೆ. ಅನೇಕ ಸಲ, ಸರ್ಕಾರಿ ಕಾರ್ಯಕ್ರಮಗಳಲ್ಲೂ ಇಂತಹ ಎಚ್ಚರಿಕೆ ವಹಿಸಲಾಗುತ್ತದೆ. ಸಚಿವರಿಗೆ ಮುಜುಗರವಾಗುವಂತಹ ಪ್ರಶ್ನೆ ಕೇಳುವವರನ್ನು ಆದಷ್ಟು ದೂರ ಇರಿಸಲಾಗುತ್ತದೆ. ಇಷ್ಟಾಗಿಯೂ ಸಭೆಯಲ್ಲಿ ಸಚಿವರಿಗೆ ಇರುಸು–ಮುರಿಸು ಉಂಟುಮಾಡುವಂತಹ ಪ್ರಶ್ನೆ ಕೇಳಿದರೆ ಅವರನ್ನು ಹೊರಗೆ ಸಾಗ ಹಾಕುವ ಪ್ರಯತ್ನವನ್ನು ಮಾಡಲಾಗುತ್ತದೆ, ಅಲ್ಲದೇ ಮುಂದಿನ ಸಭೆಗಳಿಗೆ ಅವರಿಗೆ ಆಹ್ವಾನವೇ ಇರುವುದಿಲ್ಲ.

ಇದು ಮೇಲುನೋಟಕ್ಕೆ ಸರಿ ಎನಿಸಿಬಿಡುತ್ತದೆ. ಆದರೆ ಸಚಿವರ/ಸರ್ಕಾರಗಳ ದೃಷ್ಟಿಯಿಂದ ಇದು ಸರಿಯೇ?ಎಂಬ ಪ್ರಶ್ನೆ ಉದ್ಭವಿಸುತ್ತದೆ. ಯಾವುದೇ ಒಂದು ಸಭೆ ಕರೆದರೆ, ಅದರಲ್ಲಿ ಯಾವ ವಿಷಯ ಚರ್ಚೆಯಾಗುವುದೋ ಆ ವಿಷಯದ ಸಾಧಕ ಬಾಧಕಗಳ ಬಗ್ಗೆ ಗಹನವಾದ ಚರ್ಚೆ ಮಾಡಿ, ಯಾವುದು ಸರಿ ಎನಿಸುವುದೋ ಅಂತಹ ನಿರ್ಣಯ ತೆಗೆದುಕೊಳ್ಳುವುದು ಸೂಕ್ತ. ನಮಗೆ ಒಂದು ನಂಬಿಕೆ ಎಂದರೆ ಶಾಸಕರು ಅಥವಾ ಸಚಿವರು ಬಹಳ ಬುದ್ಧಿವಂತರು. ಅವರು ಹೇಳುವುದನ್ನು ನಾವು ಪಾಲಿಸುವುದು ಒಳ್ಳೆಯದು ಎಂಬ ತೀರ್ಮಾನಕ್ಕೆ ಬರುತ್ತಾರೆ. ಹಾಗಾಗಿ ಆ ಸಭೆಗಳಲ್ಲಿ ಸಾಧ್ಯವಾದಷ್ಟೂ ಚರ್ಚೆ ಆಗದಂತೆ ಎಚ್ಚರ ವಹಿಸಲಾಗುತ್ತದೆ. ಶಾಸಕರು/ಸಚಿವರು ಹೇಳಿದ ಮೇಲೆ ಮತ್ತೇಕೆ ಚರ್ಚೆ ಮಾಡಬೇಕು? ಎಂಬ ಮನೋಭಾವವನ್ನೂ ಕಾಣುತ್ತೇವೆ. ಆದರೆ ನಿಜವಾಗಿ ಜನಪ್ರತಿನಿಧಿಗಳಿಗೆ ಸಮಸ್ಯೆಯ ವಸ್ತು ಸ್ಥಿತಿ, ಅದರ ಅರಿವು ಬೇಕಾಗುತ್ತದೆ. ಅವರಿಗೆ ಕೋಲೆ ಬಸವನಂತೆ ತಲೆಯಾಡಿಸುವವರಿಗಿಂತ ವಿಷಯ ಅರಿತವರು, ವಸ್ತುಸ್ಥಿತಿ ಆಧರಿಸಿ ಸಲಹೆ ನೀಡುವವರು ಬೇಕಾಗುತ್ತಾರೆ. ಇದು ಅವರ ಜ್ಞಾನ ಹೆಚ್ಚಿಸುತ್ತದೆ.

ನನ್ನ ಸ್ನೇಹಿತರು ಹೇಳಿದಂತೆ ಅಂದಿನ ಸಭೆಗೆ ಇವರನ್ನು ಕರೆದಿದ್ದರೂ, ಇವರು ಸ್ವಲ್ಪ ನಿಷ್ಠುರವಾಗಿ ಮಾತನಾಡುತ್ತಾರೆ ಎಂಬ ಕಾರಣಕ್ಕೆ ಅವರಿಗೆ ಮಾತನಾಡುವ ಅವಕಾಶವನ್ನೇ ನೀಡಲಿಲ್ಲ. ಅವರು ಹೇಳುವಂತೆ ಎಲ್ಲರೂ ಸೇರಿ ಸಚಿವರ ದಾರಿ ತಪ್ಪಿಸುತ್ತಾರೆ. ಸಚಿವರಿಗೆ ಯಾವ ವಿಷಯ ಗೊತ್ತಾಗಬೇಕೋ ಅದು ಗೊತ್ತಾಗುವುದೇ ಇಲ್ಲ. ಅವರು ತಿಳಿದುಕೊಂಡಿದ್ದೇ ಸರಿ ಎಂಬಂತೆ ಆಗಿಬಿಡುತ್ತದೆ. ಇದರಿಂದ ಅವರು ಸಭೆ ಕರೆದಿದ್ದ ಉದ್ದೇಶವೇ ವಿಫಲವಾಯಿತು ಎಂದು ಬೇಸರಿಸಿಕೊಂಡರು. ಮಂತ್ರಿಗಳಾಗುವವರಿಗೆ ಅವರಿಗೆ ವಹಿಸುವ ಖಾತೆಯ ಬಗ್ಗೆ ಸಂಪೂರ್ಣ ಮಾಹಿತಿ ಇರಬೇಕು. ಕೃಷಿಯೇ ಗೊತ್ತಿಲ್ಲದವರಿಗೆ ಕೃಷಿ ಇಲಾಖೆ ನೀಡಿದಂತೆ, ಹಣಕಾಸಿನ ಅರಿವಿರದವರಿಗೆ ಹಣಕಾಸು ಇಲಾಖೆ ನೀಡಿದಂತೆ, ಶಿಕ್ಷಣದ ಗಂಧಗಾಳಿ ಇಲ್ಲದವರಿಗೆ ಶಿಕ್ಷಣ ಖಾತೆ ನೀಡುವಂತಹ ಪ್ರಸಂಗಗಳೇ ನಮ್ಮ ದೇಶದೆಲ್ಲೆಡೆ ಕಂಡು ಬರುತ್ತಿವೆ. ಒಟ್ಟಿನಲ್ಲಿ ಅವರು ಮಂತ್ರಿಯಾಗ ಬೇಕು, ಅವರಿಗೆ ಯಾವುದಾದರೂ ಖಾತೆ ನೀಡಬೇಕು, ಹಾಗೆ ಮಾಡುವುದರಿಂದ ಅವರಿಂದ ಸರ್ಕಾರಕ್ಕೆ ತೊಂದರೆಯಾಗುವುದಿಲ್ಲ, ಅವರ ಸಮುದಾಯ ತೃಪ್ತಿಗೊಂಡರೆ ಸಾಕು ಎಂಬ ಭಾವನೆಯೇ ಕಂಡು ಬರುತ್ತಿದೆ. ಇಂತಹವರಿಂದಾಗಿ ಯಾವುದೇ ನಿರೀಕ್ಷಿತ ಅಭಿವೃದ್ಧಿ ಆಗುವುದಿಲ್ಲ. ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಲ್ಲಿ ಸಾಕಷ್ಟು ಜನ ಸಚಿವರಿದ್ದಾರೆ. ಅವರಲ್ಲಿ ಕೆಲವರಷ್ಟೇ ಕ್ರಿಯಾಶೀಲರಾಗಿರುತ್ತಾರೆ. ಅವರ ಇಲಾಖೆಗಳಿಗೆ ಸಂಬಂಧಿಸಿದ ವಿಷಯಗಳಲ್ಲಿ ಅಪಾರ ಅನುಭವ ಹೊಂದಿರುತ್ತಾರೆ. ಅಂತಹವರ ಕೆಲಸಗಳು ಜನಸಾಮಾನ್ಯರ ಗಮನಕ್ಕೆ ಬರುತ್ತವೆ. ಅವರ ಬಗ್ಗೆ ಪ್ರಚಾರವೂ ಆಗುತ್ತದೆ. ಉಳಿದ ಸಚಿವರು ಏನು ಮಾಡುತ್ತಿದ್ದಾರೆ? ಅವರು ತಮ್ಮ ಇಲಾಖಾ ಕೆಲಸಗಳನ್ನು ನಿರ್ವಹಿಸುತ್ತಿದ್ದಾರೆಯೇ ಎಂಬುದೇ ಜನರ ಗಮನಕ್ಕೆ ಬರುವುದಿಲ್ಲ. ಮತ್ತಷ್ಟು ಸಚಿವರು ಅವರ ಕ್ಷೇತ್ರದ ಕಾರ್ಯಕ್ರಮ ಬಿಟ್ಟರೆ ಉಳಿದ ಕಡೆಗೆ ಪ್ರವಾಸವನ್ನೇ ಮಾಡುವುದಿಲ್ಲ. ಅವರಿಗೆ ಇಡೀ ದೇಶದ ಅಥವಾ ರಾಜ್ಯದ ಜವಾಬ್ದಾರಿ ಇರುತ್ತದೆ. ಅವರು ಮಾತ್ರ ತಮ್ಮ ವ್ಯಾಪ್ತಿಯನ್ನೇ ಅರಿಯದೇ ತಮ್ಮ ಕ್ಷೇತ್ರಕ್ಕಷ್ಟೇ ಸೀಮಿತರಾಗುತ್ತಾರೆ. ಉತ್ತರಭಾರತ ಅಥವಾ ಉತ್ತರಕರ್ನಾಟಕದ ಸಚಿವರು ದಕ್ಷಿಣ ಭಾರತ ಅಥವಾ ದಕ್ಷಿಣ ಕರ್ನಾಟಕದಲ್ಲಿ ಕಾಣಿಸಿಕೊಳ್ಳುವುದೇ ಅಪರೂಪ. ಹಾಗಾಗಿ ಇಂತಹವರು ನಮ್ಮ ಸಚಿವರು ಎಂಬುದೇ ಜನರಿಗೆ ಗೊತ್ತಾಗುವುದಿಲ್ಲ. ಸರ್ಕಾರಿ ನೌಕರರು ಕೆಲಸಕ್ಕೆ ಸೇರಿದಾಗ ಅವರಿಗೆ ಸಾಮಾನ್ಯ ಬುನಾದಿ ಎಂದು ಎರಡು ತಿಂಗಳಷ್ಟು ತರಬೇತಿ ನೀಡಿ ಆನಂತರ ಜವಾಬ್ದಾರಿ ವಹಿಸಲಾಗುತ್ತದೆ. ಅದೇ ರೀತಿ ಐಎಎಸ್, ಕೆಎಎಸ್ ಪಾಸು ಮಾಡಿದವರಿಗೂ ತೀಕ್ಷ್ಣವಾದ ತರಬೇತಿಗಳಿರುತ್ತವೆ. ಅವರು ತರಬೇತಿ ಮುಗಿಸಿದ ನಂತರ ಅವರಿಗೆ ಸಣ್ಣ ಹುದ್ದೆಯಿಂದ ಆರಂಭಿಸಿ ನಂತರ ದೊಡ್ಡ ಹುದ್ದೆ ನಿರ್ವಹಣೆಯ ಹೊಣೆ ನೀಡಲಾಗುತ್ತದೆ. ಇಂತಹುದು ಅಪೇಕ್ಷಣೀಯ. ಆದರೆ ಇದು ಮಂತ್ರಿಗಳಿಗೆ ಏಕೆ ಅನ್ವಯಿಸುವುದಿಲ್ಲ ಎಂಬುದು ನಿಗೂಢವಾದ ಪ್ರಶ್ನೆ. ಕನಿಷ್ಠ ಮಂತ್ರಿಗಳಾದ ನಂತರವಾದರೂ ಅವರಿಗೆ ಅವರ ಇಲಾಖೆಯ ಬಗ್ಗೆ ನುರಿತವರಿಂದ ತರಬೇತಿ ಏಕೆ ಕೊಡಿಸಲಾಗುವುದಿಲ್ಲ? ಎಂಬುದೂ ಉತ್ತರ ಸಿಗದ ಪ್ರಶ್ನೆಯಾಗಿದೆ.

> “ಸರ್ಕಾರಿ ನೌಕರರು ಕೆಲಸಕ್ಕೆ ಸೇರಿದಾಗ ಅವರಿಗೆ ಸಾಮಾನ್ಯ ಬುನಾದಿ ಎಂದು ಎರಡು ತಿಂಗಳಷ್ಟು ತರಬೇತಿ ನೀಡಿ ಆನಂತರ ಜವಾಬ್ದಾರಿ ವಹಿಸಲಾಗುತ್ತದೆ. ಅದೇ ರೀತಿ ಐಎಎಸ್, ಕೆಎಎಸ್ ಪಾಸು ಮಾಡಿದವರಿಗೂ ತೀಕ್ಷ್ಣವಾದ ತರಬೇತಿಗಳಿರುತ್ತವೆ. ಅವರು ತರಬೇತಿ ಮುಗಿಸಿದ ನಂತರ ಅವರಿಗೆ ಸಣ್ಣ ಹುದ್ದೆಯಿಂದ ಆರಂಭಿಸಿ ನಂತರ ದೊಡ್ಡ ಹುದ್ದೆ ನಿರ್ವಹಣೆಯ ಹೊಣೆ ನೀಡಲಾಗುತ್ತದೆ. ಇಂತಹುದು ಅಪೇಕ್ಷಣೀಯ. ಆದರೆ ಇದು ಮಂತ್ರಿಗಳಿಗೆ ಏಕೆ ಅನ್ವಯಿಸುವುದಿಲ್ಲ ಎಂಬುದು ನಿಗೂಢವಾದ ಪ್ರಶ್ನೆ

ಇದಕ್ಕೆಲ್ಲಾ ಮಂತ್ರಿಗಳನ್ನೇ ದೂಷಿಸುವುದು ಪೂರ್ಣವಾಗಿ ಸರಿ ಎನ್ನಿಸುವುದಿಲ್ಲ. ಅವರು ತಮಗೆ ನೀಡಿದ ಇಲಾಖೆಯ ಬಗ್ಗೆ ತಿಳಿದುಕೊಳ್ಳಲು ಬಯಸುತ್ತಾರೆ, ಅದಕ್ಕಾಗಿ ಸಮಾಲೋಚನಾ ಸಭೆಗಳನ್ನೂ ಮಾಡುತ್ತಾರೆ. ಆದರೆ ಮೇಲೆ ಹೇಳಿದಂತೆ ಸಂಘಟಕರು ಅವರನ್ನು ಓಲೈಸುವ ಆತುರದಲ್ಲಿ ಅವರಿಗೆ ವಿಷಯವೇ ಅರ್ಥವಾಗದಂತೆ ಮಾಡಿಬಿಡುತ್ತಾರೆ. ಈ ಬಗ್ಗೆ ಮಂತ್ರಿಗಳು ಎಚ್ಚರಿಕೆ ವಹಿಸಬೇಕಾಗುತ್ತದೆ. ಮೊದಲನೆಯದಾಗಿ ಅವರು ಹೊಗಳುಭಟರನ್ನು ದೂರವಿಡಬೇಕು. ತಾವೇ ಕೆಲವರನ್ನು ಆಹ್ವಾನಿಸಿ ವಿಷಯ ತಿಳಿದುಕೊಳ್ಳುವ ಪ್ರಯತ್ನ ಮಾಡಬೇಕು. ಮೊದಲನೆಯದಾಗಿ ಅಂತಹವರಿಗೆ ಇಲಾಖೆಯ ಆಳವಾದ ಅರಿವಿರಬೇಕು. ಇಂತಹವರಿಂದ ಸಚಿವರಿಗೆ ಸಮಸ್ಯೆಗಳ ಅರಿವು ಮೂಡಬೇಕು. ಹಾಗಾದಾಗ ಅವರು ಯಾವುದೇ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಬಹುದು, ಯಶಸ್ವಿಯೂ ಆಗಬಹುದು.

ಇದು ಕೇವಲ ಮಂತ್ರಿಗಳಿಗೆ ಮಾತ್ರ ಅನ್ವಯಿಸುವುದಿಲ್ಲ. ಇಲಾಖಾ ಅಧಿಕಾರಿಗಳು, ನಿಗಮ ಮಂಡಳಿಗಳ ಅಧ್ಯಕ್ಷರಿಗೂ ಇದು ಅನ್ವಯವಾಗುತ್ತದೆ. ಅವರು ಮುಕ್ತವಾಗಿ ಮಾತುಕತೆ ನಡೆಸಬೇಕು. ಹೆಚ್ಚಾಗಿ ಶಾಸಕರು ಇಂತಹ ಎಚ್ಚರಿಕೆ ವಹಿಸಬೇಕಾಗುತ್ತದೆ.

ಹಿಂದೆಲ್ಲಾ ನಮ್ಮ ಗುರುಕುಲ ಪದ್ಧತಿ ಇದ್ದಾಗ ಅಲ್ಲಿ ವಿದ್ಯಾಭ್ಯಾಸ ಮಾಡುವ ಮಕ್ಕಳು ರಾಜನ ಮಗನಾದರೂ ಸರಿ, ಸೇವಕನ ಮಗನಾದರೂ ಸರಿ ಅವರೆಲ್ಲರದೂ ಸಮಾನ ಕಲಿಕೆ. ಅಲ್ಲಿ ಅವರಿಗೆ ಜೀವನದ ಪಾಠ ಸಿಗುತ್ತಿತ್ತು. ಅವರು ದೊಡ್ಡವರಾದ ನಂತರ ಅವರ ಜೀವನ ಪರ್ಯಂತ ಇಂತಹ ಪಾಠಗಳು ಮಾರ್ಗದರ್ಶಿಗಳಾಗುತ್ತಿತ್ತು. ಆ ಪದ್ಧತಿ ಬರಬೇಕು, ಅಂದರೆ ಅದು ಕೇವಲ ಶಿಕ್ಷಣಕ್ಕೆ ಸಂಬಂಧಿಸಿದ್ದು ಎಂದಲ್ಲ, ತನಗೆ ಅಧಿಕಾರ ದೊರೆತಾಗ ಎಲ್ಲರೊಡನೆಯೂ ಬೆರೆತು ಆಡಳಿತದ ಅನುಭವ ಪಡೆಯಬೇಕು ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು.

ಮತ್ತೊಂದು ಗಮನಿಸಬೇಕಾದ ಅಂಶವೆಂದರೆ ಇಂತಹವರು ಮಾರ್ಗದರ್ಶಿಗಳಂತೆ ಕೆಲಸ ಮಾಡಬೇಕು, ಅವರಿಗೆ ಕೆಲಸ ಮಾಡಲು ಸವಲತ್ತು ನೀಡಲಾಗಿದೆಯೇ ಹೊರತು ಅದರ ದುರುಪಯೋಗ ಪಡಿಸಿಕೊಳ್ಳಲು ಅಲ್ಲ. ಅಂತಹವರು ಮಾಜಿಗಳಾದಾಗ ಪಶ್ಚಾತ್ತಾಪ ಪಡುವುದನ್ನು ನೋಡಿದ್ದೇವೆ. ನನಗೆ ಅಧಿಕಾರವಿದ್ದಾಗ ಎಷ್ಟೊಂದು ಕೆಲಸ ಮಾಡಬಹುದಿತ್ತು ಎಂಬ ಹತಾಶ ಭಾವ ಅವರಲ್ಲಿ ಮೂಡಿರುತ್ತದೆ. ಇಂತಹ ಅನಿಸಿಕೆಗಳು ಅಧಿಕಾರ ಇರುವಾಗಲೇ ಬಂದರೆ ಅವರು ಒಂದಷ್ಟಾದರೂ ಸಾರ್ಥಕ ಕೆಲಸ ಮಾಡಬಹುದು.

ಇತ್ತೀಚೆಗೆ ಓದಿದ ಒಂದು ಘಟನೆಯನ್ನು ಈ ಸಂದರ್ಭದಲ್ಲಿ ನೆನಪಿಸಿಕೊಳ್ಳಬಯಸುತ್ತೇನೆ. ಒಮ್ಮೆ ಬೆಂಗಳೂರಿನ ಒಬ್ಬ ಅಧಿಕಾರಿ ಸ್ವೀಡನ್ನಿಗೆ ಅವರ ಇಲಾಖಾ ಕೆಲಸದ ನಿಮಿತ್ತ ಹೋಗಬೇಕಾಯಿತು. ಅದರಂತೆ ಅವರು ವಿಮಾನದಲ್ಲಿ ಹೋದರು. ವಿಮಾನ ನಿಲ್ದಾಣದಿಂದ ಅವರು ನೇರವಾಗಿ ಸಭೆ ನಡೆಯಬೇಕಾಗಿದ್ದ ಸ್ಥಳಕ್ಕೆ ಹೋದರು. ಸಭೆ ಆರಂಭವಾಗುವ ಸಮಯಕ್ಕೆ ಸಾಕಷ್ಟು ಮೊದಲೇ ಹಲವು ಮಂದಿ ಅಲ್ಲಿದ್ದರು. ಇವರನ್ನು ಕರೆದುಕೊಂಡು ಹೋದ ಟ್ಯಾಕ್ಸಿ ಚಾಲಕ ಸಭೆ ನಡೆಯಬೇಕಾಗಿದ್ದ ಸ್ಥಳದಿಂದ ಸ್ವಲ್ಪ ದೂರದಲ್ಲಿ ಪಾರ್ಕ್ ಮಾಡಿದ. ಸಭೆ ನಡೆಯುವ ಸ್ಥಳದ ಹತ್ತಿರವೇ ಸಾಕಷ್ಟು ಜಾಗ ಖಾಲಿ ಇತ್ತು. ಅಧಿಕಾರಿ ಈ ಬಗ್ಗೆ ಕೇಳಿದರು. ಅಷ್ಟೊಂದು ಜಾಗವಿದ್ದರೂ ನೀನೇಕೆ ಕಾರನ್ನು ದೂರ ನಿಲ್ಲಿಸಿದೆ ಎಂದು. ಅದಕ್ಕೆ ಆ ವಾಹನ ಚಾಲಕ ನೀಡಿದ ಉತ್ತರ ಮಾರ್ಮಿಕವಾಗಿತ್ತು. ಅವನು ಮೊದಲು ಹೇಳಿದ್ದು, ನಾವು ಬೇಗ ಬಂದಿರುವುದರಿಂದ ಇಲ್ಲಿಯೇ ಕಾರು ನಿಲ್ಲಿಸಿ ಅಲ್ಲಿಗೆ ನಡೆದುಕೊಂಡು ಹೋಗಬಹುದು. ತಡವಾಗಿ ಬರುವವರು, ದೂರದಲ್ಲಿ ವಾಹನ ನಿಲುಗಡೆ ಮಾಡಿ, ಸಭೆಯ ಸ್ಥಳ ಸೇರಲು ಮತ್ತಷ್ಟು ತಡವಾಗಬಹುದು. ಅಂತಹವರು ವಾಹನದಲ್ಲೇ ಸಾಗಿ ಬೇಗ ಸಭೆ ಸ್ಥಳ ತಲುಪಲು ಅನುಕೂಲವಾಗಲಿ ಎಂಬ ಕಾರಣಕ್ಕೆ ತಾನು ವಾಹನವನ್ನು ದೂರದಲ್ಲಿ ನಿಲ್ಲಿಸಿದೆ ಎಂದ. ಒಬ್ಬ ಸಾಮಾನ್ಯ ಟ್ಯಾಕ್ಸಿ ಚಾಲಕನಲ್ಲಿ ಇಂತಹ ಸಾಮಾನ್ಯ ಪ್ರಜ್ಞೆ ಇರುವುದಾದರೆ ಭಾರೀ ಪ್ರಮಾಣದ ಆಡಳಿತ ಜವಾಬ್ದಾರಿ ನಿರ್ವಹಣೆ ಮಾಡುವವರಿಗೆ ಇನ್ನೆಷ್ಟು ಸಾಮಾನ್ಯ ಜ್ಞಾನ ಇರಬೇಕು ಅಲ್ಲವೆ?

ಸಿಎಂ ಕುರ್ಚಿ ಉಳಿವಿಗೆ ಕೋಟಿ ಮಕ್ಕಳ ಭವಿಷ್ಯ ಹಾಳು ಮಾಡಬೇಡಿ

● ಸಿಎಂ ಬಸವರಾಜ ಬೊಮ್ಮಾಯಿಗೆ ಪ್ರಿಯಾಂಕ ಖರ್ಗೆ ಮನವಿ ● ರೋಹಿತ್ ಚಕ್ರತೀರ್ಥ ಸಮಿತಿ ಪರಿಷ್ಕರಿಸಿದ ಪುಸ್ತಕ ಕೈ ಬಿಡಲು ಆಗ್ರಹ

ಮೈಸೂರು, ಜೂ.11(ಎಸ್‌ಬಿಡಿ)– ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರೇ ನಿಮ್ಮ ಕುರ್ಚಿ ಉಳಿಸಿಕೊಳ್ಳಲು ರಾಜ್ಯದ ಒಂದು ಕೋಟಿ ವಿದ್ಯಾರ್ಥಿಗಳ ಭವಿಷ್ಯವನ್ನು ಹಾಳು ಮಾಡಬೇಡಿ ಎಂದು ಶಾಸಕ ಪ್ರಿಯಾಂಕ ಖರ್ಗೆ ಮನವಿ ಮಾಡಿದ್ದಾರೆ.

ಮೈಸೂರಿನ ಕಾಂಗ್ರೆಸ್ ಭವನದಲ್ಲಿ ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ದಯವಿಟ್ಟು ಚಿಲ್ಲರೆ ರಾಜಕೀಯ ಬಿಟ್ಟು ವಿದ್ಯಾರ್ಥಿಗಳ ಭವಿಷ್ಯದ ಬಗ್ಗೆ ಗಮನ ನೀಡಿ. ಶಾಲೆ ಪ್ರಾರಂಭವಾಗಿದೆ ಮಕ್ಕಳಿಗೆ ಸಮವಸ್ತ್ರ, ಶೂ, ಬ್ಯಾಗ್, ಪಠ್ಯ ಪುಸ್ತಕ ಇಲ್ಲ, ಎಲ್ಲಾ ಕಡೆ ಪೌಷ್ಠಿಕ ಆಹಾರ ಲಭ್ಯವಿಲ್ಲ. 2 ವರ್ಷದಿಂದ ಯಾವುದೇ ಶಾಲೆಗಳ ಅಭಿವೃದ್ಧಿಗೆ ಅನುದಾನ ನೀಡಿಲ್ಲ. ತಮ್ಮ ಕುರ್ಚಿ ಉಳಿಸಿಕೊಳ್ಳಲು ಒಂದು ಕೋಟಿ ಮಕ್ಕಳ ಭವಿಷ್ಯವನ್ನು ಹಾಳು ಮಾಡಬೇಡಿ. ಅಧಿಕಾರ ಯಾವಾಗಲಾದರೂ ಬರಬಹುದು ಅಥವಾ ಹೋಗಬಹುದು. ಆದರೆ ಮಕ್ಕಳ ಭವಿಷ್ಯ ಹಾಳಾದರೆ ಸುಧಾರಣೆ ತುಂಬಾ ಕಷ್ಟ. ಇದನ್ನು ಗಂಭೀರವಾಗಿ ಪರಿಗಣಿಸಿ ರೋಹಿತ್ ಚಕ್ರತೀರ್ಥ ಪರಿಷ್ಕರಿಸಿರುವ ಪಠ್ಯ ಪುಸ್ತಕಗಳ ನಿಲ್ಲಿಸಿ, ಹಳೆಯ ಪುಸ್ತಕಗಳನ್ನು ಮಕ್ಕಳಿಗೆ ನೀಡಿ ಎಂದು ಹೇಳಿದರು.

ಆರ್‌ಎಸ್‌ಎಸ್ ಆಣತಿ: ಕಾಲಕಾಲಕ್ಕೆ ಪಠ್ಯ ಪರಿಷ್ಕರಣೆ ಆಗಲೇಬೇಕು, ವೈಜ್ಞಾನಿಕ ಮನೋಭಾವ ಹೆಚ್ಚಾಗಬೇಕು, ಇದನ್ನು ಯಾರೂ ವಿರೋಧಿಸುವುದಿಲ್ಲ. ಆದರೆ ಬೌದ್ಧರು, ತೀರ್ಥಂಕರರಿಗೆ ಏಕವಚನ ಪ್ರಯೋಗ ಮಾಡಿರುವ, ಅಂಬೇಡ್ಕರ್, ಸಿದ್ಧಗಂಗಾ ಶ್ರೀಗಳು, ಕನಕದಾಸರು, ಬಸವಣ್ಣನವರ ಕುರಿತಾದ ಪಠ್ಯಕ್ಕೆ ಕತ್ತರಿ ಹಾಕಿರುವ, ವೈಜ್ಞಾನಿಕ ಮನೋಭಾವನೆಯನ್ನು ಸಂಪೂರ್ಣ ನಾಶ ಮಾಡಿರುವ ಪಠ್ಯವನ್ನು ಯಾರೂ ಒಪ್ಪುವುದಿಲ್ಲ. ಯಾವ ಮಾನದಂಡದಲ್ಲಿ ಪರಿಷ್ಕರಣೆ ಸಮಿತಿ ರಚನೆಯಾಗಿದೆ?. ಸ್ವಯಂ ಘೋಷಿತ ತತ್ವಜ್ಞಾನಿಗಳಾಗಿರುವವರ ಬರವಣಿಗೆಯನ್ನು ಪಠ್ಯ ಮಾಡುವುದು ಸರಿಯೇ?. ಪಠ್ಯ ಪರಿಷ್ಕರಣೆ ಹುಡುಗಾಟವಲ್ಲ, ಒಂದು ಕೋಟಿ ಮಕ್ಕಳ ಭವಿಷ್ಯದಲ್ಲಿ ಚೆಲ್ಲಾಟ ಆಡಬೇಡಿ. ಕೊರೊನಾ ಪರಿಣಾಮ ರಾಜಸ್ತಾನ ಹಾಗೂ ಗುಜರಾತ್ ಹೊರತುಪಡಿಸಿ ದೇಶಾದ್ಯಂತ ಮಕ್ಕಳ ಕಲಿಕೆ ಮಟ್ಟ ಕುಸಿತವಾಗಿದೆ. ಬೊಮ್ಮಾಯಿ ಅವರು ಎಂದೂ ಹೀಗಿರಲಿಲ್ಲ. ಪ್ರಗತಿಪರ ಹಾಗೂ ಉದಾರವಾದಿಗಳಾಗಿದ್ದರು. ಅಧಿಕಾರ ಕೊಟ್ಟಾಗ ಮನುಷ್ಯನ ನಿಜವಾದ ಗುಣ ತಿಳಿಯುತ್ತದೆ ಎಂಬ ಡಾ.ಅಂಬೇಡ್ಕರ್ ಅವರ ಮಾತು ನಿಜವೆನಿಸುತ್ತದೆ. ಕುರ್ಚಿ ಆಸೆಗಾಗಿ ಎಲ್ಲಾ ಗುಣಗಳನ್ನೂ ಮರೆತು ಆರ್‌ಎಸ್‌ಎಸ್ ಆಣತಿಯಂತೆ ನಡೆದುಕೊಳ್ಳುತ್ತಿದ್ದಾರೆ ಎಂದರು.

ಮಲ ಹೊರುವ ಪದ್ಧತಿಗೆ ಸಮ: ಪಠ್ಯ ಪುಸ್ತಕ ಪರಿಷ್ಕರಣೆ ವಿರೋಧಿಸಿ ಎನ್‌ಎಸ್‌ಯುಐ ಕಾರ್ಯಕರ್ತರು ಶಿಕ್ಷಣ ಸಚಿವ ಬಿ.ಸಿ.ನಾಗೇಶ್ ಅವರ ಮನೆ ಮುಂದೆ ಆರ್‌ಎಸ್‌ಎಸ್ ಚಡ್ಡಿ ಸುಟ್ಟು ಪ್ರತಿಭಟಿಸಿದರು. ಅದಕ್ಕೆ ಬಿಜೆಪಿಯವರೇಕೆ ಬೆಂಕಿ ಹಚ್ಚಿಕೊಳ್ಳಬೇಕು. ಬಿಜೆಪಿಯವರಿಗೇಕೆ ಆತಂಕ. ಪ್ರತಿಭಟನೆ ಮಾಡಿದವರನ್ನು ಬಂಧಿಸಿದ್ದಕ್ಕಾಗಿ ವಿಪಕ್ಷ ನಾಯಕರು ನಾವು ಆರ್‌ಎಸ್‌ಎಸ್ ಚಡ್ಡಿ ಸುಡುವ ಅಭಿಯಾನ ಮಾಡುತ್ತೇವೆ ಎಂದರು. ಈ ಸಾಂಕೇತಿಕ ಹೇಳಿಕೆ ಮೂಲಕ ಆರ್‌ಎಸ್‌ಎಸ್ ಸಿದ್ಧಾಂತವನ್ನು ಸಮಾಜದಲ್ಲಿ ಬೆಳೆಯಲು ಬಿಡುವುದಿಲ್ಲ, ಅದನ್ನು ಸುಟ್ಟು ಭಸ್ಮ ಮಾಡುತ್ತೇವೆ ಎಂಬ ಸಂದೇಶ ರವಾನಿಸಿದರು. ಅದಕ್ಕೆ ಪ್ರತಿಯಾಗಿ ಬಿಜೆಪಿಯವರು ಊರು ಊರಿಗೆ ಹೋಗಿ ಬಳಸಿರುವ ಬಣ್ಣ ಬಣ್ಣದ ಚಡ್ಡಿಯನ್ನು ಸಂಗ್ರಹಿಸುವ ಅಭಿಯಾನ ಮಾಡಿದರು. ಅದೂ ಎಸ್ಸಿ/ಎಸ್ಟಿ ಮೋರ್ಚಾ ಮೂಲಕ ಈ ಕೆಲಸ ಮಾಡಿಸಿದ್ದಾರೆ. ಸ್ವಾತಂತ್ರ್ಯ ಅಮೃತ ಮಹೋತ್ಸವದ ಸಂದರ್ಭದಲ್ಲೂ ಎಸ್ಸಿ/ಎಸ್ಟಿ ಮೋರ್ಚಾದವರು ಚಡ್ಡಿ ಸಂಗ್ರಹಿಸುತ್ತಿದ್ದಾರೆ. ಇದು ಮಲ ಹೊರುವ ಪದ್ಧತಿಗೆ ಸಮ. ಪಕ್ಷದ ಅಧಿಕೃತ ಅಭಿಯಾನವಾದ್ದರಿಂದ ಸಿಎಂ ಬೊಮ್ಮಾಯಿ, ಸಚಿವರಾದ ಅಶ್ವತ್ಥನಾರಾಯಣ್, ಎಸ್.ಟಿ. ಸೋಮಶೇಖರ್ ಸೇರಿದಂತೆ ಎಲ್ಲರೂ ಚಡ್ಡಿ ಸಂಗ್ರಹಿಸುವ ಅಭಿಯಾನ ಮಾಡಲೇಬೇಕು. ದಯವಿಟ್ಟು ಎಸ್ಸಿ/ಎಸ್ಟಿ ಮೋರ್ಚಾಗೆ ಸೀಮಿತ ಮಾಡಬೇಡಿ ಎಂದು ಪ್ರಿಯಾಂಕ್ ಖರ್ಗೆ ಕಿಡಿಕಾರಿದರು.



ಶಾಸಕ ಪ್ರಿಯಾಂಕ್ ಖರ್ಗೆ ಮೈಸೂರಿನಲ್ಲಿ ಪ್ರಸಿದ್ಧ ಸಾಹಿತಿ ದೇವನೂರ ಮಹಾದೇವ ಅವರ ಮನೆಗೆ ಭೇಟಿ ನೀಡಿ ದಕ್ಷಿಣ ಪದವೀಧರರ ಕ್ಷೇತ್ರದ ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ಮಧು ಜಿ. ಮಾದೇಗೌಡರನ್ನು ಬೆಂಬಲಿಸುವಂತೆ ಮನವಿ ಮಾಡಿದರು. ಈ ವೇಳೆ ಕೆಪಿಸಿಸಿ ಕಾರ್ಯದರ್ಶಿ, ನಾಗವಾಲ ಗ್ರಾಪಂ ಅಧ್ಯಕ್ಷ ಸಿ.ನರೇಂದ್ರ, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಬಿ.ಜೆ.ವಿಜಯ್‌ಕುಮಾರ್, ಸಿ.ಎಸ್.ರಘು, ಮರಿದೇವಯ್ಯ ಇದ್ದರು.

ತತ್ವ ಸಿದ್ಧಾಂತ ಮರೆತಿದ್ದಾರೆ: ಬಿಜೆಪಿಯ ವಿಧಾನ ಪರಿಷತ್ ಸದಸ್ಯ ಛಲವಾದಿ ನಾರಾಯಣಸ್ವಾಮಿ ಕಾಂಗ್ರೆಸ್ ನಾಯಕರ ಬಗ್ಗೆ ಸಾಕಷ್ಟು ವಿಷಯ ಪ್ರಸ್ತಾಪ ಮಾಡಿದ್ದು, ಆ ಬಗ್ಗೆ ಚರ್ಚೆಗೆ ನಾವು ಸಿದ್ಧವಿದ್ದೇವೆ. ಆದರೆ ಗಮನವನ್ನು ಬೇರೆಡೆ ತಿರುಗಿಸುವ ಬಿಜೆಪಿಯವರ ಹವ್ಯಾಸವನ್ನು ಮೆಚ್ಚಲೇಬೇಕು. ಆರ್‌ಎಸ್‌ಎಸ್ ಚಡ್ಡಿ ಸುಟ್ಟರು ಎನ್ನುವ ಕಾರಣಕ್ಕೆ ಬಳಸಿದ ಚಡ್ಡಿ ಸಂಗ್ರಹಕ್ಕೆ ಒಪ್ಪಿರುವುದು ವಿಷಾದನೀಯ. ಅದನ್ನು ತಲೆ ಮೇಲಿಟ್ಟುಕೊಂಡು ಓಡಾಡುತ್ತಿರುವ ಶಾಸಕರನ್ನು ಆಯ್ಕೆ ಮಾಡಿದವರಿಗೆ ಗೌರವವೇ?. ಪರಿಶಿಷ್ಟ ಜಾತಿ ಹಾಗೂ ಪಂಗಡದವರ ಕಲ್ಯಾಣಕ್ಕಾಗಿರುವ ಎಸ್‌ಇಪಿ, ಟಿಎಸ್‌ಪಿ ನಿಧಿಯ 7 ಸಾವಿರ ಕೋಟಿ ರೂ. ದುರ್ಬಳಕೆ ಆಗಿದೆ. ವಿವಿಧ ನಿಗಮಗಳ ಮೂಲಕ ಕೊಳವೆಬಾವಿ ಯೋಜನೆಯಲ್ಲೂ 435 ಕೋಟಿ ರೂ. ಅಕ್ರಮವಾಗಿದೆ. ಜಾತಿನಿಂಧನೆ ಪ್ರಕರಣ, ದಲಿತರು ಹಾಗೂ ಅಲ್ಪಸಂಖ್ಯಾತರ ಮೇಲೆ ದೌರ್ಜನ್ಯ ಹೆಚ್ಚಾಗಿದೆ. ಇದಕ್ಕೆಲ್ಲಾ ನಿಮ್ಮ ರಕ್ತ ಕುದಿಯುವುದಿಲ್ಲವೇ?. ಡಾ.ಅಂಬೇಡ್ಕರ್ ಅವರ ಅನುಯಾಯಿಗಳಾದ ಕೆಲ ಶಾಸಕರೂ ಕುರ್ಚಿ ಪ್ರೀತಿಗಾಗಿ ಮೌನವಾಗಿ, ಆರ್‌ಎಸ್‌ಎಸ್ ತಾಳಕ್ಕೆ ತಕ್ಕಂತೆ ಕುಣಿಯುತ್ತಿರುವುದು ದುರ್ದೈವ ಎಂದರು.

ಮಧುಗೆ ಮತ ಕೊಡಿ: ಪ್ರಸ್ತುತ ವಾತಾವರಣದಲ್ಲಿ ಸಂವಿಧಾನ ಮೌಲ್ಯ, ಜಾತ್ಯಾತೀತ ಮೌಲ್ಯ, ಸಮಾಜದ ಪ್ರಬುದ್ಧತೆಯನ್ನು ಯಾರು ಕಾಪಾಡುತ್ತಾರೋ ಅವರನ್ನು ಆಯ್ಕೆ ಮಾಡುವ ಅನಿವಾರ್ಯತೆ ಇದೆ. ಹೋರಾಟದ ಕುಟುಂಬದ ಹಿನ್ನೆಲೆಯುಳ್ಳ ದಶಕಗಳಿಂದ ಹಲವು ಸಂಸ್ಥೆಗಳ ಮುನ್ನಡೆಸುತ್ತಿರುವ, ಕೊರೊನಾ ಸಂದರ್ಭದಲ್ಲಿ ಆಸ್ತಿಪತ್ರ ಅಡವಿಟ್ಟು ಶಿಕ್ಷಕರು, ಸಿಬ್ಬಂದಿಗೆ ವೇತನ ನೀಡಿರುವ ಬದ್ಧತೆಯುಳ್ಳ ಮಧು ಜಿ.ಮಾದೇಗೌಡರಿಗೆ ಮತ ನೀಡುವಂತೆ ಇದೇ ವೇಳೆ ಮನವಿ ಮಾಡಿದರು. ಕಾಂಗ್ರೆಸ್ ಜಿಲ್ಲಾಧ್ಯಕ್ಷ ಡಾ.ಬಿ.ಜೆ. ವಿಜಯ್‌ಕುಮಾರ್, ನಗರಾಧ್ಯಕ್ಷ ಆರ್.ಮೂರ್ತಿ, ಕೆಪಿಸಿಸಿ ಕಾರ್ಯದರ್ಶಿ ನರೇಂದ್ರ, ನಗರ ಪ್ರಧಾನ ಕಾರ್ಯದರ್ಶಿ ಶಿವಣ್ಣ, ಮುಖಂಡರಾದ ಅಕ್ಬರ್ ಅಲಿ, ಪ್ರಭು ಮತ್ತಿತರರು ಸುದ್ದಿಗೋಷ್ಠಿಯಲ್ಲಿದ್ದರು.

ಸಿದ್ದರಾಮಯ್ಯ ಕೊಡುಗೆ ಚರ್ಚೆಗೆ ದಿನಾಂಕ ನಿಗದಿಗೊಳಿಸಿ

ಸಂಸದ ಪ್ರತಾಪ್ ಸಿಂಹ ಅವರಿಗೆ ಕೆಪಿಸಿಸಿ ವಕ್ತಾರ ಲಕ್ಷ್ಮಣ್ ಸವಾಲು

ಮೈಸೂರು, ಜೂ.11– ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಮೈಸೂರಿಗೆ ನೀಡಿರುವ ಕೊಡುಗೆ ಬಗ್ಗೆ ಚರ್ಚೆ ಮಾಡಲು ಜೂ.24ರೊಳಗೆ ದಿನಾಂಕ ನಿಗದಿ ಮಾಡುವಂತೆ ಕೆಪಿಸಿಸಿ ವಕ್ತಾರ ಲಕ್ಷ್ಮಣ್, ಸಂಸದ ಪ್ರತಾಪ್ ಸಿಂಹ ಅವರಿಗೆ ಸವಾಲು ಹಾಕಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಮೈಸೂರು ನಗರ ಹಾಗೂ ಜಿಲ್ಲೆಗೆ ಸಿದ್ದರಾಮಯ್ಯ ಅವರ ಕೊಡುಗೆ ಏನು ಎಂದು ಸಂಸದ ಪ್ರತಾಪ್ ಸಿಂಹ ಪ್ರಶ್ನಿಸಿದ್ದಾರೆ. ಈ ಬಗ್ಗೆ ದಾಖಲೆ ಸಮೇತ ಚರ್ಚೆಗೆ ಸಿದ್ಧನಿದ್ದು, ಸ್ಥಳ, ದಿನಾಂಕ ಹಾಗೂ ಸಮಯವನ್ನು ನಿಗದಿಪಡಿಸಲಿ. ಜೂ.24ರೊಳಗೆ ನಿಗದಿಪಡಿಸದಿದ್ದರೆ ನಂತರ ನಾನೇ ಅವರ ಕಚೇರಿಗೆ ಹೋಗಿ ಚರ್ಚೆ ನಡೆಸುತ್ತೇನೆ ಎಂದರು. ರಾಜ್ಯಸಭೆ ಚುನಾವಣೆಯಲ್ಲಿ ಬಿಜೆಪಿಯ 3ನೇ ಅಭ್ಯರ್ಥಿ ಗೆಲುವಿಗೆ ಜೆಡಿಎಸ್ ನೇರವಾದ ಹೊಣೆ. ಅದು ಬಿಜೆಪಿಯ 'ಬಿ' ಟೀಂ ಆಗಿಯೇ ಕೆಲಸ ಮಾಡುತ್ತಿದೆ. ಮಾಜಿ ಸಿಎಂ ಕುಮಾರಸ್ವಾಮಿ ಅವರು ಮೊನ್ನೆಯಿಂದ ಮನ ಬಂದಂತೆ ಮಾತನಾಡುತ್ತಿದ್ದಾರೆ. ಪಕ್ಷದ ಹೆಸರಿನಲ್ಲಿರುವ ಜಾತ್ಯತೀತ ಪದವನ್ನು ತೆಗೆದುಹಾಕಬೇಕು. ಅದನ್ನು ಬಳಸುವ ನೈತಿಕತೆ ಉಳಿದಿಲ್ಲ. ರಾಜ್ಯಸಭೆಗೆ ಸ್ಪರ್ಧಿಸಿದ್ದ ಕುಪೇಂದ್ರರೆಡ್ಡಿ ಅಫಿಡವಿಟ್‌ನಲ್ಲಿ 350 ಕೋಟಿ ಸಾಲ ನೀಡಿರುವ ಬಗ್ಗೆ ತಿಳಿಸಿದ್ದಾರೆ. ಅದರಲ್ಲಿ ಭವಾನಿ ರೇವಣ್ಣ ಅವರಿಗೆ 2.50 ಕೋಟಿ ರೂ., ಪ್ರಜ್ವಲ್‌ಗೆ 1 ಕೋಟಿ ರೂ., ಸೂರಜ್‌ಗೆ 5.80 ಕೋಟಿ, ಹೆಚ್.ಡಿ.ರಮೇಶ್‌ಗೆ 3.90 ಕೋಟಿ ಪುಟ್ಟರಾಜು ಮತ್ತು ಅವರ ಪುತ್ರನಿಗೆ 6.80 ಕೋಟಿ ಕಳೆದ ಏಪ್ರಿಲ್‌ನಲ್ಲಿ ಸಾಲ ನೀಡಿದ್ದಾರೆ. ಈ ಬಗ್ಗೆ ಕುಮಾರಸ್ವಾಮಿ ಸ್ಪಷ್ಟನೆ ನೀಡಬೇಕು ಎಂದು ಆಗ್ರಹಿಸಿದರು.

ಎಲೆಕ್ಟ್ರಿಕಲ್ ಸ್ಕೂಟರ್‌ಗೆ ಗೂಡ್ಸ್ ವಾಹನ ಡಿಕ್ಕಿ: ಸವಾರ ಸಾವು

ಮೈಸೂರು,ಜೂ.11– ಎಲೆಕ್ಟ್ರಿಕಲ್ ಸ್ಕೂಟರ್‌ಗೆ ಗೂಡ್ಸ್ ವಾಹನ ಡಿಕ್ಕಿ ಹೊಡೆದ ಪರಿಣಾಮ ಸವಾರ ಸಾವನ್ನಪ್ಪಿರುವ ಘಟನೆ ಮೈಸೂರಿನ ಬೆಲವತ್ತ ಗ್ರಾಮದ ಬಳಿ ನಡೆದಿದೆ. ಮೈಸೂರಿನ ವಿದ್ಯಾರಣ್ಯಪುರಂ ನಿವಾಸಿ ಜೆ.ಮಂಜುನಾಥ್(46) ಸಾವನ್ನಪ್ಪಿದವರು. ಮಂಜುನಾಥ್ ಅವರು ಕೆಲಸಕ್ಕೆಂದು ಜೂ.9ರ ಬೆಳಗ್ಗೆ ಮನೆಯಿಂದ ತಮ್ಮ ಎಲೆಕ್ಟ್ರಿಕಲ್ ಸ್ಕೂಟರ್‌ನಲ್ಲಿ (ಕೆಎ–09, ಜೆಇ–8279) ಹೊರಟ್ಟಿದ್ದು, ಮೇಟಗಳ್ಳಿ ಕಡೆಯಿಂದ ಆರ್.ಬಿ.ಐ–ಬಿ.ಎಂ.ಶ್ರೀ ನಗರದ ಅಂಡರ್ ಬ್ರಿಡ್ಜ್‌ಗೆ ಸ್ವಲ್ಪ ಮುಂದೆ ಬೆಲವತ್ತ ಕಡೆಗೆ ಬರುತ್ತಿದ್ದಾಗ ಹಿಂಬದಿಯಿಂದ ಅತೀ ವೇಗದಿಂದ ಬಂದ ಗೂಡ್ಸ್ (ಕೆಎ–09, ಎಂಎಂ–0886)ವಾಹನ ಡಿಕ್ಕಿ ಹೊಡೆದಿದ್ದು, ಮಂಜುನಾಥ್ ಅವರ ತಲೆಗೆ ತೀವ್ರವಾಗಿ ಪೆಟ್ಟು ಬಿದ್ದ ಪರಿಣಾಮ ರಕ್ತ ಸ್ರಾವವಾಗಿದ್ದು, ಅವರನ್ನು ಚಿಕಿತ್ಸೆಗಾಗಿ ಅಂಬುಲೆನ್ಸ್ ಮೂಲಕ ಕೆ.ಆರ್.ಆಸ್ಪತ್ರೆಗೆ ರವಾನಿಸಿದರು ಅವರು ಮಾರ್ಗಮಧ್ಯೆ ಸಾವನ್ನಪ್ಪಿದ್ದಾರೆ. ಚಾಲಕ ನಾಪತ್ತೆಯಾಗಿದ್ದು, ಈ ಸಂಬಂಧ ವಿವಿ ಪುರಂ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ನಾಲ್ವಡಿ ಜನ್ಮ ಮಹೋತ್ಸವ; ಸಂಗೀತೋತ್ಸವ ಕಾರ್ಯಕ್ರಮ

'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕರಾದ ಕೆ.ಬಿ.ಗಣಪತಿ ಅವರಿಂದ ಚಾಲನೆ

ಮೈಸೂರು, ಜೂ.11(ಎಂಕೆ)– ನಗರದ ಗೋಕುಲಂ 3ನೇ ಹಂತದಲ್ಲಿರುವ ಶ್ರೀ ಕೃಷ್ಣ ಗಾನಸಭಾದ ಆಳ್ವಾರ್ ಕಲಾಭವನದಲ್ಲಿ ಮಹಾರಾಜ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ 138ನೇ ಜನ್ಮ ಮಹೋತ್ಸವ ಮತ್ತು ಅವರ ಸ್ಮರಣಾರ್ಥ ಸಂಗೀತೋತ್ಸವ ಕಾರ್ಯಕ್ರಮವನ್ನು ಶನಿವಾರ ಏರ್ಪಡಿಸಲಾಗಿತ್ತು.

ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ 'ಮೈಸೂರು ಮಿತ್ರ' ಹಾಗೂ ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕರಾದ ಕೆ.ಬಿ.ಗಣಪತಿ, ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಬಳಿಕ ಮಾತನಾಡಿದ ಅವರು, ಸಂಗೀತದ ಬಗ್ಗೆ ಜ್ಞಾನ ಇರುವವರಿಗೆ ಶಾಸ್ತ್ರೀಯ ಸಂಗೀತ ಹೆಚ್ಚು ಆನಂದ ನೀಡುತ್ತದೆ. ನನಗೂ ಶಾಸ್ತ್ರೀಯ ಸಂಗೀತಕ್ಕೂ ಹತ್ತಿರದ ಸಂಬಂಧವೇನೂ ಇಲ್ಲ. ಆದರೆ ಕೆಲ ಸಂಗೀತ ಕಾರ್ಯಕ್ರಮಗಳಲ್ಲಿ ಭಾಗವಹಿಸಿ, ಕೇಳಿ ಆನಂದಿಸಿದ್ದೇನೆ. ಸಿನಿಮಾ ಹಾಡುಗಳು, ಭಾವಗೀತೆಗಳು ಇರುವಂತಹ ಸಂಗೀತ ಕಾರ್ಯಕ್ರಮಗಳು ಶುರುವಾಗುವುದಕ್ಕೂ ಅರ್ಧಗಂಟೆಗೂ ಮುಂಚೆಯೇ ಜನ ಬರುತ್ತಾರೆ. ಆದರೆ ಶಾಸ್ತ್ರೀಯ ಸಂಗೀತ ಕಾರ್ಯಕ್ರಮಕ್ಕೆ ಆಯ್ದ ಕೆಲವೇ ಮಂದಿ ಸಂಗೀತ ರಸಿಕರಷ್ಟೇ ಬರುವುದು. ಆದರೆ ಕಲಾವಿದರು ಕೆಲವೇ ಜನರನ್ನು ನೋಡಿ ಬೇಸರಪಡುವ ಅಗತ್ಯವಿಲ್ಲ. ಬದಲಿಗೆ ತಮ್ಮ ಕಲೆಯಲ್ಲಿ ನಿರಂತರವಾಗಿ ತೊಡಗಿದರೆ ಸಾಕು ಆ ಕಲೆಯೇ ಜನರನ್ನು ಸೆಳೆಯುತ್ತದೆ ಎಂದು ವಿಶ್ವಾಸ ಮೂಡಿಸಿದರು.

ಶ್ರೀ ಕೃಷ್ಣ ಗಾನಸಭಾದ ಶ್ರೀಧರ್ ರಾಜೇ ಅರಸ್ ಅವರು 40 ವರ್ಷದಿಂದ ಪರಿಚಯವಿದ್ದು, ನಿವೃತ್ತಿಯ ನಂತರವೂ ಸಮಾಜ ಮುಖಿ ಕಾರ್ಯದಲ್ಲಿ ತೊಡಗಿಸಿಕೊಂಡಿದ್ದಾರೆ. ಶ್ರೀ ಕೃಷ್ಣ ಗಾನಸಭಾವನ್ನು ಇಷ್ಟು ಎತ್ತರಕ್ಕೆ ಬೆಳೆಸಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರಲ್ಲದೆ ತಮ್ಮ ಬಳಿಯಿದ್ದ 'ಶ್ರೀ ರಾಮನ ಪಟ್ಟಾಭಿಷೇಕ' ಫೋಟೊವನ್ನು ಶ್ರೀ ಕೃಷ್ಣಗಾನಸಭಾಗೆ ನೀಡಿರುವುದರ ಕುರಿತು ತಿಳಿಸಿದರು. ಅಲ್ಲದೆ ಭಗವಾನ್ ಬುದ್ಧರು ಹೇಳಿದಂತೆ ದಾನ ನೀಡುವವರು ಮತ್ತು ಪಡೆದುಕೊಳ್ಳುವವರು ಇಬ್ಬರೂ ದೊಡ್ಡವರೇ. ದೊಡ್ಡವರೊಂದಿಗೆ ಸ್ನೇಹ ಪಡೆದಿದ್ದೇವೆ ಎಂದರು. ಈ ವೇಳೆ ಶ್ರೀ ಕೃಷ್ಣ ಗಾನಸಭಾ ಅಧ್ಯಕ್ಷ ಬಿ.ಎಸ್.ಶ್ರೀಧರರಾಜೇ ಅರಸ್, ವಿದುಷಿ ಮಾನಸಿ ಪ್ರಸಾದ್ ಉಪಸ್ಥಿತರಿದ್ದರು.



ಮೈಸೂರಿನ ಗೋಕುಲಂ 3ನೇ ಹಂತದಲ್ಲಿರುವ ಶ್ರೀ ಕೃಷ್ಣ ಗಾನಸಭಾದಲ್ಲಿ ಮಹಾರಾಜ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ 138ನೇ ಜನ್ಮ ಮಹೋತ್ಸವ ಮತ್ತು ಅವರ ಸ್ಮರಣಾರ್ಥ ಏರ್ಪಡಿಸಿದ್ದ ಸಂಗೀತೋತ್ಸವ ಕಾರ್ಯಕ್ರಮವನ್ನು 'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕರಾದ ಕೆ.ಬಿ.ಗಣಪತಿ ಅವರು ಉದ್ಘಾಟಿಸಿದರು. ಶ್ರೀ ಕೃಷ್ಣ ಗಾನಸಭಾದ ಅಧ್ಯಕ್ಷ ಬಿ.ಎಸ್. ಶ್ರೀಧರರಾಜೇ ಅರಸ್, ವಿದುಷಿ ಮಾನಸಿ ಪ್ರಸಾದ್ ಉಪಸ್ಥಿತರಿದ್ದರು.

ಶಾಸ್ತ್ರೀಯ ಸಂಗೀತ ಕಾರ್ಯಕ್ರಮ...

ಮಹಾರಾಜ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ 138ನೇ ಜನ್ಮ ಮಹೋತ್ಸವ ಅಂಗವಾಗಿ ವಿದುಷಿ ಮಾನಸಿ ಪ್ರಸಾದ್ ಶಾಸ್ತ್ರೀಯ ಸಂಗೀತ ಕಾರ್ಯಕ್ರಮ ನಡೆಸಿಕೊಟ್ಟರು. ಪಿಟೀಲು ವಾದನದಲ್ಲಿ ವಿದ್ವಾನ್ ಎಂ.ಕೇಶವ, ಮೃದಂಗದಲ್ಲಿ ವಿದ್ವಾನ್ ಎ.ರಾದೇಶ್ ಉತ್ತಮ ಸಹಕಾರ ನೀಡಿದರು. ಜೂ.18ರಂದು ಸ್ಮರಣಾರ್ಥ ಸಂಗೀತೋತ್ಸವ ನಡೆಯಲಿದ್ದು, ವಿದುಷಿ ಐಶ್ವರ್ಯ ರಘುನಾಥ್ ನಡೆಸಿಕೊಡಲಿದ್ದಾರೆ. ಪಿಟೀಲು ವಾದನದಲ್ಲಿ ವಿದುಷಿ ಅದಿತಿ ಕೃಷ್ಣಪ್ರಕಾಶ್, ಮೃದಂಗದಲ್ಲಿ ವಿದ್ವಾನ್ ತುಮಕೂರು ಬಿ.ರವಿಶಂಕರ್ ಭಾಗವಹಿಸಲಿದ್ದಾರೆ.



ದಕ್ಷಿಣ ಪದವೀಧರ ಕ್ಷೇತ್ರದಿಂದ ಪರಿಷತ್ ಚುನಾವಣೆ

ಜೆಡಿಎಸ್ ಅಭ್ಯರ್ಥಿ ರಾಮುಗೆ ಮತ ಹಾಕಲು

ಯುವ ಜೆಡಿಎಸ್ ಜಿಲ್ಲಾಧ್ಯಕ್ಷ ಗಂಗಾಧರ ಗೌಡ ಮನವಿ

ಮೈಸೂರು,ಜೂ.11(ಪಿಎಂ)– ದಕ್ಷಿಣ ಪದವೀಧರ ಕ್ಷೇತ್ರದ ಪರಿಷತ್ ಚುನಾವಣೆಯಲ್ಲಿ ಜೆಡಿಎಸ್ ಅಭ್ಯರ್ಥಿ ಹೆಚ್.ಕೆ.ರಾಮು ಅವರಿಗೆ ಪ್ರಥಮ ಪ್ರಾಶಸ್ತ್ಯದ ಮತ ನೀಡಿ ಜಯಶೀಲರನ್ನಾಗಿ ಮಾಡುವಂತೆ ಯುವ ಜನತಾದಳ (ಜಾತ್ಯತೀತ) ಜಿಲ್ಲಾ ಘಟಕದ ಅಧ್ಯಕ್ಷ ಗಂಗಾಧರ ಗೌಡ ಮತದಾರರಲ್ಲಿ ಕೋರಿದರು. ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಜೆಡಿಎಸ್ ವರಿಷ್ಠರಾದ ಮಾಜಿ ಪ್ರಧಾನಿ, ಮಾಜಿ ಮುಖ್ಯಮಂತ್ರಿ ಹೆಚ್.ಡಿ.ದೇವೇಗೌಡ ಹಾಗೂ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಅವರು ತಮ್ಮ ಆಡಳಿತಾವಧಿಯಲ್ಲಿ ಶಿಕ್ಷಣ ಕ್ಷೇತ್ರದ ಅಭಿವೃದ್ಧಿಗೆ ಕೊಡುಗೆ ನೀಡಿದ್ದಾರೆ ಎಂದರು.



ಕುಮಾರಸ್ವಾಮಿಯವರು ಮುಖ್ಯಮಂತ್ರಿ ಆಗಿದ್ದಾಗ ಶಿಕ್ಷಕರು, ಉಪನ್ಯಾಸಕರ ಹುದ್ದೆಗಳ ಭರ್ತಿ ಮಾಡುವ ಜೊತೆಗೆ ಹೊಸ ಪ್ರೌಢಶಾಲೆ, ಪದವಿಪೂರ್ವ, ಪದವಿ ಕಾಲೇಜುಗಳ ಸ್ಥಾಪನೆಗೆ ಕ್ರಮ ಕೈಗೊಂಡು ಉದ್ಯೋಗಾವಕಾಶ ಕಲ್ಪಿಸಿದ್ದರು. ಈ ಎಲ್ಲವನ್ನೂ ಪರಿಗಣಿಸಿ, ಜೆಡಿಎಸ್ ಅಭ್ಯರ್ಥಿ ಹೆಚ್.ಕೆ.ರಾಮು ಅವರಿಗೆ ಮತ ನೀಡುವಂತೆ ಮನವಿ ಮಾಡಿದರು. ಯುವ ಜನತಾದಳ ಜಿಲ್ಲಾ ಘಟಕದ ಗೌರವಾಧ್ಯಕ್ಷ ರಾಮಕೃಷ್ಣ, ಪ್ರಧಾನ ಕಾರ್ಯದರ್ಶಿ ವಿನೋದ್‌ನಾಯಕ್, ಸಾಮಾಜಿಕ ಜಾಲತಾಣ ಘಟಕದ ಅಧ್ಯಕ್ಷ ಯೋಗೇಶ್, ಮುಖಂಡರಾದ ಸೋಮಣ್ಣ, ಶಿವಕುಮಾರ್ ಗೋಷ್ಠಿಯಲ್ಲಿದ್ದರು.

ಇಂದು ಕುಸ್ತಿ ಪಂದ್ಯಾವಳಿ

ಮೈಸೂರು,ಜೂ.11(ಪಿಎಂ)– ಪೈಲ್ವಾನ್ ರುದ್ರ ಉರುಫ್ ಮೂಗರವರ ಅಭಿಮಾನಿಗಳ ಬಳಗ ಮೈಸೂರು ಹಾಗೂ ಜಯಚಾಮರಾಜ ಒಡೆಯರ್ ಗರಡಿ ಸಂಘದ ವತಿಯಿಂದ ಜೂ.12 ರಂದು ಮಧ್ಯಾಹ್ನ 3ಕ್ಕೆ ದೊಡ್ಡಕೆರೆ ಮೈದಾನದ ಸಾಹುಕಾರ್ ಎಸ್.ಚನ್ನಯ್ಯ ಕುಸ್ತಿ ಅಖಾಡದಲ್ಲಿ 30 ಜೊತೆ ಕಾಟ ಕುಸ್ತಿ ಪಂದ್ಯಾವಳಿ ಆಯೋಜಿಸಲಾಗಿದೆ ಎಂದು ಪೈಲ್ವಾನ್ ಆರ್.ರಮೇಶ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ರುದ್ರ ಉರುಫ್ ಮೂಗ, ನಟ ಪುನೀತ್ ರಾಜ್‌ಕುಮಾರ್, ಗೋಲ್ಡ್ ಮ್ಯಾನ್ ಟಿ.ಶ್ರೀನಿವಾಸ್ ಸ್ಮರಣಾರ್ಥ ಈ ಪಂದ್ಯಾವಳಿ ಆಯೋಜಿಸಲಾಗಿದೆ ಎಂದರು.

ಪೈಆರ್.ಕೆ.ರವಿ ಮಾತನಾಡಿ, ಪಂದ್ಯಾವಳಿಯಲ್ಲಿ 6 ಜೋಡಿಗಳ ಪಂದ್ಯ ರೋಚಕವಾಗಿರಲಿದೆ. ಅಂತಾರಾಷ್ಟ್ರೀಯ ಕುಸ್ತಿಪಟುಗಳಾದ ದಾವಣಗೆರೆಯ ಪೈಲ್ವಾನ್ ಕಾರ್ತಿಕ್ ಕಾಟೆ, ಪುಣೆಯ ಪೈಲ್ವಾನ್ ವಿಷ್ಣು ಕೋಶೆ ನಡುವಿನ ಪಂದ್ಯ ಮತ್ತಷ್ಟು ರೋಮಾಂಚನ ಉಂಟು ಮಾಡಲಿವೆ ಎಂದು ತಿಳಿಸಿದರು.

ದಕ್ಷಿಣ ಪದವೀಧರ ಕ್ಷೇತ್ರದಿಂದ ಪರಿಷತ್ ಚುನಾವಣೆ

ಕಾಂಗ್ರೆಸ್ ಅಭ್ಯರ್ಥಿ ಬೆಂಬಲಿಸಲು ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ಮನವಿ

ಮೈಸೂರು,ಜೂ.11(ಪಿಎಂ)– ದಕ್ಷಿಣ ಪದವೀಧರ ಕ್ಷೇತ್ರದ ಪರಿಷತ್ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಮಧು ಜಿ.ಮಾದೇಗೌಡ ಅವರನ್ನು ಪದವೀಧರ ಮತದಾರರು ಬೆಂಬಲಿಸಬೇಕೆಂದು ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ಕೋರಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ವೇದಿಕೆ ಅಧ್ಯಕ್ಷ ಕೆ.ಎಸ್.ಶಿವರಾಮು, ರಾಜ್ಯ ರಾಜಕಾರಣದಲ್ಲಿ ಸಿದ್ದರಾಮಯ್ಯನವರು ಮುಖ್ಯಮಂತ್ರಿಯಾಗಿ ಜನಪರ ಆಡಳಿತ ನೀಡಿದ್ದಾರೆ. ಅಲ್ಲದೆ, ಮಧು ಜಿ.ಮಾದೇಗೌಡ ಅವರ ತಂದೆ ಜಿ.ಮಾದೇಗೌಡ ಅವರು ರಾಜಕಾರಣದಲ್ಲಿ ಹಲವು ದಶಕಗಳ ಕಾಲ ನಿರಂತರವಾಗಿ ಜನಪರ ಸೇವೆ ಸಲ್ಲಿಸಿದ್ದಾರೆ. ಇದನ್ನು ಪರಿಗಣಿಸಿ, ಮತದಾರರು ಮಧು ಜಿ.ಮಾದೇಗೌಡ ಅವರಿಗೆ ಪ್ರಥಮ ಪ್ರಾಶಸ್ತ್ಯದ ಮತ ನೀಡಬೇಕೆಂದು ಮನವಿ ಮಾಡಿದರು.

ಬಿಜೆಪಿ ತಿರಸ್ಕರಿಸಿ: ನೇಮಕಾತಿ ಹಗರಣಗಳ ಸಂಬಂಧ ಪಾರದರ್ಶಕ ತನಿಖೆಗೆ ರಾಜ್ಯ ಬಿಜೆಪಿ ಸರ್ಕಾರ ಕ್ರಮ ಕೈಗೊಳ್ಳದೇ ಯಾರನ್ನೋ ರಕ್ಷಣೆ ಮಾಡಲು ಹೊರಟ್ಟಿದೆ. ಆ ಮೂಲಕ ಪ್ರತಿಭಾವಂತ ಅಭ್ಯರ್ಥಿಗಳಿಗೆ ವಂಚನೆ ಮಾಡಿದೆ. ಈ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿ ತಿರಸ್ಕರಿಸಬೇಕೆಂದು ಮತದಾರರಲ್ಲಿ ಕೋರಿದರು. ಜಿಲ್ಲಾ ಉಪ್ಪಾರರ ಸಂಘದ ಅಧ್ಯಕ್ಷ ಯೋಗೇಶ್ ಉಪ್ಪಾರ್, ಹಿಂದುಳಿದ ವರ್ಗಗಳ ಮುಖಂಡ ಲೋಕೇಶ್ ಕುಮಾರ್ ಮಾದಾಪುರ ಮತ್ತಿತರರು ಗೋಷ್ಠಿಯಲ್ಲಿದ್ದರು.

ದಕ್ಷಿಣ ಪದವೀಧರ ಕ್ಷೇತ್ರದಿಂದ ಪರಿಷತ್ ಚುನಾವಣೆ

ಬಿಜೆಪಿ ಅಭ್ಯರ್ಥಿ ಮೈ.ವಿ.ರವಿಶಂಕರ್ ಬೆಂಬಲಿಸಿ

ಚಾಮುಂಡೇಶ್ವರಿ ಕ್ಷೇತ್ರದ ಪಕ್ಷದ ಮುಖಂಡ ಅರುಣ್ ಕುಮಾರ್‌ಗೌಡ ಮನವಿ

ಮೈಸೂರು,ಜೂ.11(ಪಿಎಂ)– ಪ್ರಜ್ಞಾವಂತರ ಮತ ಕ್ಷೇತ್ರವಾದ ದಕ್ಷಿಣ ಪದವೀಧರ ಕ್ಷೇತ್ರದ ಪರಿಷತ್ ಚುನಾವಣೆಯಲ್ಲಿ ಪದವೀಧರರು ಬಿಜೆಪಿ ಅಭ್ಯರ್ಥಿ ಮೈ.ವಿ.ರವಿಶಂಕರ್ ಅವರನ್ನು ಬೆಂಬಲಿಸಬೇಕೆಂದು ಚಾಮುಂಡೇಶ್ವರಿ ಕ್ಷೇತ್ರದ ಬಿಜೆಪಿ ನಿಕಟಪೂರ್ವ ಅಧ್ಯಕ್ಷ ಅರುಣ್ ಕುಮಾರ್‌ಗೌಡ ಮನವಿ ಮಾಡಿದರು.



ಚಾಮುಂಡೇಶ್ವರಿ ಕ್ಷೇತ್ರದ ವಿವಿಧೆಡೆ ಶನಿವಾರ ಮತ ಯಾಚನೆ ಮಾಡಿರುವ ಅವರು, ಬೋಗಾದಿಯ ಹರಿ ವಿದ್ಯಾಲಯ ಶಿಕ್ಷಕರ ಬಳಿ ಮತ ಯಾಚಿಸಿ ಮಾತನಾಡಿ, ರವಿಶಂಕರ್ ಕಳೆದ ಚುನಾವಣೆಯಲ್ಲಿ ಅತ್ಯಲ್ಪ ಮತಗಳಿಂದ ಪರಾಭವಗೊಂಡರು. ಈ ಬಾರಿ ಅವರ ಪರ ಅಲೆ ಇದೆ ಎಂದರು.

ಅತಿ ಹೆಚ್ಚು ಪ್ರಥಮ ಪ್ರಾಶಸ್ತ್ಯದ ಮತಗಳನ್ನು ಪಡೆಯುವ ಮೂಲಕ ರವಿಶಂಕರ್ ಆಯ್ಕೆಯಾಗಲಿದ್ದಾರೆ. ಕೇಂದ್ರದಲ್ಲಿ ನರೇಂದ್ರ ಮೋದಿಯವರ ಹಾಗೂ ರಾಜ್ಯದಲ್ಲಿ ಬಸವರಾಜ ಬೊಮ್ಮಾಯಿ ಮತ್ತು ಯಡಿಯೂರಪ್ಪನವರ ಅಭಿವೃದ್ಧಿ ಕಾರ್ಯಗಳು ಅವರ ಗೆಲುವಿಗೆ ಶ್ರೀರಕ್ಷೆಯಾಗಲಿವೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಹರಿ ವಿದ್ಯಾಲಯದ ಕಾರ್ಯದರ್ಶಿ ಭಗವಾನ್, ಬಿಜೆಪಿ ಮುಖಂಡರಾದ ಎಸ್.ಆರ್. ಗೋಪಾಲರಾವ್, ಬಿಜೆಪಿ ಜಿಲ್ಲಾ ಮಾಧ್ಯಮ ಪ್ರಮುಖ್ ರಾಜಕುಮಾರ್, ತಾಪಂ ಮಾಜಿ ಸದಸ್ಯ ಸಿದ್ದೇಗೌಡ, ಮುಖಂಡರಾದ ನಂದೀಶ್ ಬೆಳ್ಳಯ್ಯ, ಶಂಭು ಪಟೇಲ್, ನಾಗರಾಜ್ ಮತ್ತಿತರರು ಹಾಜರಿದ್ದರು.

ಮೈಸೂರಲ್ಲಿ ಭಿಕ್ಷಾಟನೆ ವಿರುದ್ಧ ಕಾರ್ಯಾಚರಣೆ

15 ಮಂದಿ ರಕ್ಷಣೆ

ಮೈಸೂರು, ಜೂ.11(ಎಂಕೆ)– ಮೈಸೂರು ನಗರ ವ್ಯಾಪ್ತಿಯ ವಿವಿಧೆಡೆ ಭಿಕ್ಷಾಟನೆ ಮಾಡುವ ಮಹಿಳೆಯರು, ಮಕ್ಕಳು ಮತ್ತು ವೃದ್ಧರ ರಕ್ಷಣಾ ಕಾರ್ಯಾಚರಣೆ ನಡೆಸಿರುವ ನಗರ ಪೊಲೀಸರು, 1 ಹೆಣ್ಣು ಮಗು, 5 ಗಂಡು ಮಕ್ಕಳು, 3 ಜನ ತಾಯಂದಿರೊಂದಿಗೆ 3 ಮಕ್ಕಳು, ಇಬ್ಬರು ಮಹಿಳೆಯರು ಮತ್ತು ಓರ್ವ ವೃದ್ಧರನ್ನು ರಕ್ಷಣೆ ಮಾಡಿದ್ದಾರೆ.

ನಗರದ ಕೆ.ಆರ್.ಸರ್ಕಲ್, ಗ್ರಾಮಾಂತರ ಬಸ್ ನಿಲ್ದಾಣ, ಜೂ ಹತ್ತಿರ, ಬಂಡೀಪಾಳ್ಯ, ಎ.ಪಿ.ಎಂ.ಸಿ ಸಿಗ್ನಲ್ ಬಳಿ, ಕೊಲಂಬಿಯಾ ಏಷಿಯಾ ಆಸ್ಪತ್ರೆ ವೃತ್ತ, ಜೆ.ಎಸ್.ಎಸ್. ಡೆಂಟಲ್ ಕಾಲೇಜು, ಹಿನಕಲ್, ವಿ.ವಿ.ಪುರಂ, ಒಂಟಿಕೊಪ್ಪಲ್ ದೇವಸ್ಥಾನ ವೃತ್ತ, ಬೋಗಾದಿ ವೃತ್ತ, ಮಾತೃಮಂಡಳಿ ಸರ್ಕಲ್, ವಿ.ವಿ. ಪುರಂ ಬಸ್ ನಿಲ್ದಾಣ, ಬೋಗಾದಿ ರಿಂಗ್ ರೋಡ್, ನಗರ ಬಸ್ ನಿಲ್ದಾಣ, ಕೆ.ಆರ್. ವೃತ್ತ, ದೇವರಾಜ ಅರಸು ರಸ್ತೆ, ಪ್ರಭಾ ಚಿತ್ರಮಂದಿರ, ಗಾಂಧಿ ವೃತ್ತ, ಸೇಂಟ್ ಫಿಲೋಮಿನಾ ಚರ್ಚ್ ಮೀನಾಬಜಾರ್, ದೇವರಾಜ ಅರಸು ರಸ್ತೆ ಹಾಗೂ ಗಾಂಧಿಚೌಕದಲ್ಲಿ ಕಾರ್ಯಾಚರಣೆಯನ್ನು ನಡೆಸಿ ಭಿಕ್ಷಾಟನೆಯಲ್ಲಿ ತೊಡಗಿದ್ದ 1 ಹೆಣ್ಣು, 5 ಗಂಡು ಮಕ್ಕಳು, 3 ಜನ ತಾಯಂದಿರೊಂದಿಗೆ 3 ಮಕ್ಕಳು, ಇಬ್ಬರು ಮಹಿಳೆಯರು ಮತ್ತು ಒಬ್ಬ ವೃದ್ಧರನ್ನು ರಕ್ಷಣೆ ಮಾಡಲಾಗಿದೆ. ರಕ್ಷಣೆ ಮಾಡಿದ ಮಕ್ಕಳು, ಮಹಿಳೆಯರು ಮತ್ತು ವೃದ್ಧರನ್ನು ಪುನರ್‌ವಸತಿಗಾಗಿ ಬಾಲಕಿಯರ ಬಾಲಮಂದಿರ, ಬಾಲಕರ ಬಾಲಮಂದಿರ, ಸ್ತ್ರೀ ಸೇವಾನಿಕೇತನ ಹಾಗೂ ನಿರಾಶ್ರಿತರ ಕೇಂದ್ರಕ್ಕೆ ದಾಖಲಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಮೊಯಿಜ್ ಅಹ್ಮದ್ ನಿಧನ

ಮೈಸೂರು, ಜೂ.11– ಮೈಸೂರಿನ ಎನ್.ಆರ್. ಮೊಹಲ್ಲಾ ನಿವಾಸಿ, ನಿವೃತ್ತ ಅಗ್ನಿಶಾಮಕ ದಳ ಸಿಬ್ಬಂದಿ ಮೊಯಿಜ್ ಅಹ್ಮದ್(79) ಶನಿವಾರ ಬೆಳಗಿನ ಜಾವ ನಿಧನರಾದರು.



ಪತ್ನಿ ನಸೀಮ್ ಬಾನು, ಪುತ್ರ ತಬ್ರೇಜ್ ಅಹಮದ್, ಪುತ್ರಿ ಆಯಿಷಾ ಬಾನು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ನಾಳೆ(ಜೂ.12) ಸಂಜೆ 6 ಗಂಟೆಗೆ ಮೈಸೂರಿನ ಟಿಪ್ಪು ವೃತ್ತದ ಬಳಿಯಿರುವ ರುದ್ರಭೂಮಿಯಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಆರಾಮಾಗಿ 'ಕುರುಕ್ಷೇತ್ರ' ನಾಟಕ ವೀಕ್ಷಿಸಿದ ಮಾಜಿ ಸಿಎಂ ಸಿದ್ದರಾಮಯ್ಯ

'ಯಮಧರ್ಮರಾಯನ ಸನ್ನಿಧಿ' ನಾಟಕದಲ್ಲಿ ವೈದ್ಯನ ಪಾತ್ರ ಮಾಡಿದ್ದರಿಂದ ನಿಜ ಜೀವನದಲ್ಲಿ ಡಾಕ್ಟರ್ ಆಗಲಿಲ್ಲ



ಮೈಸೂರು, ಜೂ.11(ಎಂಕೆ)– 'ಯಮಧರ್ಮರಾಯನ ಸನ್ನಿಧಿ' ಎಂಬ ನಾಟಕದಲ್ಲಿ ವೈದ್ಯನ ಪಾತ್ರ ಮಾಡಿದ್ದೆ. ಅದಕ್ಕೆ ನಾನು ನಿಜ ಜೀವನದಲ್ಲಿ ಡಾಕ್ಟರ್ ಆಗಲಿಲ್ಲ ಎಂದು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ತಮ್ಮ ಹಳೇ ದಿನಗಳನ್ನು ಮೆಲುಕು ಹಾಕಿದರು.

ನಗರದ ಕಲಾಮಂದಿರದಲ್ಲಿ ಮೈಸೂರು ವಕೀಲರ ಸಂಘದ ವತಿಯಿಂದ ಶನಿವಾರ ಆಯೋಜಿಸಿದ್ದ 'ಕುರುಕ್ಷೇತ್ರ' ನಾಟಕ ವೀಕ್ಷಣೆ ಮಾಡಿದ ಅವರು, ವಕೀಲರ ಸಂಘದವರು ಆಹ್ವಾನ ಕೊಟ್ಟಿದ್ದರು. ಹಾಗಾಗಿ, ಬಹಳ ದಿನಗಳ ಬಳಿಕ ಕುರುಕ್ಷೇತ್ರ ನಾಟಕ ವೀಕ್ಷಿಸಿದ್ದೇನೆ. ಬಹಳ ಖುಷಿಯಾಯಿತು. ಹಿಂದೆ ಲಾಯರ್ ಆಗಿದ್ದಾಗ ಎಲ್ಲಾ ಕಡೆ ಹೋಗಿ ನಾಟಕ ನೋಡುತ್ತಿದ್ದೆ. ನಾನು ಲಾ ಕಾಲೇಜಿನಲ್ಲಿ ಸಾಮಾಜಿಕ ನಾಟಕ ಮಾಡಿದ್ದೆ. 'ಯಮಧರ್ಮರಾಯನ ಸನ್ನಿಧಿ' ನಾಟಕದಲ್ಲಿ ವೈದ್ಯನ ಪಾತ್ರ ಮಾಡಿದ್ದೆ. ಅದಕ್ಕೆ ನಾನು ಡಾಕ್ಟರ್ ಆಗಲಿಲ್ಲ ಎಂದರು.

ಪೌರಾಣಿಕ, ಸಾಮಾಜಿಕ ನಾಟಕಗಳಿಂದಲೇ ಡಾ.ರಾಜ್‌ಕುಮಾರ್, ಎನ್.ಟಿ.ರಾಮರಾವ್ ಅವರಂತಹವರು ದೊಡ್ಡ–ದೊಡ್ಡ ಕಲಾವಿದರಾದರು. ಇತ್ತೀಚೆಗೆ ಪೌರಾಣಿಕ ನಾಟಕಗಳಲ್ಲಿ ಅಭಿನಯಿಸುವುದು ಮತ್ತು ನೋಡುವ ಆಸಕ್ತಿ ಕಡಿಮೆಯಾಗಿದೆ. ಆಸಕ್ತಿ ಬರುವ ಹಾಗೆ ಮಾಡಬೇಕು. ವಕೀಲರ ಸಂಘದವರು ವಕೀಲ ವೃತ್ತಿ ಜೊತೆಗೆ ಪ್ರಾಕ್ಟೀಸ್‌ಮಾಡಿ ನಾಟಕಮಾಡಿದ್ದಾರೆ. ಅದೇ ರೀತಿ ಎಲ್ಲರೂ ನಾಟಕ ಮಾಡುವ ಕಡೆಗೆ ಆಸಕ್ತಿ ಬೆಳೆಸಿಕೊಳ್ಳಬೇಕು ಎಂದು ಹೇಳಿದರು.

ಕುರುಕ್ಷೇತ್ರ ನಾಟಕ ವೀಕ್ಷಣೆ: ಬೆಂಗಳೂರಿನಿಂದ ನೇರವಾಗಿ ಕಲಾಮಂದಿರಕ್ಕೆ ಆಗಮಿಸಿದ ವಿಪಕ್ಷ ನಾಯಕ ಸಿದ್ದರಾಮಯ್ಯ, ವಕೀಲರ ಸಂಘದವರು ಏರ್ಪಡಿಸಿದ್ದ ಕುರುಕ್ಷೇತ್ರ ನಾಟಕವನ್ನು ವೀಕ್ಷಿಸಿದರು. ಕುರುಕ್ಷೇತ್ರದ ಅರ್ಜುನ, ಭೀಮ, ದ್ರೌಪದಿ ಅಭಿನಯಿಸಿದ ನಾಟಕದ ತುಣುಕಗಳನ್ನು ವೀಕ್ಷಿಸಿ, ಖುಷಿಪಟ್ಟರು.

ಬಳಿಕ ನಡೆದ ವೇದಿಕೆ ಕಾರ್ಯಕ್ರಮದಲ್ಲಿ ವಕೀಲರ ಸಂಘದವರಿಂದ ಸನ್ಮಾನ ಸ್ವೀಕರಿಸಿ, ಸಂಘದವರು ಹಲವು ಬಾರಿ ಮಾತನಾಡುವಂತೆ ಮನವಿ ಮಾಡಿದರೂ ಭಾಷಣ ಮಾಡದೆ ಖುಷಿಯಾಗಿ ನಾಟಕ ನೋಡುವ ಕಡೆ ಗಮನಹರಿಸಿದರು. ಮಾಜಿ ಸಚಿವ ಹೆಚ್.ಸಿ.ಮಹದೇವಪ್ಪ, ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ವಿಧಾನ ಪರಿಷತ್ ಸದಸ್ಯ ಡಾ.ತಿಮ್ಮಯ್ಯ, ಕಾಂಗ್ರೆಸ್ ಮುಖಂಡ ಹರೀಶ್ ಗೌಡ, ಮೈಸೂರು ವಕೀಲರ ಸಂಘ ಉಪಾಧ್ಯಕ್ಷ ಪುಟ್ಟಸಿದ್ದೇಗೌಡ ಮತ್ತಿತರರು ಉಪಸ್ಥಿತರಿದ್ದರು.

ರಾಜ್ಯಸಭೆ ಚುನಾವಣೆಯಲ್ಲಿ ಬಿಜೆಪಿ ಗೆಲುವಿಗೆ ಜೆಡಿಎಸ್ಸೇ ಕಾರಣ

ಮಾಜಿ ಸಿಎಂ ಸಿದ್ದರಾಮಯ್ಯ ಸ್ಪಷ್ಟನೆ

ಮೈಸೂರು, ಜೂ.11(ಎಂಕೆ)– ರಾಜ್ಯಸಭೆ ಚುನಾವಣೆ ಯಲ್ಲಿ ಬಿಜೆಪಿ ಅಭ್ಯರ್ಥಿಗಳು ಗೆಲ್ಲಲು ಜೆಡಿಎಸ್‌ನವರೇ ಕಾರಣ. ಬಿಜೆಪಿ ಗೆಲ್ಲಬಾರದು ಎಂದಿದ್ದರೆ ನಮಗೆ ಬೆಂಬಲಕೊಟ್ಟು ಸುಮ್ಮನಾಗಬಹುದಿತ್ತಲ್ಲಾ? ಯಾಕಾಗಿ ಮಾಡಲಿಲ್ಲ ಎಂದು ವಿಪಕ್ಷ ನಾಯಕರೂ ಆದ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಲೇವಡಿ ಮಾಡಿದರು.

ಮೈಸೂರಿನ ಕಲಾಮಂದಿರದ ಆವರಣದಲ್ಲಿ ರಾಜ್ಯಸಭೆ ಚುನಾವಣೆಯಲ್ಲಿ ಬಿಜೆಪಿ ಗೆಲುವಿಗೆ ಸಿದ್ದರಾಮಯ್ಯ ಅವರೇ ಕಾರಣ ಎಂದು ಕುಮಾರಸ್ವಾಮಿ ಹೇಳುತ್ತಿದ್ದಾರೆ ಎಂಬ ಮಾಧ್ಯಮದವರ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ಬಿಜೆಪಿ ಗೆಲುವಿಗೆ ಅವರು(ಜೆಡಿಎಸ್‌ನವರು) ಕಾರಣ ಅಲ್ವಾ? ನಾವು ಮೊದಲು ನಾಮಿನೇಷನ್ ಹಾಕಿದ್ದೊ. ನಮ್ಮದು 25 ಓಟು ಇತ್ತು. ಅದನ್ನು ಲೆಕ್ಕಿಸದೆ ತಮ್ಮ ಅಭ್ಯರ್ಥಿಯನ್ನು ನಿಲ್ಲಿಸಿದವರು ಯಾರು? ಎಂದು ಪ್ರಶ್ನಿಸಿದರು.

ಬಿಜೆಪಿ ಗೆಲ್ಲಬಾರದು ಎಂದಿದ್ದರೆ ನಮಗೆ ಬೆಂಬಲ ಕೊಟ್ಟು ಸುಮ್ಮನಿರಬಹುದಾಗಿತ್ತಲ್ಲಾ? ಯಾಕಾಗೆ ಮಾಡಲಿಲ್ಲ. ದೇವೇಗೌಡರು ನಿಂತಾಗ ನಾವು ನಮ್ಮ ಕ್ಯಾಂಡಿಡೇ ಹಾಕಿದ್ವಾ? ಮತ್ತೆ ಬಿಜೆಪಿ ಗೆಲ್ಲಲು ಯಾರ್ರೀ ಕಾರಣ ಎಂದು ಮಾಧ್ಯಮದವರನ್ನೇ ಪ್ರಶ್ನಿಸಿದ ಅವರು, ಜೆಡಿಎಸ್‌ನವರೇ ಕಾರಣ. ನಾವು 80 ಮಂದಿ ಶಾಸಕರಿದ್ದರೂ 37 ಸ್ಥಾನ ಇದ್ದವರನ್ನು ಮುಖ್ಯಮಂತ್ರಿಯಾಗಲೂ ಸಹಕಾರ ನೀಡಲಿಲ್ವಾ? ಮತ್ತೆ ಅವರು ನಮಗೆ ಸಪೋರ್ಟ್ ಮಾಡಬೇಕಿತ್ತು. ಇವರು ಬಿಜೆಪಿ ಸೋಲಿಸಬೇಕಾಗಿದ್ದರೆ ನಮಗೆ ಬೆಂಬಲ ನೀಡಿ, ಕುಪೇಂದ್ರ ರೆಡ್ಡಿಯವರನ್ನು ನಿಲ್ಲಿಸಬಾರದಿತ್ತು ಎಂದರು.

ಭವಿಷ್ಯದಲ್ಲಿ ಕಾಂಗ್ರೆಸ್–ಜೆಡಿಎಸ್ ಮೈತ್ರಿ ಮುಗಿದ ಅಧ್ಯಾಯವಾ? ಎಂಬುದಕ್ಕೆ ಪ್ರತಿಕ್ರಿಯಿಸಿದ ಸಿದ್ದರಾಮಯ್ಯ, ಪಾರ್ಲಿಮೆಂಟ್‌ನಲ್ಲಿ ಜೆಡಿಎಸ್‌ನೊಂದಿಗೆ ಸೇರಿಯೇ ನಾವು ಕೆಟ್ಟಿದ್ದೇವೆ ಎಂದು ಹೇಳಿ ಹೊರನಡೆದರು.



ದಕ್ಷಿಣ ಪದವೀಧರ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ಹೆಚ್.ಕೆ.ರಾಮು ಹೊಸಮಠಕ್ಕೆ ಭೇಟಿ ನೀಡಿ ಶ್ರೀಗಳ ಆಶೀರ್ವಾದ ಪಡೆದರು. ಈ ಸಂದರ್ಭದಲ್ಲಿ ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ, ನಂಜರಾಜ ಅರಸ್, ಅಪೆಕ್ಸ್ ಶ್ರೀನಿವಾಸ್, ಮೂಗೂರು ನಂಜುಂಡಸ್ವಾಮಿ, ರಮೇಶ್, ಮಹಾದೇವ್, ರಘು ಇನ್ನಿತರರು ಉಪಸ್ಥಿತರಿದ್ದರು.

ಪ್ರದೀಪ್‌ಕುಮಾರ್‌ಗೆ ಪಿಹೆಚ್.ಡಿ



ಮೈಸೂರು,ಜೂ.11–ಬೆಂಗಳೂರು ವಿಶ್ವವಿದ್ಯಾಲಯದ ಶಿಕ್ಷಣ ಶಾಸ್ತ್ರ ಅಧ್ಯಯನ ವಿಭಾಗದ ಪ್ರಾಧ್ಯಾಪಕಿ ಡಾ.ಹಸೀನ್ ತಾಜ್ ಮಾರ್ಗದರ್ಶನದಲ್ಲಿ ಕೊಳ್ಳೇಗಾಲ ತಾಲೂಕಿನ ಸಿಂಗಾನಲ್ಲೂರು ಗ್ರಾಮದ ಎಂ.ಪ್ರದೀಪ್ ಕುಮಾರ್ ಸಂಶೋಧನೆ ನಡೆಸಿ ಸಾದರಪಡಿಸಿದ 'ಸಾಮಾಜಿಕ ಜಾಲತಾಣಗಳ ಬಳಕೆ ಪದವಿ ಕಾಲೇಜಿನ ವಿದ್ಯಾರ್ಥಿಗಳ ಶೈಕ್ಷಣಿಕ ಸಾಧನೆ ಮತ್ತು ಸಾಮಾಜಿಕ ಕೌಶಲಗಳ ಮೇಲೆ ಬೀರುವ ಪರಿಣಾಮದ ಅಧ್ಯಯನ' ಎಂಬ ಮಹಾಪ್ರಬಂಧವನ್ನು ಬೆಂಗಳೂರು ವಿವಿ ಪಿ.ಹೆಚ್.ಡಿ ಪದವಿಗೆ ಅಂಗೀಕರಿಸಿದೆ.

ಮೂರನೇ ಪುಟದಿಂದ

ನಾಳೆ ಮತದಾನ

ಹಾಗೂ ಚಾಮರಾಜನಗರದಲ್ಲಿ 12 ಮತಗಟ್ಟೆಗಳನ್ನು ಸ್ಥಾಪಿಸಲಾಗಿದ್ದು, ಮತದಾನಕ್ಕೆ ಸಕಲ ವ್ಯವಸ್ಥೆ ಕಲ್ಪಿಸಲಾಗಿದೆ ಎಂದು ಚುನಾವಣಾಧಿಕಾರಿಯೂ ಆದ ಪ್ರಾದೇಶಿಕ ಆಯುಕ್ತ ಡಾ. ಜಿ.ಸಿ.ಪ್ರಕಾಶ್ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದ್ದಾರೆ.

ಮತದಾನಕ್ಕೆ ಅನುಕೂಲವಾಗಲೆಂದು ಜೂನ್ 13ರಂದು ಪದವೀಧರ ಮತದಾರರಿಗೆ ವಿಶೇಷ ಸಾಂದರ್ಭಿಕ ರಜೆ ಮಂಜೂರು ಮಾಡಿ ರಾಜ್ಯ ಸರ್ಕಾರವು ಆದೇಶ ಹೊರಡಿಸಿದೆ. ಚುನಾವಣಾ ಆಯೋಗದ ಸೂಚನೆಯಂತೆ ಮತದಾರರ ಬಲಗೈ ತೋರು ಬೆರಳಿಗೆ ಅಳಿಸಲಾಗದ ಶಾಯಿಯನ್ನು ಹಾಕಲಾಗುವುದು. ದಕ್ಷಿಣ ಪದವೀಧರರ ಕ್ಷೇತ್ರದ ವ್ಯಾಪ್ತಿಯ ಎಲ್ಲಾ 150 ಮತಗಟ್ಟೆಗಳಿಗೆ ಮೈಕ್ರೋ ಅಬ್ಸರ್‌ವರ್‌ಗಳನ್ನು ನೇಮಿಸಲಾಗಿದ್ದು, ಪೊಲೀಸ್ ಬಂದೋಬಸ್ತ್ ಒದಗಿಸಿರುವುದಲ್ಲದೆ ಮತಗಟ್ಟೆಗಳಲ್ಲಿನ ಮತದಾನ ಪ್ರಕ್ರಿಯೆಯನ್ನು ವಿಡಿಯೋಗ್ರಫಿ ಮಾಡಲು ಕ್ರಮ ವಹಿಸಲಾಗಿದೆ.

ಮೈಸೂರಿನ 2, ಮಂಡ್ಯದ 13 ಮತ್ತು ಹಾಸನ ಜಿಲ್ಲೆಯ 2 ಮತಗಟ್ಟೆಗಳನ್ನು ಅತಿಸೂಕ್ಷ್ಮ ಮತಗಟ್ಟೆಗಳೆಂದು ಗುರ್ತಿಸಲಾಗಿದ್ದು, ಅಲ್ಲಿ ವೆಬ್‌ಕಾಸ್ಟಿಂಗ್ ಮಾಡಲು ವ್ಯವಸ್ಥೆ ಮಾಡಲಾಗಿದೆ. ಚುನಾವಣಾ ವೆಬ್‌ಸೈಟ್‌ನಲ್ಲಿ ಸಾರ್ವಜನಿಕರೂ ಸಹ ಮತದಾನ ಪ್ರಕ್ರಿಯೆಯನ್ನು ವೀಕ್ಷಿಸಬಹುದಾಗಿದೆ. ಇಂದು (ಜೂ.11) ಸಂಜೆ 5 ಗಂಟೆಗೆ ಚುನಾವಣಾ ಬಹಿರಂಗ ಪ್ರಚಾರ ಅಂತ್ಯಗೊಂಡಿದ್ದು, ಮತದಾರರಲ್ಲದ ಹೊರ ಜಿಲ್ಲೆಗಳಿಂದ ಬಂದಿರುವವರು ಕ್ಷೇತ್ರ ವ್ಯಾಪ್ತಿಯಿಂದ ತೆರಳಬೇಕೆಂದು ಸೂಚಿಸಲಾಗಿದೆ. ಮತದಾರರಿಗೆ ಆಮಿಷ ಒಡ್ಡುವ ಬಗ್ಗೆ ದೂರುಗಳು ಬಂದಲ್ಲಿ ಅಂತಹವರ ವಿರುದ್ಧ ಸೂಕ್ತ ಕ್ರಮ ವಹಿಸಲಾಗುವುದು.

ಅಂಚೆ ಮತದಾನ ಮಾಡುವವರಿಗಾಗಿ 600 ಪೋಸ್ಟಲ್ ಬ್ಯಾಲೆಟ್ ಪೇಪರ್‌ಗಳನ್ನು ರವಾನಿಸಿದ್ದು, ಮತದಾರರು ಅಭ್ಯರ್ಥಿಯ ಹೆಸರಿನ ಮುಂದೆ 1, 2, 3 ಎಂದು ಕಣದಲ್ಲಿರುವ ಎಲ್ಲಾ 19 ಅಭ್ಯರ್ಥಿಗಳಿಗೂ ಅಂಕಿಗಳಲ್ಲಿ ಮಾತ್ರ ಪ್ರಾಶಸ್ತ್ಯದ ಮತಗಳನ್ನು ನೀಡಬೇಕು. ಅಕ್ಷರದಲ್ಲಿ ಬರೆದರೆ ಅಥವಾ ಒಂದೇ ಅಂಕಿಯನ್ನು ಹೆಚ್ಚಿನ ಅಭ್ಯರ್ಥಿಗಳ ಮುಂದೆ ಬರೆದಲ್ಲಿ ಅಂತಹ ಮತಗಳನ್ನು ಅನೂರ್ಜಿತ ಎಂದು ಪರಿಗಣಿಸಲಾಗುವುದು.

ಮತಗಟ್ಟೆಗಳಿಗೆ ನೀರು, ವಿದ್ಯುತ್, ಸ್ವಚ್ಛತೆ, ಶೌಚಾಲಯಗಳೂ ಸೇರಿದಂತೆ ಅಗತ್ಯ ಎಲ್ಲಾ ಮೂಲಭೂತ ಸೌಲಭ್ಯ ಕಲ್ಪಿಸಲಾಗಿದೆಯಲ್ಲದೆ, ಮತಗಟ್ಟೆ ಅಧ್ಯಕ್ಷೀಯ ಅಧಿಕಾರಿ, ಮತದಾನ ಅಧಿಕಾರಿ ಹಾಗೂ ಸಿಬ್ಬಂದಿಗಳನ್ನು ನಿಯೋಜಿಸಲಾಗಿದೆ. ನಾಳೆ (ಭಾನುವಾರ) ಬೆಳಗ್ಗೆ ಮೈಸೂರು ನಗರ ಮತ್ತು ತಾಲೂಕಿನ ಮಸ್ಟರಿಂಗ್ ಕಾರ್ಯವು ಪಾಲಿಕೆ ಕಚೇರಿಯಲ್ಲಿ ಹಾಗೂ ಉಳಿದ ತಾಲೂಕು ವ್ಯಾಪ್ತಿಗೆ ಬರುವ ಮತಗಟ್ಟೆಗಳಿಗೆ ಸಂಬಂಧಿಸಿದ ಮಸ್ಟರಿಂಗ್ ಪ್ರಕ್ರಿಯೆ ಆಯಾ ತಾಲೂಕುಗಳ ತಹಸೀಲ್ದಾರ್ ಕಚೇರಿಗಳಲ್ಲಿ ನಡೆಯಲಿದೆ. ಎಲ್ಲಾ ಮತಗಟ್ಟೆಗಳ ಸುತ್ತ 100 ಮೀಟರ್ ಅಂತರದಲ್ಲಿ ಗುಂಪು ಸೇರುವುದು, ಮತ ಪ್ರಚಾರ ಮಾಡುವುದನ್ನು ನಿಷೇಧಿಸಲಾಗಿದೆಯಲ್ಲದೆ, ಮೈಕ್ರೋ ಅಬ್ಸರ್‌ವರ್‌ಗಳ ಕಣ್ಗಾವಲಿನಲ್ಲಿ ಬಂದೋಬಸ್ತ್ ವ್ಯವಸ್ಥೆ ಮಾಡಲಾಗಿದೆ. ಮುಕ್ತ ಹಾಗೂ ನ್ಯಾಯಸಮ್ಮತ ಮತದಾನಕ್ಕೆ ಚುನಾವಣಾಧಿಕಾರಿಗಳು ಸರ್ವ ರೀತಿಯಲ್ಲಿ ಸಿದ್ಧತೆ ಮಾಡಿಕೊಂಡಿದ್ದಾರೆ. ಹೆಚ್ಚುವರಿ ಪ್ರಾದೇಶಿಕ ಆಯುಕ್ತರಾದ ಶಿವರಾಜ್ ಮತ್ತು ರೂಪಶ್ರೀ ಸುದ್ದಿಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಬಹಿರಂಗ ಪ್ರಚಾರಕ್ಕೆ ತೆರೆ: ದಕ್ಷಿಣ ಪದವೀಧರ ಕ್ಷೇತ್ರದ ಚುನಾವಣಾ ಬಹಿರಂಗ ಪ್ರಚಾರ ಇಂದು (ಜೂ.11) ಸಂಜೆ 5 ಗಂಟೆಗೆ ಅಂತ್ಯಗೊಂಡಿತು. ನಾಳೆ (ಜೂ.12) ಅಭ್ಯರ್ಥಿಗಳು ಹಾಗೂ ಬೆಂಬಲಿಗರು ಮನೆ ಮನೆಗೆ ತೆರಳಿ ಮತ ಪ್ರಚಾರ ಮಾಡಬಹುದೇ ಹೊರತು, ಸಭೆ–ಸಮಾರಂಭ ಕಾರ್ಯಕ್ರಮಗಳನ್ನು ಆಯೋಜಿಸುವಂತಿಲ್ಲ. ಇಂದು ಸಂಜೆ 5 ಗಂಟೆ ನಂತರ ಹೊರಗಿನಿಂದ ಬಂದಿರುವ ಮತದಾರರಲ್ಲದವರು ಕ್ಷೇತ್ರದಿಂದ ಹೊರಗೆ ಹೋಗುವಂತೆ ಸೂಚಿಸಲಾಗಿದೆ. ಬಿಜೆಪಿ, ಜೆಡಿಎಸ್, ಕಾಂಗ್ರೆಸ್ ಸೇರಿದಂತೆ ಎಲ್ಲಾ ಅಭ್ಯರ್ಥಿಗಳೂ ಇದುವರೆಗೆ ಬಿರುಸಿನ ಪ್ರಚಾರ ನಡೆಸಿ ಮತದಾರರ ಮನವೊಲಿಸಲು ಪ್ರಯತ್ನಿಸುತ್ತಿದ್ದು, ಇಂದು ಸಂಜೆ 5 ಗಂಟೆ ನಂತರ ಮನೆ ಮನೆಗೆ ತೆರಳಿ ಮತದಾರರ ಮನ ಸೆಳೆಯಲು ಅಂತಿಮ ಕಸರತ್ತು ನಡೆಸುತ್ತಿದ್ದಾರೆ. ಮಾದರಿ ನೀತಿ ಸಂಹಿತೆಯು ಜಾರಿಯಲ್ಲಿ ರುವುದರಿಂದ, ಔತಣ ಕೂಟ, ಸಭೆ, ಸಂವಾದ, ಸಮಾಲೋಚನಾ ಕಾರ್ಯಕ್ರಮಗಳನ್ನು ನಡೆಸಿ ಪ್ರಚಾರ ಮಾಡಬಾರದೆಂದು ಸೂಚನೆ ನೀಡಲಾಗಿದೆ. ಶುಕ್ರವಾರ ಅಭ್ಯರ್ಥಿಗಳು, ಅವರ ಏಜೆಂಟರ ಸಭೆ ನಡೆಸಿರುವ ಚುನಾವಣಾಧಿಕಾರಿಗಳು ನಿಯಮ ಉಲ್ಲಂಘಿಸದಂತೆ ಎಚ್ಚರಿಕೆ ನೀಡಿದ್ದಾರೆ.

ನಿಯಮ ಉಲ್ಲಂಘನೆ: 516 ಪ್ರಕರಣ ದಾಖಲು

2,34,824 ರೂ. ಮೌಲ್ಯದ ಮದ್ಯ, 12 ವಾಹನ, 21.359 ಕೆಜಿ ಗಾಂಜಾ ವಶ

ಮೈಸೂರು: ಚುನಾವಣಾ ನಿಯಮ ಉಲ್ಲಂಘಿಸಿದವರ ವಿರುದ್ಧ ದಕ್ಷಿಣ ಪದವೀಧರ ಕ್ಷೇತ್ರ ವ್ಯಾಪ್ತಿಯಲ್ಲಿ ಒಟ್ಟು 516 ಪ್ರಕರಣ ದಾಖಲಿಸಿ ಕೊಳ್ಳಲಾಗಿದೆ ಎಂದು ಚುನಾವಣಾಧಿಕಾರಿ ಡಾ.ಜಿ.ಸಿ.ಪ್ರಕಾಶ್ ತಿಳಿಸಿದ್ದಾರೆ. ಜಿಲ್ಲೆಯಲ್ಲಿ ಅತೀ ಹೆಚ್ಚು 178 ಎಫ್‌ಐಆರ್ ದಾಖಲಾಗಿದ್ದು, ಚಾಮರಾಜನಗರದಲ್ಲಿ 162, ಹಾಸನದಲ್ಲಿ 63 ಹಾಗೂ ಮಂಡ್ಯ ಜಿಲ್ಲೆಯಲ್ಲಿ 113 ಪ್ರಕರಣ ದಾಖಲಿಸಲಾಗಿದೆ. ಒಟ್ಟಾರೆ 2,34,824 ರೂ. ಮೌಲ್ಯದ 23.92 ಲೀಟರ್ ಬಿಯರ್ ಮತ್ತು 536 ಲೀ. ಐಎಂಎಲ್ ಮದ್ಯವನ್ನು ವಶಪಡಿಸಿಕೊಳ್ಳಲಾಗಿದೆ. 4,95,000 ರೂ. ಮೌಲ್ಯದ 12 ವಾಹನಗಳು, 7,17,200 ರೂ. ಮೌಲ್ಯದ 21.359 ಕೆಜಿ ಗಾಂಜಾವನ್ನು ವಶಪಡಿಸಿಕೊಂಡು ತನಿಖೆ ನಡೆಸಲಾಗುತ್ತಿದೆ. ಚುನಾವಣಾ ಪ್ರಚಾರದ ವೇಳೆ ಮತದಾರರಿಗೆ ಆಮಿಷ ಒಡ್ಡುತ್ತಿದ್ದರೆಂಬ ದೂರಿನ ಮೇರೆಗೆ ಅಬಕಾರಿ ಇಲಾಖೆ ಹಾಗೂ ಪೊಲೀಸರು ಕಾರ್ಯಾಚರಣೆ ನಡೆಸಿದಾಗ ಈ ಅಕ್ರಮ ಕಂಡುಬಂದಿದೆ. ಗಾಂಜಾ ಪ್ರಕರಣ ಸಂಬಂಧ ಅದು ಚುನಾವಣೆಗಾಗಿಯೋ ಅಥವಾ ಬೇರೆ ಉದ್ದೇಶವೋ ಎಂಬುದರ ಬಗ್ಗೆ ತನಿಖೆ ನಡೆಸಲಾಗುತ್ತಿದೆ ಎಂದು ಡಾ. ಪ್ರಕಾಶ್ ಹೇಳಿದರು.

ಕಣದಲ್ಲಿ 19 ಅಭ್ಯರ್ಥಿಗಳು

ಕನ್ನಡ ಛಲವಾದಿ ವಾಟಾಳ್ ಪಕ್ಷದ ವಾಟಾಳ್ ನಾಗರಾಜ್, ಆರ್‌ಪಿಐನ ಎನ್. ವೀರಭದ್ರಸ್ವಾಮಿ, ಪಕ್ಷೇತರರಾದ ಬಿಎಸ್‌ಪಿ ಬೆಂಬಲಿತ ಚನ್ನಕೇಶವಮೂರ್ತಿ, ರೈತ ಸಂಘ ಬೆಂಬಲಿತ ಪ್ರಸನ್ನ ಎನ್.ಗೌಡ, ಡಾ. ಜೆ.ಅರುಣ್‌ಕುಮಾರ್, ಸಿ.ಕಾವ್ಯಶ್ರೀ, ಪುಟ್ಟಸ್ವಾಮಿ, ಕೆ.ಪಿ.ಪ್ರಸನ್ನಕುಮಾರ್, ಎಂ.ಮಹೇಶ್, ಡಾ.ಜೆ.ಸಿ.ರವೀಂದ್ರ, ಎನ್. ರಾಜೇಂದ್ರಸಿಂಗ್ ಬಾಬು, ಎಸ್.ರಾಮು, ಎನ್.ಎಸ್.ವಿನಯ್, ಡಾ.ಹೆಚ್.ಎಲ್. ವೆಂಕಟೇಶ ಹಾಗೂ ಹೆಚ್.ಪಿ.ಸುಜಾತ ಚುನಾವಣಾ ಕಣದಲ್ಲಿದ್ದಾರೆ.

ಭಾರೀ ಮುನ್ನೆಚ್ಚರಿಕಾ ಕ್ರಮ

ಇದರ ಬೆನ್ನಲ್ಲೇ ಎಚ್ಚೆತ್ತ ರಾಜ್ಯ ಪೊಲೀಸರು ಮುನ್ನೆಚ್ಚರಿಕಾ ಕ್ರಮವಾಗಿ ಕಠಿಣ ಕ್ರಮಗಳನ್ನು ತೆಗೆದುಕೊಂಡಿದ್ದಾರೆ. ಈ ಮಧ್ಯೆ ಸುದ್ದಿಗಾರರೊಂದಿಗೆ ಮಾತನಾಡಿದ ಮುಖ್ಯಮಂತ್ರಿ ಬಸವರಾಜ್ ಬೊಮ್ಮಾಯಿ, ಅವಹೇಳನಕಾರಿ ಹೇಳಿಕೆ ಖಂಡಿಸಿ, ದೆಹಲಿ ಮತ್ತು ಉತ್ತರಪ್ರದೇಶದಲ್ಲಿ ಘರ್ಷಣೆಯಾಗಿರುವ ಹಿನ್ನೆಲೆಯಲ್ಲಿ ರಾಜ್ಯದಲ್ಲಿ ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಳ್ಳಲು ಪೊಲೀಸ್ ಅಧಿಕಾರಿಗಳೊಂದಿಗೆ ಸಭೆ ನಡೆಸಲಾಗಿದೆ ಎಂದರು.

ಇದೇ ವೇಳೆ ಆಸಿಡ್ ದಾಳಿ ಪ್ರಕರಣ ಕುರಿತು ಮಾತನಾಡಿ, ರಾಜ್ಯದಲ್ಲಿ ಆಸಿಡ್ ದಾಳಿಗಳು ಹೆಚ್ಚಾಗುತ್ತಿದೆ. ಅದಕ್ಕೆ ಸಂಬಂಧಿಸಿದಂತೆ ಕಠಿಣ ಕಾನೂನು ರೂಪಿಸಲು ಕಾನೂನು ಸಚಿವರಿಗೆ ತಿಳಿಸಿದ್ದೇವೆ. ಬರುವ ದಿನಗಳಲ್ಲಿ ಇಂತಹ ಘಟನೆಗಳು ನಡೆಯದ ಹಾಗೇ ನೋಡಿಕೊಳ್ಳಲಾಗುವುದು ಎಂದು ಭರವಸೆ ನೀಡಿದರು.

ಮೈಸೂರಲ್ಲೂ ಕಟ್ಟೆಚ್ಚರ

ಶಾಂತಿ–ಸೌಹಾರ್ದತೆ ಕಾಪಾಡುವಂತೆ ಕರೆ ನೀಡಿದ್ದಾರೆ ಎಂದು ತಿಳಿಸಿದರು.

ಇಂದು ಬೆಳಗ್ಗೆ ಗಸ್ತು ಕಾರ್ಯಾಚರಣೆ ತೀವ್ರಗೊಳಿಸಿರುವುದಲ್ಲದೆ, ದೇವಸ್ಥಾನ, ಚರ್ಚ್ ಹಾಗೂ ಮಸೀದಿಗಳ ಬಳಿ ಹೆಚ್ಚಿನ ರಕ್ಷಣಾ ಸಿಬ್ಬಂದಿ ನಿಯೋಜಿಸಿ ಕಟ್ಟೆಚ್ಚರ ವಹಿಸಲಾಗಿದೆ. ಸಾರ್ವಜನಿಕ ಸ್ಥಳ, ವಾಣಿಜ್ಯ ಕೇಂದ್ರಗಳು, ಲಷ್ಕರ್, ಮಂಡಿ, ಎನ್‌ಆರ್ ಮೊಹಲ್ಲಾ, ಉದಯಗಿರಿ, ರಾಜೀವ್‌ನಗರದಂತಹ ಸೂಕ್ಷ್ಮ ಪ್ರದೇಶಗಳಲ್ಲಿ ನಿಗಾ ವಹಿಸಿ ಅಹಿತಕರ ಘಟನೆಗಳು ನಡೆಯದಂತೆ ಕಟ್ಟೆಚ್ಚರ ವಹಿಸಲಾಗಿದೆ ಎಂದು ಕಾನೂನು–ಸುವ್ಯವಸ್ಥೆ ಡಿಸಿಪಿ ಪ್ರದೀಪ್ ಗುಂಟಿ ತಿಳಿಸಿದ್ದಾರೆ. ಪ್ರತಿಭಟನೆ, ಪ್ರಚೋದನೆ, ಹಿಂಸಾಚಾರಗಳಂತಹ ಘಟನೆಗಳಿಗೆ ಮುಂದಾಗಬಾರದೆಂದು ವಿವಿಧ ಸಂಘಟನೆಗಳ ಕಾರ್ಯಕರ್ತರು, ಸಾರ್ವಜನಿಕರಿಗೆ ಜಾಗೃತಿ ಮೂಡಿಸಲಾಗುತ್ತಿದ್ದು, ಆಯಾ ಠಾಣಾಧಿಕಾರಿಗಳು ಆ ವ್ಯಾಪ್ತಿಯಲ್ಲಿ ಗಸ್ತು ಕರ್ತವ್ಯ ದಲ್ಲಿದ್ದು, ನಿಗಾ ವಹಿಸುತ್ತಿದ್ದಾರೆ ಎಂದು ಡಾ.ಚಂದ್ರಗುಪ್ತ ತಿಳಿಸಿದರು.

ಮನುವಾದ ಪುನರ್ ಆಚರಣೆಗೆ ಹುನ್ನಾರ

● ಮಾಜಿ ಸಚಿವ ಹೆಚ್.ಸಿ. ಮಹದೇವಪ್ಪ ಆರೋಪ ● ಪಠ್ಯಪರಿಷ್ಕರಣೆಯಲ್ಲಿ ಮಹನೀಯರಿಗೆ ಅಪಮಾನ



ಮೈಸೂರಿನ ಕಾಂಗ್ರೆಸ್ ಭವನದಲ್ಲಿ ಶನಿವಾರ ಮಾಜಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು. ವಿಧಾನ ಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ, ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಎಂ.ಲಕ್ಷ್ಮಣ್, ಮೈಸೂರು ನಗರ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಆರ್. ಮೂರ್ತಿ, ಗ್ರಾಮಾಂತರ ಜಿಲ್ಲಾ ಅಧ್ಯಕ್ಷ ಡಾ.ಬಿ.ಜೆ.ವಿಜಯಕುಮಾರ್ ಇದ್ದರು.

ಮೈಸೂರು,ಜೂ.11(ಎಂಟಿವೈ)– ಶಾಲಾ ಪಠ್ಯಪುಸ್ತಕ ಪರಿಷ್ಕರಣೆಯಲ್ಲಿ ಮಹನೀಯರ ಸಾಧನೆಯನ್ನು ತಿರುಚಿ ಮನುವಾದದ ಇತಿಹಾಸ ಮರುಕಳಿಸುವ ಹುನ್ನಾರವನ್ನು ಬಿಜೆಪಿ ನಡೆಸುತ್ತಿದೆ ಎಂದು ಮಾಜಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಆರೋಪಿಸಿದ್ದಾರೆ.

ಮೈಸೂರಿನ ಕಾಂಗ್ರೆಸ್ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಂತರು, ದಾರ್ಶನಿಕರು ಸೇರಿದಂತೆ ಇನ್ನಿತರ ಸಾಧಕರ ಸಾಧನೆಯನ್ನು ಪಠ್ಯ ಪುಸ್ತಕ ಪರಿಷ್ಕರಣೆ ನೆಪದಲ್ಲಿ ಬದಲಾಯಿಸುವ ಮೂಲಕ ಬಿಜೆಪಿ ಹೊಸ ಚರಿತ್ರೆ ಸೃಷ್ಟಿಸಲು ಹೊರಟಿದೆ. ಬಸವಣ್ಣ, ಅಂಬೇಡ್ಕರ್, ನಾರಾಯಣ ಗುರು, ಕುವೆಂಪು ಅವರನ್ನು ತೆರೆಮರೆಗೆ ಸರಿಸಿ ಕೋಮುವಾದದ ಪಠ್ಯವನ್ನು ಸೇರಿಸಲಾಗಿದೆ. ಧರ್ಮವೆಂಬ ಆಫೀಮನ್ನು ಹರಡುತ್ತಿದ್ದಾರೆ ಎಂದು ಕಿಡಿಕಾರಿದರು.

ಧರ್ಮ, ಜಾತಿಯ ಆಧಾರದ ಮೇಲೆ ಪಠ್ಯ ರಚನೆ ಮಾಡಿ ಹಿಂದುತ್ವ ಅಜೆಂಡಾ ಜಾರಿಗೆ ಅವಕಾಶ ಕೊಡಬಾರದು. ಸಂವಿಧಾನ, ಪ್ರಜಾಪ್ರಭುತ್ವ ವಿರೋಧಿಯಾಗಿ ನಡೆಯುತ್ತಿರುವ ಆಡಳಿತಕ್ಕೆ ಪರಿಷತ್ ಚುನಾವಣೆಯಲ್ಲಿ ಬಿಜೆಪಿಯನ್ನು ಸೋಲಿಸುವ ಮೂಲಕ ಎಚ್ಚರಿಕೆ ಸಂದೇಶವನ್ನು ರವಾನಿಸಬೇಕು ಎಂದು ತಿಳಿಸಿದರು,

ಪ್ರತಿವರ್ಷ ಎರಡು ಕೋಟಿ ಉದ್ಯೋಗ ನೀಡುವ ವಚನ ನೀಡಿದ್ದ ಪ್ರಧಾನಿ ನರೇಂದ್ರ ಮೋದಿ, ಈಗ ನಿರುದ್ಯೋಗ ಹೆಚ್ಚಳಕ್ಕೆ ಕಾರಣವಾಗಿದ್ದಾರೆ. ದೇಶದಲ್ಲಿ 98 ಲಕ್ಷ ಬ್ಯಾಕ್ ಲಾಗ್ ಹುದ್ದೆಗಳು ಖಾಲಿ ಇವೆ. ಉಳುವವನೇ ಭೂಮಿಯ ಒಡೆಯ ಎನ್ನುವುದನ್ನು ರಾತ್ರೋರಾತ್ರಿ ತೆಗೆದುಬಿಟ್ಟರು. ಎಪಿಎಂಸಿ, ಭೂಸ್ವಾಧೀನ ಕಾಯಿದೆ ಜಾರಿಗೊಳಿಸಿ ರೈತರ ಬೆನ್ನುಮೂಳೆ ಮುರಿದರು. ಪಠ್ಯಪರಿಷ್ಕರಣೆಯಲ್ಲಿ ಬಹುತ್ವಕ್ಕೆ ಧಕ್ಕೆಯಾಗಿದೆ ಎಂದು ಸಾಹಿತಿಗಳು ತಮ್ಮ ಪಾಠವನ್ನು ವಾಪಸು ತೆಗೆದುಕೊಂಡರೂ ಯಾವುದೇ ಕ್ರಮಕೈಗೊಂಡಿಲ್ಲ ಎಂದು ಅತೃಪ್ತಿ ವ್ಯಕ್ತಪಡಿಸಿದರು.

ಸಂಸತ್ತಿನಲ್ಲಿ ಸಮಲೋಚನೆ ಮಾಡದೆ, ಜನರ ಅಭಿಪ್ರಾಯ ತೆಗೆದುಕೊಳ್ಳದೆ ನೋಟು ಅಮಾನ್ಯೀಕರಣ ಮಾಡಿದ ಸಲುವಾಗಿ ಬಡವರು, ಮಧ್ಯಮ ವರ್ಗದ ಜನರು ಸಂಕಷ್ಟಕ್ಕೀಡಾದರು. ದುಡಿಯುವ ಕೈಗಳಿಗೆ ಉದ್ಯೋಗ ಸಿಗದೆ ಪರದಾಡುತ್ತಿದ್ದಾರೆ. ಈ ಸರ್ಕಾರ ಸಾಂವಿಧಾನಿಕ ಸಂಸ್ಥೆಗಳನ್ನು ದುರ್ಬಳಕೆ ಮಾಡಿಕೊಂಡು ರಾಜಕೀಯ ಎದುರಾಳಿಗಳನ್ನು ಕಟ್ಟಿಹಾಕುವ ಕೆಲಸ ಮಾಡುತ್ತಿರುವುದನ್ನು ಬಿಟ್ಟರೆ ಬೇರೇನೂ ಅಭಿವೃದ್ಧಿ ಮಾಡುತ್ತಿಲ್ಲ ಎಂದು ಟೀಕಿಸಿದರು.

ಪದವೀಧರರ ಕ್ಷೇತ್ರದ ಚುನಾವಣೆಯಲ್ಲಿ ಮತದಾರರನ್ನು ಭೇಟಿ ಮಾಡಿ ರಾಜ್ಯ ಮತ್ತು ಕೇಂದ್ರದ ದುರಾಡಳಿತದ ಕಾರ್ಯವೈಖರಿಯನ್ನು ಮನವರಿಕೆ ಮಾಡಿಕೊಡಲಾಗಿದೆ. ಅಧಿಕಾರ ಪಲ್ಲಟ ಸಾಧ್ಯ ಇಲ್ಲದಿದ್ದರೂ ಸ್ಪಷ್ಟವಾದ ರಾಜಕೀಯ ಸಂದೇಶ ರವಾನಿಸಲು ಇದು ಸುವರ್ಣಾವಕಾಶ. ನಾಡಿನ ಹಿತ ಕಾಪಾಡುವ ಗುರುತರ ಜವಾಬ್ದಾರಿ ಯುವ ಸಮೂಹದ ಮೇಲಿದೆ. ಅದನ್ನು ಇನ್ನಾದರೂ ಪರಿಣಾಮಕಾರಿಯಾಗಿ ನಿಭಾಯಿಸಬೇಕು. ದೇಶದಲ್ಲಿ 1964ರಲ್ಲಿ ಶಿಕ್ಷಣದ ಪ್ರಮಾಣ ಶೇ.12ರಷ್ಟು ಇತ್ತು. ಶಿಕ್ಷಣ ನೀತಿಯನ್ನು ರೂಪಿಸಿ ಜಾರಿಗೊಳಿಸುವ ಕೆಲಸ ಮಾಡಿದ್ದರಿಂದ ಶಿಕ್ಷಣದ ಪ್ರಮಾಣ ಜಾಸ್ತಿಯಾಯಿತು. ವಿದ್ಯಾರ್ಥಿ ವೇತನ, ಸಾರಿಗೆ ಮೊದಲಾದ ಅನುಕೂಲ ಮಾಡಿಕೊಡಲಾಯಿತು. ಆದರೆ, ಹೊಸ ಶಿಕ್ಷಣ ನೀತಿಯನ್ನು ಸಂಸತ್‌ನಲ್ಲಿ ಚರ್ಚಿಸದೆ ಜಾರಿಗೊಳಿಸಿರುವುದು ಸರಿಯಲ್ಲ ಎಂದು ಆರೋಪಿಸಿದರು.

ಬಿಜೆಪಿ ದುರಾಡಳಿತ, ಜನವಿರೋಧಿ ಕಾರ್ಯವೈಖರಿ ಇದೀಗ ಯುವ ಜನರು ಸೇರಿದಂತೆ ಎಲ್ಲ ವರ್ಗದ ಜನರಿಗೂ ಅರ್ಥವಾಗುತ್ತಿದೆ. ಸಂವಿಧಾನ, ಸಾಮರಸ್ಯ, ಪ್ರಜಾಪ್ರಭುತ್ವ ವ್ಯವಸ್ಥೆ ಧಕ್ಕೆ ತರುತ್ತಿರುವ ಬಿಜೆಪಿಗೆ ದಕ್ಷಿಣ ಪದವೀಧರರ ಚುನಾವಣೆಯಲ್ಲಿ ತಕ್ಕಪಾಠ ಕಲಿಸಲಿದ್ದಾರೆ. ಈ ಮೂಲಕ ಕೇಂದ್ರ, ರಾಜ್ಯ ಸರ್ಕಾರಕ್ಕೆ ಎಚ್ಚರಿಕೆ ನೀಡಲಿದ್ದಾರೆ ಎಂದು ತಿಳಿಸಿದರು

ಸುದ್ದಿಗೋಷ್ಠಿಯಲ್ಲಿ ವಿಧಾನ ಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ, ಮಾಜಿ ಶಾಸಕ ಎಂ.ಕೆ. ಸೋಮಶೇಖರ್, ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಎಂ.ಲಕ್ಷ್ಮಣ್, ಮೈಸೂರು ನಗರ ಕಾಂಗ್ರೆಸ್ ಅಧ್ಯಕ್ಷ ಆರ್. ಮೂರ್ತಿ, ಗ್ರಾಮಾಂತರ ಜಿಲ್ಲಾ ಅಧ್ಯಕ್ಷ ಡಾ.ಬಿ.ಜೆ.ವಿಜಯಕುಮಾರ್, ಪ್ರಧಾನ ಕಾರ್ಯದರ್ಶಿ ಎಂ.ಶಿವಣ್ಣ,ಜಿಪಂ ಮಾಜಿ ಅಧ್ಯಕ್ಷ ಬಿ.ಎಂ.ರಾಮು, ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಲತಾಸಿದ್ದಶೆಟ್ಟಿ, ನಗರ ಘಟಕದ ಅಧ್ಯಕ್ಷೆ ಪುಷ್ಪಲತಾ ಟಿ.ಬಿ. ಚಿಕ್ಕಣ್ಣ, ಮುಖಂಡರಾದ ಎಡತೊರೆ ನಿಂಗರಾಜು, ಬಸವಣ್ಣ, ಕೆ.ಮಹೇಶ್ ಇತರರು ಇದ್ದರು.

ಮೈಸೂರು–ಬೆಂಗಳೂರು ಹೆದ್ದಾರಿ ಮೇಲ್ದರ್ಜೆಗೇರಿಸಿದ್ದೇ ಯುಪಿಎ ಸರ್ಕಾರ

ಮೈಸೂರು, ಜೂ.11(ಎಂಟಿವೈ)– ಹದಿಮೂರು ಬಾರಿ ಬಜೆಟ್ ಮಂಡಿಸಿ, 5 ವರ್ಷಗಳ ಕಾಲ ಮುಖ್ಯಮಂತ್ರಿಯಾಗಿ ದಕ್ಷ ಆಳ್ವಿಕೆ ನೀಡಿರುವ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರ ಬಗ್ಗೆ ಸಂಸದ ಪ್ರತಾಪಸಿಂಹ ಬಾಲಿಶ ಹೇಳಿಕೆ ನೀಡುವುದನ್ನು ನಿಲ್ಲಿಸಬೇಕು ಎಂದು ಮಾಜಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ತಾಕೀತು ಮಾಡಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಂಸದ ಪ್ರತಾಪ್ ಸಿಂಹ, ರಾಜಕೀಯ ಮಾಡುವುದಕ್ಕಾಗಿಯೇ ಮಾತನಾಡುವುದನ್ನು ನಿಲ್ಲಿಸಬೇಕು. ಮಾಜಿ ಸಿಎಂ ಸಿದ್ದರಾಮಯ್ಯ ಅವರಿಗೆ ಅರ್ಥಶಾಸ್ತ್ರ ಗೊತ್ತಿಲ್ಲ ಎನ್ನುತ್ತಾರೆ. ಆದರೆ, ಅವರು 13 ಬಾರಿ ಬಜೆಟ್ ಮಂಡಿಸಿ ರಾಜ್ಯ ಅಭಿವೃದ್ಧಿ ಮಾಡಿ, ಇಡೀ ದೇಶದಲ್ಲಿ ಉತ್ತಮ ಮುಖ್ಯಮಂತ್ರಿ ಎಂಬ ಹಿರಿಮೆಗೆ ಭಾಜನರಾಗಿದ್ದರು. ಅದನ್ನು ಮನವರಿಕೆ ಮಾಡಿಕೊಳ್ಳಬೇಕು ಎಂದು ಕಿಡಿಕಾರಿದರು.

ಯುಪಿಎ ಸರ್ಕಾರದ ಕೊಡುಗೆ: ಸಂಸದ ಪ್ರತಾಪ ಸಿಂಹ ಪದೇ ಪದೇ ಸುಳ್ಳು ಹೇಳುವ ಮೂಲಕ ಜನರನ್ನು ದಾರಿತಪ್ಪಿಸುವ ಕೆಲಸ ಮಾಡುತ್ತಿದ್ದಾರೆ. ಮೈಸೂರು –ಬೆಂಗಳೂರು ರಾಜ್ಯ ಹೆದ್ದಾರಿಯನ್ನು 2014ರಲ್ಲಿ ರಾಷ್ಟ್ರೀಯ ಹೆದ್ದಾರಿಯಾಗಿ ಮೇಲ್ದರ್ಜೆಗೆ ಏರಿಸಿದ್ದೇ ಕಾಂಗ್ರೆಸ್ ಸರ್ಕಾರ. ಈ ಹೆದ್ದಾರಿ ಯೋಜನೆ ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರದ ಕೊಡುಗೆ. ಯುಪಿಎ ಸರ್ಕಾರ ಅಧಿಸೂಚನೆ ಹೊರಡಿಸಿದ್ದರಿಂದ ದಶಪಥ ಯೋಜನೆ ಆರಂಭಕ್ಕೆ ಕಾರಣವಾಯಿತು. ಅಂದು ಕೇಂದ್ರದಲ್ಲಿ ಸಾರಿಗೆ ಸಚಿವರಾಗಿದ್ದ ಆಸ್ಕರ್ ಫರ್ನಾಂಡಿಸ್ ಅವರನ್ನು ಲೋಕೋಪಯೋಗಿ ಸಚಿವನಾಗಿದ್ದ ನಾನು ಮತ್ತು ಸಿಎಂ ಸಿದ್ದರಾಮಯ್ಯ ಭೇಟಿ ಮಾಡಿ ಈ ಹೆದ್ದಾರಿ ಅಭಿವೃದ್ಧಿಗೆ ಕೋರಿಕೆ ಸಲ್ಲಿಸಿದ್ದೆವು. ಇದಕ್ಕೆ ಸ್ಪಂದಿಸಿ ರಾಷ್ಟ್ರೀಯ ಹೆದ್ದಾರಿಯಾಗಿ ಮೇಲ್ದರ್ಜೆಗೇರಿಸಿದ್ದರು. ಆಗ 2 ಸಾವಿರ ಕಿ.ಮೀ. ಹೆದ್ದಾರಿಯನ್ನು ರಾಷ್ಟ್ರೀಯ ಹೆದ್ದಾರಿಯಾಗಿ ಪರಿವರ್ತನೆ ಮಾಡಲಾಯಿತು ಎಂದರು

ಮೈಸೂರು ಸಂಸದ ಪ್ರತಾಪ ಸಿಂಹ ಅವರ ವ್ಯಾಪ್ತಿಗೆ ಮೈಸೂರು–ಬೆಂಗಳೂರು ಹೆದ್ದಾರಿಯ 3 ಕಿ.ಮೀ.ಗೂ ಕಡಿಮೆ ವಿಸ್ತೀರ್ಣದ ರಸ್ತೆ ಸೇರುತ್ತದೆ. ಆದರೂ ಪೂರ್ಣ ಪ್ರಮಾಣದ ರಸ್ತೆಯನ್ನು ನಾನೇ ಮಾಡಿದೆ ಎಂದು ಹೇಳಿಕೊಂಡು ತಿರುಗಾಡುತ್ತಾರೆ ಎಂದು ಸಂಸದರ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿದರು.

ಒಂದು ವಾರ ವಿಶ್ರಾಂತಿಗೆ ಹೆಚ್‌ಡಿಕೆಗೆ ವೈದ್ಯರ ಸೂಚನೆ



ಬೆಂಗಳೂರು, ಜೂ.11– ವೈದ್ಯರ ಸಲಹೆ ಮೇರೆಗೆ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ, ಒಂದು ವಾರ ಕಾಲ ವಿಶ್ರಾಂತಿ ತೆಗೆದು ಕೊಳ್ಳಲಿದ್ದಾರೆ. ಈ ವೇಳೆ ಯಾರನ್ನು ಭೇಟಿ ಮಾಡುವುದು ಅಥವಾ ಹೆಚ್ಚು ಮಾತನಾಡುವುದು ಮಾಡಬಾರದು ಎಂದು ವೈದ್ಯರು ಸಲಹೆ ನೀಡಿರುವ ಹಿನ್ನೆಲೆಯಲ್ಲಿ ವಿಶ್ರಾಂತಿ ಪಡೆಯುತ್ತಿರುವುದಾಗಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ವಿಶ್ರಾಂತಿ ಸಂದರ್ಭದಲ್ಲಿ ನಾನು ಸಾರ್ವಜನಿಕರ ಭೇಟಿಗೆ ಲಭ್ಯ ಇರುವುದಿಲ್ಲ. ಸಾರ್ವಜನಿಕರು ಸಹಕರಿಸಬೇಕು ಎಂದು ಮನವಿ ಮಾಡಿದ್ದಾರೆ.

ಒಕ್ಕಲಿಗರ ತುಳಿಯೋದೆ ಇವನ ಒನ್ ಪಾಯಿಂಟ್ ಅಜೆಂಡಾ...

ಕುಮಾರಸ್ವಾಮಿಗೆ ಹಿಗ್ಗಾ-ಮುಗ್ಗಾ ತರಾಟೆ ತೆಗೆದುಕೊಂಡ ಎಸ್.ಆರ್.ಶ್ರೀನಿವಾಸ್



ತುಮಕೂರು: ರಾಜ್ಯಸಭಾ ಚುನಾವಣೆಯಲ್ಲಿ ನಾನು ಜೆಡಿಎಸ್ ಪಕ್ಷಕ್ಕೆ ಮತ ಹಾಕಿದ್ದೇನೆ. ಆದರೂ ಮಾಜಿ ಸಿಎಂ ಕುಮಾರಸ್ವಾಮಿ ಹಾಗೂ ರೇವಣ್ಣ ಅವರು ನನ್ನ ಟಾರ್ಗೆಟ್ ಮಾಡುತ್ತಿದ್ದಾರೆ ಎಂದು ಗುಬ್ಬಿ ಶಾಸಕ ಎಸ್.ಆರ್. ಶ್ರೀನಿವಾಸ್ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ನಗರದಲ್ಲಿ ಮಾತನಾಡಿದ ಅವರು, ನಾನು ಮೊದಲಿನಿಂದಲೂ ಬಿಜೆಪಿ ವಿರೋಧಿಯಾಗಿದ್ದೇನೆ. ಹೀಗಿರುವಾಗ ಬಿಜೆಪಿಗೆ ಮತ ಹಾಕುತ್ತೇನೆಯೇ ಎಂದು ಪ್ರಶ್ನಿಸಿದರು. ಅವನು ಉತ್ತಮನಾ, ಅವನು ಯಾವುದರಲ್ಲಿ ಉತ್ತಮ ಬೆಳಗ್ಗೆ ಒಂದು ಹೇಳ್ತಾನೆ, ಸಂಜೆ ಒಂದು ಹೇಳ್ತಾನೆ ಎಂದು ಕಿಡಿಕಾರಿರುವ ಶ್ರೀನಿವಾಸ್, ನಾನು ಸರಿಯಾಗಿ ಬ್ಯಾಲೆಟ್ ಪೇಪರ್ ತೋರಿಸಿದ್ದೇನೆ. ಮೂರ್ನಾಲ್ಕು ನಿಮಿಷ ಪೇಪರ್ ಹಿಡಿದುಕೊಂಡಿದ್ದೇನೆ. ಅದಾದ ಮೇಲೆ ಹೋಗಿ ನಾನು ವೋಟ್ ಹಾಕಿದ್ದೇನೆ. ಅವನೇನು ಕತ್ತೆ ಕಾಯುತ್ತಿದ್ನಾ, ಹೆಬ್ಬೆಟ್ಟು ತೆಗಿ ಅನ್ನಬೇಕಿತ್ತು ಅಂತ ಕುಮಾರಸ್ವಾಮಿ ವಿರುದ್ಧ ಏಕವಚನದಲ್ಲೇ ವಾಗ್ದಾಳಿ ನಡೆಸಿದ್ದಾರೆ.

ನನಗಿರುವ ಮಾಹಿತಿ ಪ್ರಕಾರ ಕುಮಾರಸ್ವಾಮಿ ಮನೆಯವರೇ ನಾಟಕ ಮಾಡ್ತಿದ್ದಾರೆ. ನನ್ನ ಮುಗಿಸಬೇಕೆಂದು ಅವರೇ ಕ್ರಾಸ್ ವೋಟಿಂಗ್ ಮಾಡಿಸಿದ್ದಾರೆ. ತಮಗೆ ಬೇಕಾದವರಿಂದ ಕ್ರಾಸ್ ವೋಟಿಂಗ್ ಮಾಡಿಸಿದ್ದಾರೆ ಎಂದು ಕುಮಾರಸ್ವಾಮಿ ವಿರುದ್ಧ ಆರೋಪ ಮಾಡಿರುವ ಶ್ರೀನಿವಾಸ್, ನಾನು ಪ್ರಾರಂಭದಿಂದಲೂ ಬಿಜೆಪಿ ವಿರೋಧಿಸುತ್ತ ಬಂದಿದ್ದೇನೆ. ಹಾಕಿದ್ರೆ ನಾನು ಕಾಂಗ್ರೆಸ್‌ಗೆ ಹಾಕುತೇನಾ. ನಾನೇನು ಇವನಿಗೆ ಹೆದರಿಕೊಳ್ಳಬೇಕಾ, ನನ್ನ ವಿರುದ್ಧ ಅಭ್ಯರ್ಥಿ ಹಾಕಿದ ಮೇಲೆ ಹೆದರುವುದೇನಿದೆ ಇನ್ನೊಂದು ಜನ್ಮ ಎತ್ತಿದ್ರೂ ಇವನ ಪಕ್ಷಕ್ಕೆ ಬಹುಮತ ಬರಲ್ಲ. ಒಕ್ಕಲಿಗರನ್ನು ತುಳಿಯೋದೇ ಇವನ ಒನ್ ಪಾಯಿಂಟ್ ಅಜೆಂಡಾ. ಒಳ್ಳೇ ಕಾರು, ಒಳ್ಳೇ ಬಟ್ಟೆ ಹಾಕಿಕೊಂಡು ಹೋದ್ರೆ ಕೆಂಗಣ್ಣಿಗೆ ಗುರಿ ಹೋಗುತ್ತೇವೆ ಎಂದು ಶ್ರೀನಿವಾಸ್ ಕಿಡಿಕಾರಿದ್ದಾರೆ.

ರಾಜ್ಯಸಭಾ ಚುನಾಣೆಗೆ ಮತ ಹಾಕುವ ಸಂಬಂಧ ನಾನು, ಶಿವಲಿಂಗೇಗೌಡ, ಜಿ.ಡಿ. ದೇವೇಗೌಡರು ಹಾಗೂ ಶ್ರೀನಿವಾಸಗೌಡ ಅವರು ಕುಳಿತು ಚರ್ಚೆ ಮಾಡಿದ್ದೆವು. ಆ ಸಂದರ್ಭ ದಲ್ಲಿ ಶ್ರೀನಿವಾಸಗೌಡರು ನಾನು ಕಾಂಗ್ರೆಸ್‌ಗೆ ಮತ ಹಾಕುತ್ತೇನೆ ಎಂದು ಹೇಳಿದ್ದರು. ಆದರೆ ನಾವು ಮೂವರು ಜೆಡಿಎಸ್ ಪಕ್ಷದ ಅಭ್ಯರ್ಥಿಗೆ ಮತ ಹಾಕಲು ತೀರ್ಮಾನಿಸಿದ್ದೆವು. ಅದರಂತೆ ಜೆಡಿಎಸ್ ಅಭ್ಯರ್ಥಿಗೆ ಮತ ಹಾಕಿದ್ದೇವೆ. ಆದರೂ ಕುಮಾರಸ್ವಾಮಿ ಮತ್ತು ರೇವಣ್ಣ ತಮ್ಮ ಅನುಕೂಲಕ್ಕೆ ತಕ್ಕಂತೆ ಹೇಳಿಕೆಗಳನ್ನು ನೀಡುತ್ತಿದ್ದಾರೆ. ಅವರು ದೊಡ್ಡವರು ಹೇಗೆ ಬೇಕಾದರೂ ಮಾತನಾಡುತ್ತಾರೆ. ಅಂತಹ ನೀಚ ವ್ಯಕ್ತಿತ್ವ ನಮಗಿಲ್ಲ ಎಂದು ಕಿಡಿಕಾರಿದರು. ರಾಜ್ಯಸಭೆ ಚುನಾವಣೆಯಲ್ಲಿ ಅಡ್ಡಮತದಾನ ಹಿನ್ನೆಲೆ ತುಮಕೂರಿನ ವಿದ್ಯಾನಗರದಲ್ಲಿರುವ ಶಾಸಕ ಶ್ರೀನಿವಾಸ್ ಮನೆ ಎದುರು ಜೆಡಿಎಸ್ ಕಾರ್ಯಕರ್ತರು ಪ್ರತಿಭಟನೆ ನಡೆಸಿದ್ದಾರೆ. ಈ ವೇಳೆ ಜೆಡಿಎಸ್ ಕಾರ್ಯಕರ್ತರು ಮತ್ತು ಶಾಸಕರ ಬೆಂಬಲಿಗರು ಪರಸ್ಪರ ಮುಖಾಮುಖಿಯಾಗಿದ್ದಾರೆ. ಪರಿಸ್ಥಿತಿ ನಿಯಂತ್ರಿಸುವುದಕ್ಕೆ ಪೊಲೀಸರು ಹರಸಾಹಸ ಪಟ್ಟಿದ್ದಾರೆ.

ನಿವೃತ್ತ ಪೊಲೀಸ್ ಸಿಬ್ಬಂದಿ ಬ್ಯಾಗ್ ಕತ್ತರಿಸಿ ಲಕ್ಷ ರೂ. ಕಳವು

ಮೈಸೂರು, ಜೂ.11– ಬಸ್‌ನಲ್ಲಿ ನಿವೃತ್ತ ಪೊಲೀಸ್ ಸಿಬ್ಬಂದಿಯ ಬ್ಯಾಗ್ ಕತ್ತರಿಸಿ 1 ಲಕ್ಷ ರೂ. ಎಗರಿಸಿರುವ ಘಟನೆ ಕೆ.ಆರ್.ನಗರದಲ್ಲಿ ನಡೆದಿದೆ.

ಸಾಲಿಗ್ರಾಮ ತಾಲೂಕಿನ ಹಳೆಮಿರ್ಲೆ ಗ್ರಾಮದ ನಿವಾಸಿ, ನಿವೃತ್ತ ಪೊಲೀಸ್ ಸಿಬ್ಬಂದಿ ಕೃಷ್ಣೇಗೌಡ ಹಣ ಕಳೆದುಕೊಂಡವರು. ಟ್ರ್ಯಾಕ್ಟರ್ ಖರೀದಿಸಲು ಮೈಸೂರಿನ ಖಾಸಗಿ ಬ್ಯಾಂಕ್‌ನಿಂದ ಸಾಲ ಪಡೆದಿದ್ದ ಇವರು ಕಂತು ಪಾವತಿಸಲೆಂದು ಜೂ.9ರಂದು ಬಸ್‌ನಲ್ಲಿ ತೆರಳುವಾಗ ಈ ಘಟನೆ ನಡೆದಿದೆ. ಕೆ.ಆರ್.ನಗರ ನಿಲ್ದಾಣದಿಂದ ಸ್ವಲ್ಪ ದೂರದಲ್ಲೇ ಟಿಕೆಟ್ ಕೊಳ್ಳಲು ಬ್ಯಾಗ್‌ನಿಂದ ಹಣ ತೆಗೆದುಕೊಳ್ಳಲು ನೋಡಿದಾಗ ಅದರಲ್ಲಿದ್ದ 1 ಲಕ್ಷ ರೂ. ಕಳ್ಳತನವಾಗಿದ್ದು ಗೊತ್ತಾಗಿದೆ. ಅಲ್ಲಿಯೇ ಬಸ್‌ನಿಂದ ಇಳಿದು ನಿಲ್ದಾಣಕ್ಕೆ ವಾಪಸ್ಸು ಬಂದು ವಿಚಾರಿಸಿದರೂ ಯಾವ ಸುಳಿವೂ ಸಿಕ್ಕಿಲ್ಲ. ಬಸ್ ಹತ್ತುವಾಗ ಹೆಚ್ಚು ಜನರಿದ್ದು ಆ ಸಂದರ್ಭದಲ್ಲೇ ಖದೀಮರು ಬ್ಯಾಗ್ ಕತ್ತರಿಸಿ, ಹಣ ಕದ್ದಿರಬಹುದು ಎಂದು ಪೊಲೀಸರಿಗೆ ನೀಡಿರುವ ದೂರಿನಲ್ಲಿ ತಿಳಿಸಿದ್ದಾರೆ. ಈ ಸಂಬಂಧ ಕೆ.ಆರ್.ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಶೋರೂಂನಲ್ಲೇ ಸ್ಕೂಟರ್ ಕಳವು

ಮೈಸೂರು, ಜೂ.11– ಖದೀಮರು ಶೋ ರೂಂನಿಂದಲೇ ಸ್ಕೂಟರ್ ಎಗರಿಸಿರುವ ಘಟನೆ ಬನ್ನೂರಿನಲ್ಲಿ ನಡೆದಿದೆ. ಇಲ್ಲಿನ ಮೈಸೂರು–ಮಳವಳ್ಳಿ ಮುಖ್ಯರಸ್ತೆಯ ಬನ್ನೂರು ಸ್ಪೋರ್ಟ್ಸ್ ಕ್ಲಬ್ ಕಟ್ಟಡದ ಮಳಿಗೆಯಲ್ಲಿರುವ ಶ್ರೀ ಸಾಯಿ ಮೋಟಾರ್ಸ್ ಶೋ ರೂಂನಲ್ಲಿ ಈ ಘಟನೆ ನಡೆದಿದ್ದು, ಖದೀಮರು 1.10 ಲಕ್ಷ ರೂ. ಬೆಲೆಯ ಸುಜುಕಿ ಅವೆನಿಸ್ 125 ಡಿಸ್ಕ್ ಸ್ಕೂಟರ್ ಅನ್ನು ಕದ್ದೊಯ್ದಿದ್ದಾರೆ. ಗಾಜು ಅಳವಡಿಸಿರುವ ಭಾಗದಲ್ಲಿ 2 ಸ್ಕೂಟರ್ ನಿಲ್ಲಿಸಲಾಗಿತ್ತು. ಯಾರೋ ದುಷ್ಕರ್ಮಿಗಳು ಶೆಲ್ಟರ್ ತೆಗೆದು ಡ್ರಾಯರ್‌ನಲ್ಲಿದ್ದ ಕೀ ಬಳಿ 1 ಸ್ಕೂಟರ್ ಅನ್ನು ಕಳ್ಳತನ ಮಾಡಿದ್ದಾರೆ. ಮತ್ತೊಂದು ಸ್ಕೂಟರ್‌ನ ಕೀಯನ್ನು ಅದರ ಮೇಲೆಯೇ ಇಟ್ಟು ಶೆಲ್ಟರ್ ಮುಚ್ಚಿ, ಅಲ್ಲಿಂದ ಪರಾರಿಯಾಗಿದ್ದಾರೆ. ಜೂ.9ರ ಬೆಳಗ್ಗೆ 9.30ಕ್ಕೆ ಶೋ ರೂಂ ತೆರೆಯಲು ಬಂದಾಗ ಸ್ಕೂಟರ್ ಕಳ್ಳತನವಾಗಿರುವುದು ಬೆಳಕಿಗೆ ಬಂದಿದೆ. ಈ ಸಂಬಂಧ ಶೋ ರೂಂ ಮಾಲೀಕ ಪವನ್ ನೀಡಿರುವ ದೂರಿನನ್ವಯ ಬನ್ನೂರು ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಕಾಮಗಾರಿಗೆ ಶೇಖರಿಸಿದ್ದ ಕಬ್ಬಿಣದ ಸರಳು ಕಳವು

ಮೈಸೂರು, ಜೂ.11– ಪೊಲೀಸ್ ಆರೋಗ್ಯ ಕೇಂದ್ರ ನಿರ್ಮಾಣ ಕಾಮಗಾರಿಗೆಂದು ಇಟ್ಟಿದ್ದ ಕಬ್ಬಿಣದ ಸರಳುಗಳನ್ನು ಖದೀಮರು ಕದ್ದೊಯ್ದಿರುವ ಘಟನೆ ಮೈಸೂರಿನಲ್ಲಿ ನಡೆದಿದೆ. ನಗರದ ಜಲಪುರಿಯಲ್ಲಿ ಪೊಲೀಸ್ ಆರೋಗ್ಯ ಕೇಂದ್ರ ನಿರ್ಮಾಣ ವಾಗುತ್ತಿದ್ದು, ಗುತ್ತಿಗೆದಾರ ಜೂ.7 ರಾತ್ರಿ ಸುಮಾರು 25 ಸಾವಿರ ರೂ. ಮೌಲ್ಯದ 300 ಕೆ.ಜಿ. ಕಬ್ಬಿಣದ ಸರಳುಗಳನ್ನು ತರಿಸಿದ್ದರು. ಮರುದಿನ ಬೆಳಗ್ಗೆ ಸ್ಥಳಕ್ಕೆ ಹೋಗಿ ನೋಡುವಷ್ಟರಲ್ಲಿ ಸರಳುಗಳು ನಾಪತ್ತೆಯಾಗಿದ್ದವು. ಈ ಸಂಬಂಧ ಇಂಜಿನಿಯರ್ ಕೆ.ಟಿ.ಗೋವಿಂದರಾಜು ನಜರ್‌ಬಾದ್ ಪೊಲೀಸ್ ಠಾಣೆಗೆ ದೂರು ನೀಡಿದ್ದು, ಪ್ರಕರಣ ದಾಖಲಾಗಿದೆ.

7 ತಿಂಗಳ ಹಿಂದೆಯೇ ಜೆಡಿಎಸ್‌ನಿಂದ ನನ್ನ ಉಚ್ಚಾಟನೆ



ಕೋಲಾರ: ಶುಕ್ರವಾರ ನಡೆದ ರಾಜ್ಯಸಭಾ ಚುನಾವಣೆ ಸಂದರ್ಭ ಜೆಡಿಎಸ್ ಶಾಸಕ ಶ್ರೀನಿವಾಸ್‌ಗೌಡ ಕಾಂಗ್ರೆಸ್ ಅಭ್ಯರ್ಥಿಗೆ ಮತ ಹಾಕಿ ಭಾರೀ ಚರ್ಚೆಗೆ ಗ್ರಾಸವಾಗಿದ್ದಾರೆ. ಕೋಲಾರದಲ್ಲಿ ಮಾತನಾಡಿದ ಶ್ರೀನಿವಾಸ್‌ಗೌಡ, ನಿನ್ನೆ ನಡೆದ ರಾಜ್ಯಸಭಾ ಚುನಾವಣೆಯಲ್ಲಿ ನಾನು ಕಾಂಗ್ರೆಸ್‌ಗೆ ಮತ ಹಾಕಿದ್ದೇನೆ. ಈ ಹಿನ್ನೆಲೆ ಜೆಡಿಎಸ್ ಮುಖಂಡರು ನನ್ನ ಮನೆ ಮುಂದೆ ಪ್ರತಿಭಟನೆ ಮಾಡಿದ್ದಾರೆ ಎಂದು ತಿಳಿಸಿದರು. 7 ತಿಂಗಳ ಹಿಂದೆಯೇ ಪ್ರಜ್ವಲ್ ರೇವಣ್ಣ, ನನ್ನನ್ನು ಉಚ್ಚಾಟನೆ ಮಾಡಿದ್ದರು. ಇದೀಗ ಜೆಡಿಎಸ್‌ನವರಿಗೆ ನನ್ನ ವಿಷಯದಲ್ಲಿ ಮಾತನಾಡುವ ಹಕ್ಕು ಇಲ್ಲ. ಅವರು ಉಚ್ಚಾಟನೆ ಮಾಡಿದ ಬಳಿಕ ನಾನು ಯಾವುದೇ ಪಕ್ಷಕ್ಕೂ ಹೋಗಬಹುದು ಎಂದರು. ನಾನೊಬ್ಬ ಹಿರಿಯ ಶಾಸಕನಾಗಿದ್ದರೂ ನನ್ನನ್ನು ಸಚಿವನನ್ನಾಗಿ ಮಾಡಿಲ್ಲ. ನಾನು ಮಂತ್ರಿಯಾಗಿದ್ದಾಗ ಕುಮಾರಸ್ವಾಮಿ, ಶಾಸಕರೂ ಆಗಿರಲಿಲ್ಲ. ಇಂತಹ ಹಿರಿಯ ಶಾಸಕನನ್ನು ಪಕ್ಷ ಸರಿಯಾಗಿ ನೋಡಿಕೊಂಡಿಲ್ಲ. ನನ್ನ ಹಿನ್ನೆಲೆ ನೋಡಿಯಾದರೂ ಗೌರವ ನೀಡಬೇಕಿತ್ತು ಎಂದು ನುಡಿದರು.

ದಕ್ಷಿಣ ಪದವೀಧರ ಕ್ಷೇತ್ರದಿಂದ ಪರಿಷತ್ ಚುನಾವಣೆ

ಬಿಜೆಪಿಯಲ್ಲಿ ಒಳ ಜಗಳವಿಲ್ಲ; ನನ್ನ ಗೆಲುವು ನಿಶ್ಚಿತ

ಅಭ್ಯರ್ಥಿ ಮೈ.ವಿ.ರವಿಶಂಕರ್ ವಿಶ್ವಾಸ



ಮೈಸೂರು ಬಿಜೆಪಿ ಕಚೇರಿಯಲ್ಲಿ ಶನಿವಾರ ದಕ್ಷಿಣ ಪದವೀಧರ ಕ್ಷೇತ್ರದ ವಿಧಾನಪರಿಷತ್ ಚುನಾವಣೆ ಬಿಜೆಪಿ ಅಭ್ಯರ್ಥಿ ಮೈ.ವಿ.ರವಿಶಂಕರ್ ಮಾತನಾಡಿದರು.

> ಜೆಡಿಎಸ್‌ನ ಅನೇಕರು ತಮ್ಮ ಅಭ್ಯರ್ಥಿ ಪರ ಮತಯಾಚನೆ ಮಾಡುತ್ತಿಲ್ಲ. ಮರಿತಿಬ್ಬೇಗೌಡರು ಬಹಿರಂಗವಾಗಿಯೇ ತಮ್ಮ ಪಕ್ಷದ ಅಭ್ಯರ್ಥಿ ಪರ ಮತಯಾಚನೆ ಮಾಡುವುದಿಲ್ಲವೆಂದು ಹೇಳಿಕೆ ನೀಡಿದ್ದಾರೆ. ಅವರು ಯಾರ ಪರವಾಗಿ ಇದ್ದಾರೋ ಗೊತ್ತಿಲ್ಲ. ಒಟ್ಟಾರೆ ಜೆಡಿಎಸ್ ಒಳ ಜಗಳ ಎದ್ದು ಕಾಣುತ್ತಿದೆ. ಅಲ್ಲಿನ ಪ್ರಮುಖ ವ್ಯಕ್ತಿಗಳು ಓಡಾಡುತ್ತಿಲ್ಲ. ಕಾಂಗ್ರೆಸ್ ಅಭ್ಯರ್ಥಿ ಪರವಾಗಿ ಹೆಚ್ಚಾಗಿ ಅವರ ವಿದ್ಯಾಸಂಸ್ಥೆಯ ಪ್ರಮುಖರು ಮತಯಾಚನೆ ಮಾಡುತ್ತಿದ್ದಾರೆ. ಆದರೆ ಬಿಜೆಪಿಯಲ್ಲಿ ಅಭ್ಯರ್ಥಿಗಿಂತ ಹೆಚ್ಚಾಗಿ ಕಾರ್ಯಕರ್ತರು ಮತಯಾಚನೆ ಮಾಡುತ್ತಿದ್ದಾರೆ. ಇದನ್ನು ಮತದಾರರು ಗಮನಿಸಿದ್ದಾರೆ. **-ಮೈ.ವಿ.ರವಿಶಂಕರ್ ಬಿಜೆಪಿ ಅಭ್ಯರ್ಥಿ**

ಮೈಸೂರು,ಜೂ.11(ಪಿಎಂ)–ದಕ್ಷಿಣ ಪದವೀಧರರ ಕ್ಷೇತ್ರದಿಂದ ಪರಿಷತ್ ಚುನಾವಣೆ ಸಂಬಂಧ ನನ್ನ ಗೆಲುವಿಗೆ ಬಿಜೆಪಿ ನಾಯಕರು, ಕಾರ್ಯಕರ್ತರು ಸೇರಿದಂತೆ ಎಲ್ಲರೂ ಸಂಘಟನಾತ್ಮಕವಾಗಿ ಕೆಲಸ ಮಾಡುತ್ತಿದ್ದು, ನಮ್ಮಲ್ಲಿ ಯಾವುದೇ ಒಳ ಜಗಳವಿಲ್ಲ. ಹಾಗಾಗಿ ನನಗೆ ಒಳಏಟಿನ ಆತಂಕವಿಲ್ಲ. ಈ ಬಾರಿ ನನ್ನ ಗೆಲುವು ನಿಶ್ಚಿತ ಎಂದು ಬಿಜೆಪಿ ಅಭ್ಯರ್ಥಿ ಮೈ.ವಿ.ರವಿಶಂಕರ್ ವಿಶ್ವಾಸ ವ್ಯಕ್ತಪಡಿಸಿದರು.

ಮೈಸೂರಿನ ಬಿಜೆಪಿ ಕಚೇರಿಯಲ್ಲಿ ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಬಿಜೆಪಿಯಲ್ಲಿ ಒಳ ಜಗಳ ಇದೆ ಎನ್ನುವುದು ಸತ್ಯಕ್ಕೆ ದೂರವಾದ ಮಾತು. ನಮ್ಮಲ್ಲಿ ಎಲ್ಲಾ ನಾಯಕರು, ಕಾರ್ಯಕರ್ತರು ಸಂಘಟನಾತ್ಮಕವಾಗಿ ಕೆಲಸ ಮಾಡುತ್ತಿದ್ದಾರೆ. 10ರಿಂದ 15 ಮಂದಿ ಸಚಿವರು ಕ್ಷೇತ್ರದಲ್ಲಿ ಪ್ರಚಾರ ಮಾಡಿದ್ದಾರೆ. ಮುಖ್ಯಮಂತ್ರಿಗಳು, ಪಕ್ಷದ ರಾಜ್ಯಾಧ್ಯಕ್ಷರೂ ಬಂದಿದ್ದರು. ಈ ಭಾಗದ ಪಕ್ಷದ ಎಲ್ಲಾ ಶಾಸಕರು ಮತ ಯಾಚನೆ ಮಾಡಿದ್ದಾರೆ. ನಮ್ಮಲ್ಲಿ ಯಾವುದೇ ಭಿನ್ನಾಭಿಪ್ರಾಯವಿಲ್ಲ ಎಂದು ಪುನರುಚ್ಚರಿಸಿದರು.

ಕಳೆದ ಬಾರಿ ಇದೇ ಚುನಾವಣೆಯಲ್ಲಿ ಪಕ್ಷದ ಅಭ್ಯರ್ಥಿಯಾಗಿ ನಾನು ಕೇವಲ 183 ಮತಗಳ ಅಂತರದಿಂದ ಸೋಲು ಕಾಣಬೇಕಾಯಿತು. ಅಂದಿಗಿಂತ ಇಂದು ಪಕ್ಷ ಸದೃಢವಾಗಿದೆ. ಇದೂ ನನ್ನ ಗೆಲುವಿಗೆ ಪೂರಕವಾಗಲಿದೆ. ಮತ ಯಾಚನೆ ವೇಳೆ ಪ್ರತಿಯೊಬ್ಬರೂ ಕಳೆದ ಚುನಾವಣೆಯಲ್ಲಿಯೇ ನೀವು ಗೆಲ್ಲಬೇಕಾಗಿತ್ತು ಎಂದು ಅನುಕಂಪ ವ್ಯಕ್ತಪಡಿಸಿ, ಈ ಬಾರಿ ನಿಮಗೆ ಖಂಡಿತವಾಗಿ ಪ್ರಥಮ ಪ್ರಾಶಸ್ತ್ಯದ ಮತ ನೀಡುತ್ತೇವೆ ಎಂದು ಭರವಸೆ ನೀಡಿದ್ದಾರೆ ಎಂದು ತಿಳಿಸಿದರು.

ಕ್ಷೇತ್ರದ 4 ಜಿಲ್ಲೆಗಳಲ್ಲಿ ಕಳೆದ 3 ತಿಂಗಳಿಂದ ನಿರಂತರವಾಗಿ ಮತ ಯಾಚನೆ ಮಾಡುತ್ತಿದ್ದೇನೆ. ಮಂಡ್ಯ ಮತ್ತು ಹಾಸನದಲ್ಲಿ ನಿರೀಕ್ಷೆಗೂ ಮೀರಿ ನನಗೆ ಮತ ಬರಲಿದೆ. 1.41 ಲಕ್ಷ ಮತದಾರರ ಪೈಕಿ 70 ಸಾವಿರ ಮತದಾರರ ನೋಂದಣಿಯನ್ನು ಪಕ್ಷದ ಕಾರ್ಯಕರ್ತರು ಮಾಡಿಸಿದ್ದಾರೆ. 65 ಸಾವಿರ ಮತದಾರರನ್ನು ಖುದ್ದು ನಾನೇ ಭೇಟಿ ಮಾಡಿದ್ದೇನೆ. ಅತಿಥಿ ಉಪನ್ಯಾಸಕರು ಗೌರವಯುತವಾಗಿ ಬದುಕು ಸಾಗಿಸಲು ರಾಜ್ಯ ಸರ್ಕಾರ ಅವರ ವೇತನವನ್ನು 32 ಸಾವಿರ ರೂ.ಗೆ ಏರಿಕೆ ಮಾಡಿದೆ. ಪ್ರಧಾನಿ ನರೇಂದ್ರ ಮೋದಿಯವರ ಆಡಳಿತ ವೈಖರಿ ಬಗ್ಗೆ ಎಲ್ಲೆಡೆ ಮೆಚ್ಚುಗೆ ವ್ಯಕ್ತವಾಗುತ್ತಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಕಾರ್ಯವೈಖರಿ ಹಾಗೂ ಶಿಕ್ಷಣ ಕ್ಷೇತ್ರದಲ್ಲಿನ ಸಾಧನೆ ನನ್ನ ಗೆಲುವಿಗೆ ಪೂರಕವಾಗಲಿದೆ ಎಂದರು.

ಆಯ್ಕೆ ಬಳಿಕ ನಿರುದ್ಯೋಗ ಸಮಸ್ಯೆ ನಿವಾರಿಸಲು 6 ತಿಂಗಳಿಗೆ ಒಮ್ಮೆ ತಾಲೂಕು ಮಟ್ಟದಲ್ಲಿ ಉದ್ಯೋಗ ಮೇಳ ಆಯೋಜಿಸುವ ಉದ್ದೇಶ ಹೊಂದಿದ್ದೇನೆ. ಖಾಸಗಿ ಶಾಲಾ–ಕಾಲೇಜು ಶಿಕ್ಷಕರಲ್ಲಿ ಅಭದ್ರತೆ ಕಾಡುತ್ತಿದೆ. ಅವರಿಗೆ ವಿಮಾ ಯೋಜನೆ ಜಾರಿಗೊಳಿಸುವ ಉದ್ದೇಶ ಹೊಂದಿದ್ದೇನೆ. ಅನುದಾನಿತ ಶಿಕ್ಷಣ ಸಂಸ್ಥೆಗಳಲ್ಲಿ ಮಂಜೂರಾಗಿರುವ ಹುದ್ದೆಗಳ ಭರ್ತಿಗೆ ಕ್ರಮ ವಹಿಸುತ್ತೇನೆ. ಮೈಸೂರು ವಿವಿಯಲ್ಲಿ ಸಾಕಷ್ಟು ಬೋಧಕ ಮತ್ತು ಬೋಧಕೇತರ ಹುದ್ದೆಗಳು ಖಾಲಿ ಉಳಿದಿದ್ದು, ಅವುಗಳ ಭರ್ತಿಗೆ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ ಎಂದು ತಿಳಿಸಿದರು.

ಮುಡಾ ಅಧ್ಯಕ್ಷ ಹೆಚ್.ವಿ.ರಾಜೀವ್, ಬಿಜೆಪಿ ನಗರಾಧ್ಯಕ್ಷ ಟಿ.ಎಸ್.ಶ್ರೀವತ್ಸ, ಪ್ರಧಾನ ಕಾರ್ಯದರ್ಶಿಗಳಾದ ಹೆಚ್.ಜಿ.ಗಿರಿಧರ್, ವಾಣೀಶ್ ಕುಮಾರ್, ಸೋಮಸುಂದರ್, ಗ್ರಾಮಾಂತರ ಪ್ರಧಾನ ಕಾರ್ಯದರ್ಶಿ ಯೋಗಾನಂದ್, ನಗರ ವಕ್ತಾರ ಎಂ.ಎ.ಮೋಹನ್, ಮೈಸೂರು ವಿವಿಯ ಸಿಂಡಿಕೇಟ್ ಸದಸ್ಯ ಈ.ಸಿ.ನಿಂಗರಾಜೇಗೌಡ ಮತ್ತಿತರರು ಗೋಷ್ಠಿಯಲ್ಲಿದ್ದರು.

ಮಧು ಮಾದೇಗೌಡರನ್ನು ಪಕ್ಷಾತೀತವಾಗಿ ಬೆಂಬಲಿಸಿ

ಮದ್ದೂರು, ಜೂ.11(ಮೋಹನ್ ರಾಜ್)– ದಕ್ಷಿಣ ಪದವೀಧರ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಮಧು ಜಿ.ಮಾದೇಗೌಡರನ್ನು ಪದವೀಧರ ಮತದಾರರು ಪಕ್ಷಾತೀತವಾಗಿ ಬೆಂಬಲಿಸಿ ಎಂದು ಮಾಜಿ ಸಚಿವ ಎನ್.ಚಲುವರಾಯಸ್ವಾಮಿ ತಿಳಿಸಿದರು.

ತಾಲೂಕಿನ ಕೊಪ್ಪ ಗ್ರಾಮದ ಶಾಶ್ವತಿ ಸಮುದಾಯ ಭವನದಲ್ಲಿ ದಕ್ಷಿಣ ಪದವೀಧರ ಕ್ಷೇತ್ರದ ಚುನಾವಣೆ ಸಂಬಂಧ ಆಯೋಜಿಸಿದ್ದ ಕಾಂಗ್ರೆಸ್ ಕಾರ್ಯಕರ್ತರ ಸಭೆ ಹಾಗೂ ಮತಯಾಚನೆ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಹೆಚ್.ಕೆ.ವೀರಣ್ಣಗೌಡ, ಎಸ್.ಎಂ.ಕೃಷ್ಣ, ಜಿ.ಮಾದೇಗೌಡ, ಕೆ.ಆರ್.ಪೇಟೆ ಕೃಷ್ಣ, ಸಾಹುಕಾರ್ ಚನ್ನಯ್ಯ, ಸಿಂಗಾರಿ ಅವರು ಆಡಳಿತ ನಡೆಸಿದ್ದು, ರಾಜಕಾರಣದಲ್ಲಿ ಅವರ ಕುಟುಂಬಗಳು ಉಳಿದಿಲ್ಲ ಜಿ.ಮಾದೇಗೌಡರು ಉತ್ತಮ ಶಿಕ್ಷಣ ಸಂಸ್ಥೆ ಸ್ಥಾಪಿಸಿ ಈ ಭಾಗದ ಮಕ್ಕಳಿಗೆ ಉತ್ತಮ ಶಿಕ್ಷಣ ಒದಗಿಸುತ್ತಿದ್ದು ಮಧು ಜಿ.ಮಾದೇಗೌಡರು ಕಳೆದ 10 ವರ್ಷಗಳಿಂದ ಶಿಕ್ಷಣ ಕ್ಷೇತ್ರದಲ್ಲಿ ಉತ್ತಮ ಸಾಧನೆ ಮಾಡಿದ್ದಾರೆ ಎಂದರು.



ಮಧು ಜಿ.ಮಾದೇಗೌಡರನ್ನು ವಿಧಾನ ಪರಿಷತ್‌ಗೆ ಕಳುಹಿಸಿಕೊಟ್ಟರೆ ಶಿಕ್ಷಣ ಕ್ಷೇತ್ರಕ್ಕೂ ಹೆಚ್ಚಿನ ಶಕ್ತಿ ಬರಲಿದ್ದು, ಜಿಲ್ಲೆಯಲ್ಲಿ ಸ್ವಾತಂತ್ರ್ಯ ನಂತರ ಹೋರಾಟ ಮಾಡಿದ ನಾಯಕರ ಕುಟುಂಬದಲ್ಲಿ ಒಂದು ಪೀಳಿಗೆ ಇರಲೆಂಬ ಅಭಿಮಾನ ಜಿಲ್ಲೆಯ ಜನರಿಗೆ ಇರಬೇಕೆಂದು ಮನವಿ ಮಾಡಿದರು.

ಕೊಪ್ಪ ಭಾಗದಲ್ಲಿ ಕಳೆದ ನಾಲ್ಕುವರೆ ವರ್ಷಗಳಿಂದ ಅಭಿವೃದ್ಧಿ ಮರೀಚಿಕೆಯಾಗಿದ್ದು, ಯಾವುದೇ ಶಾಶ್ವತ ಅಭಿವೃದ್ಧಿ ಕಾರ್ಯ ಕೈಗೊಳ್ಳದೆ ನಿರ್ಲಕ್ಷ್ಯ ವಹಿಸಿದ್ದಾರೆ. ತಮ್ಮ ಅಧಿಕಾರವಧಿಯಲ್ಲಿ ಕಾಲೇಜು ನಿರ್ಮಾಣ, ರಸ್ತೆ ಅಭಿವೃದ್ಧಿ, ಆಸ್ಪತ್ರೆ, ಬಸ್ ನಿಲ್ದಾಣ ಇನ್ನಿತರೆ ಹತ್ತು ಹಲವು ಅಭಿವೃದ್ಧಿ ಕಾರ್ಯ ಕೈಗೊಂಡಿದ್ದು ಬಳಿಕ ಬಂದ ಶಾಸಕರು ಯಾವುದೇ ಅಭಿವೃದ್ಧಿ ಕಾರ್ಯ ಕೈಗೊಳ್ಳದೇ ಕೇವಲ ಗುದ್ದಲಿ ಪೂಜೆಗಷ್ಟೇ ಮೀಸಲಾಗಿದ್ದಾರೆಂದು ಟೀಕಿಸಿದರು.

ಈ ಭಾಗದ ರೈತರಿಗೆ ಅನುಕೂಲ ಕಲ್ಪಿಸಬೇಕೆಂಬ ದೃಷ್ಟಿಯಿಂದ ಜಮೀನುಗಳಲ್ಲಿ 2 ಬೆಳೆ ಬೆಳೆಯಲು ನೀರು ಹರಿಸುವ ಜೊತೆಗೆ ನಾಲೆ ಆಧುನೀಕರಣಕ್ಕೆ ಹೆಚ್ಚಿನ ಒತ್ತು ನೀಡಿದ್ದು, ಇಷ್ಟೆಲ್ಲಾ ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡಿದ್ದರೂ 2018ರ ವಿಧಾನಸಭಾ ಚುನಾವಣೆಯಲ್ಲಿ ಮತದಾರರು ತಮ್ಮ ಕೈ ಹಿಡಿಯದಿರುವ ಬಗ್ಗೆ ಬೇಸರ ವ್ಯಕ್ತಪಡಿಸಿದರು.

ಅಭ್ಯರ್ಥಿ ಮಧು ಜಿ.ಮಾದೇಗೌಡ ಮಾತನಾಡಿ, ನಾಲ್ಕು ಜಿಲ್ಲೆಗಳ ಮತದಾರರಿಂದ ಉತ್ತಮ ಸ್ಪಂದನೆ ವ್ಯಕ್ತವಾಗಿದ್ದು, ತಮಗೆ ಮೊದಲ ಪ್ರಾಶಸ್ತ್ಯದ ಮತ ನೀಡುವ ಮೂಲಕ ತಮ್ಮ ಗೆಲುವಿಗೆ ಕಾರಣರಾಗುವಂತೆ ಮನವಿ ಮಾಡಿದರು.

ಈ ವೇಳೆ ಶಾಸಕ ದಿನೇಶ್ ಗೂಳೀಗೌಡ, ಡಿಸಿಸಿ ಬ್ಯಾಂಕ್ ನಿರ್ದೇಶಕ ಜೋಗೀಗೌಡ, ತಾಪಂ ಮಾಜಿ ಉಪಾಧ್ಯಕ್ಷ ಬಿ.ಎಂ.ರಘು, ಮಾಜಿ ಸದಸ್ಯ ತೋಯಜಾಕ್ಷ, ಗ್ರಾಪಂ ಮಾಜಿ ಸದಸ್ಯ ರಮೇಶ್, ಮುಖಂಡರಾದ ಕರೀಗೌಡ, ಕುಮಾರಕೊಪ್ಪ, ರಾಮಲಿಂಗಯ್ಯ, ಚಂದ್ರು, ಸಿದ್ದಪ್ಪ ಇತರರಿದ್ದರು.

ಎನ್.ಎಸ್.ಸ್ವಾಮಿ ನಿಧನ

ಶ್ರೀರಂಗಪಟ್ಟಣ, ಜೂ.11– ತಾಲೂಕಿನ ನಗುವನಹಳ್ಳಿ ಗ್ರಾಮದ ನಿವಾಸಿ ಹಾಗೂ



ಮಾಜಿ ಛೇರ್ಮನ್ ಎನ್.ಎಸ್.ಸ್ವಾಮಿ (77) ಶನಿವಾರ ನಿಧನರಾದರು. ಮೃತರು ಮೂವರು ಪುತ್ರರು, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸಂಜೆ ಸ್ವಗ್ರಾಮದಲ್ಲಿ ನೆರವೇರಿತು.

ಮತದಾನಕ್ಕೆ ಪರ್ಯಾಯ ಗುರುತಿನ ಚೀಟಿ

ಮಂಡ್ಯ, ಜೂ.11– ದಕ್ಷಿಣ ಪದವೀಧರ ಕ್ಷೇತ್ರದ ಚುನಾವಣೆ ಮತದಾನ ಜೂ.13 ರಂದು ಬೆಳಗ್ಗೆ 8ರಿಂದ ಸಂಜೆ 5ರವರೆಗೆ ನಡೆಯಲಿದ್ದು, ಅರ್ಹ ಮತದಾರರು ತಮ್ಮ ಮತದಾರರ ಗುರುತಿನ ಚೀಟಿ ಹಾಜರುಪಡಿಸಿ ಮತದಾನ ಮಾಡುವುದು. ಗುರುತಿನ ಚೀಟಿ ಇಲ್ಲದ ಮತದಾರರು ತಮ್ಮ ಭಾವಚಿತ್ರದೊಂದಿಗೆ ಹೆಸರಿರುವ ಆಧಾರ್ ಕಾರ್ಡ್, ಡ್ರೈವಿಂಗ್ ಲೈಸೆನ್ಸ್, ಪಾನ್‌ಕಾರ್ಡ್, ಪಾಸ್‌ಪೋರ್ಟ್, ರಾಜ್ಯ/ಕೇಂದ್ರ ಸರ್ಕಾರ, ಪಬ್ಲಿಕ್ ಸೆಕ್ಟರ್ ಅಂಡರ್ ಟೇಕಿಂಗ್, ಸ್ಥಳೀಯ ಸಂಸ್ಥೆಗಳು ತನ್ನ ಉದ್ಯೋಗಿಗಳಿಗೆ ನೀಡಿರುವ ಅಧಿಕೃತ ಗುರುತಿನ ಚೀಟಿ, ಎಂಪಿ/ಎಂಎಲ್‌ಎ/ಎಂಎಲ್‌ಸಿ ಅವರಿಗೆ ನೀಡಲಾಗಿರುವ ಅಧಿಕೃತ ಗುರುತಿನ ಚೀಟಿಗಳು, ಸಂಬಂಧಪಟ್ಟ ಶಿಕ್ಷಕರ/ಪದವೀಧರರ ಕ್ಷೇತ್ರದ ಮತದಾರರನ್ನು ನೇಮಿಸಿಕೊಳ್ಳಬಹುದಾದ ಶಿಕ್ಷಣ ಸಂಸ್ಥೆಗಳಿಂದ ನೀಡಲಾದ ಸೇವಾ ಗುರುತಿನ ಚೀಟಿ, ವಿವಿ ನೀಡಿದ ಪದವಿ/ಡಿಪ್ಲೊಮಾ ಪ್ರಮಾಣ ಪತ್ರದ ಮೂಲಪ್ರತಿ, ಸಕ್ಷಮ ಪ್ರಾಧಿಕಾರದಿಂದ ನೀಡಿದ ದೈಹಿಕ ನ್ಯೂನತೆ ಪ್ರಮಾಣ ಪತ್ರ, ಭಾರತ ಸರ್ಕಾರದ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಇಲಾಖೆಯಿಂದ ನೀಡಲಾಗಿರುವ ವಿಶಿಷ್ಟ ಅಂಗ ವೈಕಲ್ಯ ID (UDID) ಕಾರ್ಡ್ ಅನ್ನು ಮತದಾರರು ಪರ್ಯಾಯವಾಗಿ ಹಾಜರು ಪಡಿಸಿ ಮತದಾನ ಮಾಡಬಹುದು ಎಂದು ಜಿಲ್ಲಾಧಿಕಾರಿ ಎಸ್.ಅಶ್ವತಿ ತಿಳಿಸಿದ್ದಾರೆ.

ದುಷ್ಕರ್ಮಿಗಳಿಂದ ಅಂಗಡಿಗೆ ಬೆಂಕಿ

ಮಂಡ್ಯ, ಜೂ.11(ಮೋಹನ್‌ರಾಜ್)– ದುಷ್ಕರ್ಮಿಗಳ ಅಟ್ಟಹಾಸಕ್ಕೆ ಅಂಗಡಿ ಹೊತ್ತಿ ಉರಿದಿರುವ ಘಟನೆ ತಾಲೂಕಿನ ಗೊರವಾಲೆ ಗ್ರಾಮದಲ್ಲಿ ನಡೆದಿದೆ.

ಗ್ರಾಮದ ನಿವಾಸಿ ನಾಗಣ್ಣ ಎಂಬವರಿಗೆ ಸೇರಿದ ಕಾಂಡಿಮೆಂಟ್ಸ್ ಅಂಗಡಿ ಸುಟ್ಟು ಕರಕಲಾಗಿದ್ದು, ಬೆಂಕಿ ಕೆನ್ನಾಲಿಗೆಗೆ ಅಂಗಡಿಯಲ್ಲಿದ್ದ ಸಿಲಿಂಡರ್ ಸ್ಫೋಟಗೊಂಡಿದೆ. ಕಳೆದ ತಡರಾತ್ರಿ ಯಾರೋ ದುಷ್ಕರ್ಮಿಗಳು ಹಳೇ ವೈಷಮ್ಯದಿಂದ ಅಂಗಡಿಗೆ ಬೆಂಕಿ ಹಚ್ಚಿರಬಹುದೆಂದು ಪೊಲೀಸರು ಶಂಕಿಸಿದ್ದಾರೆ. ಈ ಸಂಬಂಧ ಶಿವಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬೆಳಗೊಳ ಹೋಬಳಿ ವಿವಿಧೆಡೆ ಬಿಜೆಪಿ ಅಭ್ಯರ್ಥಿ ಪರ ಪ್ರಚಾರ



ಶ್ರೀರಂಗಪಟ್ಟಣ, ಜೂ.11(ವಿನಯ್ ಕಾರೇಕುರ)– ತಾಲೂಕಿನ ಬೆಳಗೊಳ ಹೋಬಳಿ ವಿವಿಧೆಡೆ ಬಿಜೆಪಿ ಮುಖಂಡರು ದಕ್ಷಿಣ ಪದವೀಧರ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಮೈ.ವಿ.ರವಿಶಂಕರ್ ಪರ ಪ್ರಚಾರ ನಡೆಸಿದರು.

ಬೆಳಗೊಳ ಸಮೀಪದ ಸರ್ಕಾರಿ ಪದವಿ ಪೂರ್ವ ಕಾಲೇಜು, ಕೆಆರ್‌ಎಸ್ ಸರ್ಕಾರಿ ಪದವಿ ಪೂರ್ವ ಕಾಲೇಜು ಸೇರಿದಂತೆ ವಿವಿಧೆಡೆ ಬಿಜೆಪಿ ರಾಜ್ಯ ಕಾರ್ಯಕಾರಿಣಿ ಸದಸ್ಯ ಡಾ.ಸಿದ್ದರಾಮಯ್ಯ ಹಾಗೂ ಜಿಲ್ಲಾ ಕಾರ್ಯದರ್ಶಿ ಪೈ.ಮಹದೇವು ನೇತೃತ್ವದಲ್ಲಿ ಮತಯಾಚಿಸಲಾಯಿತು.

ಬಿಜೆಪಿ ರಾಜ್ಯ ಕಾರ್ಯಕಾರಿಣಿ ಸದಸ್ಯ ಡಾ.ಸಿದ್ದರಾಮಯ್ಯ ಮಾತನಾಡಿ, ದಕ್ಷಿಣ ಪದವೀಧರ ಕ್ಷೇತ್ರದ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿ ರವಿಶಂಕರ್ ಅವರಿಗೆ ಮೊದಲ ಪ್ರಾಶಸ್ತ್ಯದ ಮತ ನೀಡಿ ಜಯಶೀಲರನ್ನಾಗಿ ಮಾಡಬೇಕು. ರಾಜ್ಯದಲ್ಲಿ ಬಿಜೆಪಿ ಸರ್ಕಾರ ಉತ್ತಮ ಆಡಳಿತ ನೀಡುತ್ತಿದೆ. ಆದ್ದರಿಂದ ಪದವೀಧರ ಮತದಾರರು ಪಕ್ಷದ ಅಭ್ಯರ್ಥಿಗೆ ಮತ ನೀಡಿ ಗೆಲ್ಲಿಸಿದರೆ ಮತ್ತಷ್ಟು ಅಭಿವೃದ್ಧಿಗೆ ಸಹಕಾರಿಯಾಗುತ್ತದೆ ಎಂದರು.

ಈ ವೇಳೆ ಕಾರ್ಯದರ್ಶಿ ರವಿ, ಓಬಿಸಿ ಉಪಾಧ್ಯಕ್ಷ ಮಲ್ಲೇಶ್, ಕುಮಾರ್, ಬಿಜೆಪಿ ಮುಖಂಡರಾದ, ನಾರಾಯಣ್, ಕೆಆರ್ ಎಸ್ ಸೋಮಣ್ಣ ಈರೇಗೌಡ, ವಿಶ್ವೇಶ್ವರಯ್ಯ, ಪ್ರಕಾಶ್ ಸೇರಿದಂತೆ ಕಾರ್ಯಕರ್ತರು ಇದ್ದರು.

ಮೂರು ಪಕ್ಷಗಳಿಂದ ಯಾವ ಮಾನದಂಡವೂ ಇಲ್ಲದೇ ಅಭ್ಯರ್ಥಿಗಳ ಆಯ್ಕೆ

ನಾಗಮಂಗಲ, ಜೂ.11– ಬಿಜೆಪಿ, ಕಾಂಗ್ರೆಸ್ ಮತ್ತು ಜೆಡಿಎಸ್‌ನಿಂದ ದಕ್ಷಿಣ ಪದವೀಧರ ಕ್ಷೇತ್ರಕ್ಕೆ ಯಾವುದೇ ಮಾನದಂಡವಿಲ್ಲದೇ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗಿದೆ ಎಂದು ಪಕ್ಷೇತರ ಅಭ್ಯರ್ಥಿ ವಾಟಾಳ್ ನಾಗರಾಜ್ ಬೇಸರ ವ್ಯಕ್ತಪಡಿಸಿದರು.



ಪಟ್ಟಣದ ಮಿನಿ ವಿಧಾನಸೌಧದ ಎದುರಿನ ಗಾಂಧಿ ಪ್ರತಿಮೆಗೆ ಹೂವಿನ ಹಾರ ಹಾಕಿ ಮಾತನಾಡಿದ ಅವರು, 3 ಪಕ್ಷಗಳಿಂದ ಮೇಲ್ಮನೆ, ಪರಿಷತ್‌ಗೆ ಇದ್ದ ಘನತೆ, ಗೌರವ ಮಣ್ಣು ಪಾಲಾಗಿದೆ. ಚುನಾವಣೆಗಳಲ್ಲಿ ಹಣ, ಜಾತಿ ಪ್ರಮುಖವಾಗಿದೆ. ನಾನು ಅನೇಕ ಚುನಾವಣೆಗಳಲ್ಲಿ ಸ್ಪರ್ಧಿಸಿ ಸೋತಿದ್ದರೂ, ತತ್ವ ಸಿದ್ಧಾಂತಗಳಿಗೆ ಈಗಲೂ ಬದ್ಧನಾಗಿದ್ದೇನೆ. ಈ ಆಡಂಬರದ ಪ್ರಚಾರ ತೊಲಗಬೇಕು. ಈ ಚುನಾವಣೆ ಬುದ್ಧಿವಂತರು ಮತ ಚಲಾಯಿಸಬೇಕಾದ ಚುನಾವಣೆಯಾಗಿದ್ದು, ಆತ್ಮಸಾಕ್ಷಿಗನುಗುಣವಾಗಿ ಆಸೆ ಆಮಿಷವೆಂಬ ಸೋಂಕಿಗೆ ಬಲಿಯಾಗದೇ ಉತ್ತಮ ಅಭ್ಯರ್ಥಿಗೆ ಮತ ಚಲಾಯಿಸಬೇಕು. ನನ್ನನ್ನು ಪದವೀಧರ ಚುನಾವಣೆಯಲ್ಲಿ ಆಯ್ಕೆ ಮಾಡಿದ್ದ ಅದಲ್ಲಿ ಪದವೀಧರರಿಗೆ ಮಾಸಾಶನ 10 ಸಾವಿರ ರೂ.ಗಳನ್ನು ಸರ್ಕಾರದಿಂದ ಕೊಡಿಸುವುದಾಗಿ ಭರವಸೆ ನೀಡಿದ ಅವರು, ಪ್ರಾಮಾಣಿಕವಾಗಿ ಕೆಲಸ ಮಾಡುವ ನನಗೆ ಮೊದಲ ಪ್ರಾಶಸ್ತ್ಯದ ಮತ ನೀಡಿ ಆಯ್ಕೆ ಮಾಡಬೇಕೆಂದು ಮನವಿ ಮಾಡಿದರು.

ಮತದಾನ ಸಮಯ ವಿಸ್ತರಣೆ

ಮಂಡ್ಯ, ಜೂ.11– ಭಾರತ ಚುನಾವಣಾ ಆಯೋಗ ಕರ್ನಾಟಕ ದಕ್ಷಿಣ ಪದವೀಧರ ಕ್ಷೇತ್ರದ ಚುನಾವಣೆಗೆ ಸಂಬಂಧಿಸಿದಂತೆ ಜೂ.13ರಂದು ಬೆಳಗ್ಗೆ 8 ರಿಂದ ಸಂಜೆ 4 ರವರೆಗೆ ನಿಗದಿ ಪಡಿಸಿದ್ದ ಮತದಾನದ ಅವಧಿಯನ್ನು ಬೆಳಗ್ಗೆ 8 ರಿಂದ ಸಂಜೆ 5 ವರೆಗೆ ವಿಸ್ತರಿಸಿದೆ ಎಂದು ಜಿಲ್ಲಾಧಿಕಾರಿ ಹಾಗೂ ಸಹಾಯಕ ಚುನಾವಣಾಧಿಕಾರಿ ಎಸ್.ಅಶ್ವತಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪದವೀಧರ ಚುನಾವಣೆ: ಚಾ.ನಗರದಲ್ಲಿ ಸಿದ್ಧತೆ

ಜಿಲ್ಲಾಧಿಕಾರಿ ಚಾರುಲತಾ ಸೋಮಲ್ ಮಾಹಿತಿ

ಚಾಮರಾಜನಗರ, ಜೂ.11–ಕರ್ನಾಟಕ ದಕ್ಷಿಣ ಪದವೀಧರರ ಕ್ಷೇತ್ರದಿಂದ ವಿಧಾನ ಪರಿಷತ್‌ಗೆ ಜೂ.13ರಂದು ನಡೆಯಲಿರುವ ದ್ವೈವಾರ್ಷಿಕ ಚುನಾವಣೆಗೆ ಜಿಲ್ಲೆಯಲ್ಲಿ ಸಕಲ ಸಿದ್ಧತೆ ಕೈಗೊಳ್ಳಲಾಗಿದೆ ಎಂದು ಜಿಲ್ಲಾಧಿಕಾರಿ ಚಾರುಲತಾ ಸೋಮಲ್ ತಿಳಿಸಿದ್ದಾರೆ.

ಕರ್ನಾಟಕ ದಕ್ಷಿಣ ಪದವೀಧರ ಕ್ಷೇತ್ರಕ್ಕೆ ಚಾಮರಾಜನಗರ, ಮೈಸೂರು, ಮಂಡ್ಯ ಹಾಗೂ ಹಾಸನ ಜಿಲ್ಲೆಗಳು ಒಳಪಟ್ಟಿದ್ದು, ಚಾಮರಾಜನಗರ ಜಿಲ್ಲೆಯ 5 ತಾಲೂಕು ಕೇಂದ್ರಗಳಲ್ಲಿ ಒಟ್ಟು 12 ಮತಗಟ್ಟೆಗಳನ್ನು ಸ್ಥಾಪಿಸಲಾಗಿದೆ. ಚಾಮರಾಜನಗರ ತಾಲೂಕಿಗೆ ಸಂಬಂಧಿಸಿದಂತೆ ಚಾಮರಾಜನಗರದ ಕರಿನಂಜನಪುರ ರಸ್ತೆಯಲ್ಲಿರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ 4 ಮತಗಟ್ಟೆ, ಗುಂಡ್ಲುಪೇಟೆ ತಾಲೂಕು ಕಚೇರಿಯಲ್ಲಿ 2 ಮತಗಟ್ಟೆ, ಯಳಂದೂರು ತಾಲೂಕು ಕಚೇರಿಯಲ್ಲಿ 1 ಮತಗಟ್ಟೆ, ಕೊಳ್ಳೇಗಾಲ ತಾಲೂಕು ಕಚೇರಿಯಲ್ಲಿ 3 ಮತಗಟ್ಟೆ ಹಾಗೂ ಹನೂರು ಪಟ್ಟಣದ ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆ (ಬಿಆರ್‌ಸಿ ಕೇಂದ್ರ)ಯಲ್ಲಿ 2 ಮತಗಟ್ಟೆ ಸ್ಥಾಪಿಸಲಾಗಿದೆ. ಜಿಲ್ಲೆ ವ್ಯಾಪ್ತಿಯಲ್ಲಿ ಒಟ್ಟು 12,147 ಮತದಾರರಿದ್ದು, ಈ ಪೈಕಿ 7,916 ಪುರುಷರು, 4,229 ಮಹಿಳೆಯರು ಹಾಗೂ ಇಬ್ಬರು ಇತರೆ ಮತದಾರರು ಇದ್ದಾರೆ. ಅಂತಿಮವಾಗಿ ಒಟ್ಟು 19 ಅಭ್ಯರ್ಥಿಗಳು ಕಣದಲ್ಲಿದ್ದು, ಜೂ.13ರಂದು ಬೆಳಗ್ಗೆ 8 ರಿಂದ ಸಂಜೆ 5 ಗಂಟೆವರೆಗೆ ಮತದಾನ ನಡೆಯಲಿದೆ.



ಚುನಾವಣೆಗೆ ಸಂಬಂಧಿಸಿದಂತೆ, ಚಾಮರಾಜನಗರದ ಜಿಲ್ಲಾ ಆಡಳಿತ ಭವನದಲ್ಲಿರುವ ಜೆ.ಹೆಚ್.ಪಟೇಲ್ ಸಭಾಂಗಣದಲ್ಲಿ ಮಸ್ಟರಿಂಗ್ ಮತ್ತು ಡೀಮಸ್ಟರಿಂಗ್ ಕಾರ್ಯ ನಡೆಯಲಿದೆ. ಮತಗಟ್ಟೆಗಳಿಗೆ ತಲಾ ಒಬ್ಬ ಅಧಿಕಾರಿ ಮತ್ತು 3 ಮಂದಿ ಪೋಲಿಂಗ್ ಅಧಿಕಾರಿಗಳನ್ನೊಳಗೊಂಡಂತೆ ಒಟ್ಟು 58 ಮತದಾನಾಧಿಕಾರಿಗಳನ್ನು (ಕಾಯ್ದಿರಿಸುವಿಕೆ ಸೇರಿ) ನೇಮಕ ಮಾಡಲಾಗಿದೆ. 17 ಮೈಕ್ರೋ ಅಬ್ಸರ್‌ವರ್‌ಗಳನ್ನು (ಕಾಯ್ದಿರಿಸುವಿಕೆ ಸೇರಿ) ನೇಮಕ ಮಾಡಲಾಗಿದೆ. 15 ಸರ್ಕಾರಿ ಜೀಪ್‌ಗಳನ್ನು ಬಳಸಿಕೊಳ್ಳಲಾಗುತ್ತಿದೆ. ಜೂ.13ರಂದು ನಡೆಯುವ ಚುನಾವಣೆಯಲ್ಲಿ ಮತದಾರರು ಪ್ರಾಶಸ್ತ್ಯದ ಮೂಲಕ ಮತ ಚಲಾಯಿಸಬೇಕಿದೆ. ಚುನಾವಣೆಯಲ್ಲಿ ಮತದಾರರ ಬಲಗೈನ ತೋರುಬೆರಳಿಗೆ ಅಳಿಸಲಾಗದ ಶಾಯಿ ಹಾಕಲಾಗುತ್ತದೆ.

ಜೂ.13ರಂದು ಡೀಮಸ್ಟರಿಂಗ್ ಕಾರ್ಯ ಮುಕ್ತಾಯದ ನಂತರ ಮತದಾನವಾದ ಮತಪೆಟ್ಟಿಗೆಗಳನ್ನು ಪೊಲೀಸ್ ಭದ್ರತೆಯೊಂದಿಗೆ ಮೈಸೂರಿನ ಪಡುವಾರಹಳ್ಳಿಯ ಮಹಾರಾಣಿ ಮಹಿಳಾ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜಿನಲ್ಲಿ ಸ್ಥಾಪಿಸಲಾಗಿರುವ ಭದ್ರತಾ ಕೊಠಡಿಗೆ ಸಾಗಿಸಲಾಗುತ್ತದೆ.

ಜೂ.13ರಂದು ಸಂಜೆ 5 ಗಂಟೆಗೆ ಮತದಾನ ಮುಕ್ತಾಯಗೊಳ್ಳಲಿದ್ದು, ಮತದಾನ ಮುಕ್ತಾಯಗೊಳ್ಳುವ 48 ಗಂಟೆಗಳ ಮುಂಚಿತವಾಗಿ(ಜೂ.11ರ ಸಂಜೆ 5 ಗಂಟೆ) ಬಹಿರಂಗ ಪ್ರಚಾರ ಮುಕ್ತಾಯಗೊಳ್ಳಲಿದೆ. ಜೂ. 15 ರಂದು ಬೆಳಗ್ಗೆ 8 ಗಂಟೆಯಿಂದ ಮತ ಎಣಿಕೆ ಮೈಸೂರಿನ ಪಡುವಾರಹಳ್ಳಿಯ ಮಹಾರಾಣಿ ಮಹಿಳಾ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜಿನಲ್ಲಿ ನಡೆಯಲಿದೆ ಎಂದು ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಚುನಾವಣಾಧಿಕಾರಿ ಚಾರುಲತಾ ಸೋಮಲ್ ಪ್ರಕಟಣೆಯಲ್ಲಿ ಕೋರಿದ್ದಾರೆ.

ಅಪರಿಚಿತ ವಾಹನ ಡಿಕ್ಕಿ: ಜಿಂಕೆ ಸಾವು

ಬೇಗೂರು, ಜೂ.11(ಕಿರಣ್)–ಅಪರಿಚಿತ ವಾಹನ ಡಿಕ್ಕಿ ಹೊಡೆದು ಜಿಂಕೆಯೊಂದು



ಸಾವನ್ನಪ್ಪಿರುವ ಘಟನೆ ಸಮೀಪದ ಕುರುಬರ ಹುಂಡಿ ಬಳಿ ನಡೆದಿದೆ. ಓಂಕಾರ್ ಅರಣ್ಯ ವಲಯದಲ್ಲಿ ಹಾದುಹೋಗಿರುವ ಹೆಡಿಯಾಲ ರಸ್ತೆಯಲ್ಲಿ 3 ವರ್ಷ ವಯಸ್ಸಿನ ಹೆಣ್ಣು ಜಿಂಕೆ ಕಳೇಬರ ಪತ್ತೆಯಾಗಿದೆ. ಗ್ರಾಮಸ್ಥರು ಅರಣ್ಯ ಇಲಾಖೆಗೆ ಸುದ್ದಿಮುಟ್ಟಿಸಿದ ಕೂಡಲೇ ಸ್ಥಳಕ್ಕಾಗಮಿಸಿದ ಅರಣ್ಯಾಧಿಕಾರಿಗಳು ಕಳೇಬರವನ್ನು ಕಚೇರಿಗೆ ಕೊಂಡೊಯ್ದು ಪಶುವೈದ್ಯರಿಂದ ಮರಣೋತ್ತರ ಪರೀಕ್ಷೆ ನಡೆಸಿ ಅಂತ್ಯಸಂಸ್ಕಾರ ಮಾಡಿದರು.

ಜೂ.16ರಿಂದ ಲೋಕಾಯುಕ್ತ ಅಧಿಕಾರಿಗಳ ಭೇಟಿ

ಚಾಮರಾಜನಗರ, ಜೂ.11–ಜಿಲ್ಲೆಯ ಲೋಕಾಯುಕ್ತ ಅಧಿಕಾರಿಗಳು ಜೂ.16 ರಿಂದ 24ರವರೆಗೆ ಜಿಲ್ಲೆಯ ವಿವಿಧ ತಾಲೂಕುಗಳಿಗೆ ಭೇಟಿ ನೀಡಲಿದ್ದು, ಜೂ.16ರಂದು ಚಾ.ನಗರದ ಪ್ರವಾಸಿಮಂದಿರ, 17ರಂದು ಕೊಳ್ಳೇಗಾಲದ ಪ್ರವಾಸಿ ಮಂದಿರ, 18ಕ್ಕೆ ಯಳಂದೂರಿನ ಪ್ರವಾಸಿಮಂದಿರ, 24ಕ್ಕೆ ಹನೂರಿನ ಪ್ರವಾಸಿ ಮಂದಿರಗಳಲ್ಲಿ ಬೆಳಗ್ಗೆ 11ರಿಂದ ಮಧ್ಯಾಹ್ನ 1 ಗಂಟೆಯವರೆಗೆ ಸಾರ್ವಜನಿಕರ ದೂರು ಸ್ವೀಕರಿಸುವರು.

ಜೂ.14ಕ್ಕೆ ಚಾಮುಲ್ ಚುನಾವಣೆ; ಕೈ–ಕಮಲದಲ್ಲಿ ಬಂಡಾಯ

9 ಸ್ಥಾನಕ್ಕೆ 25 ಅಭ್ಯರ್ಥಿಗಳು ಸ್ಪರ್ಧೆ



ಚಾಮುಲ್ ಚುನವಣೆಯಲ್ಲಿ ನಮ್ಮ ಪಕ್ಷದ ಬೆಂಬಲಿತ ಅಧಿಕೃತ ಅಭ್ಯರ್ಥಿಗಳ ವಿರುದ್ಧ ನಮ್ಮ ಪಕ್ಷದ ಮುಖಂಡರೇ ಸ್ಪರ್ಧಿಸಿರುವುದು ನಿಜ. ಇಂತಹವರು ಈ ಕೂಡಲೇ ಕಣದಿಂದ ನಿವೃತ್ತಿ ಘೋಷಿಸಿ ಪಕ್ಷದ ಅಧಿಕೃತ ಬೆಂಬಲಿತ ಅಭ್ಯರ್ಥಿ ಗೆಲುವಿಗೆ ಶ್ರಮಿಸಬೇಕು. ಇಲ್ಲದಿದ್ದರೆ ಪಕ್ಷದ ಹಿರಿಯ ನಾಯಕರ ಗಮನಕ್ಕೆ ತರಲಾಗುವುದು. **–ಆರ್.ಸುಂದರ್, ಬಿಜೆಪಿ ಜಿಲ್ಲಾಧ್ಯಕ್ಷ.**

ಪಕ್ಷದ ಪ್ರತಿಯೊಬ್ಬ ಮುಖಂಡನಿಗೂ ಒಂದಲ್ಲ ಒಂದು ಆಸೆ ಇದ್ದೇ ಇರುತ್ತದೆ. ಇದು ತಪ್ಪಲ್ಲ. ಪಕ್ಷದ ಅಧಿಕೃತ ಬೆಂಬಲಿತ ಅಭ್ಯರ್ಥಿ ವಿರುದ್ಧವೇ ನಮ್ಮ ಪಕ್ಷದ ಮುಖಂಡರು ಸ್ಪರ್ಧಿಸಿದ್ದು, ಅಂತಹವರ ಮೇಲೆ ಪಕ್ಷದ ಹೈಕಮಾಂಡ್ ಕ್ರಮಕೈಗೊಳ್ಳಲಿದೆ. **–ಪಿ. ಮರಿಸ್ವಾಮಿ, ಕಾಂಗ್ರೆಸ್ ಜಿಲ್ಲಾಧ್ಯಕ್ಷ.**

ಮತದಾರರ ವಿವರ

ಜಿಲ್ಲಾ ಮಹಿಳಾ ಕ್ಷೇತ್ರ	84
ಚಾಮರಾಜನಗರ ತಾಲೂಕು	116
ಗುಂಡ್ಲುಪೇಟೆ ತಾಲೂಕು	117
ಹನೂರು ತಾಲೂಕು	73
ಕೊಳ್ಳೇಗಾಲ ತಾಲೂಕು	43
ಯಳಂದೂರು ತಾಲೂಕು	13

ಚಾಮರಾಜನರ, ಜೂ.11(ಎಸ್‌ಎಸ್)– ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ(ಚಾಮುಲ್)ದ ಆಡಳಿತ ಮುಂಡಳಿಯ 9 ನಿರ್ದೇಶಕರ ಸ್ಥಾನಕ್ಕೆ ಜೂ.14ರಂದು ಚುನಾವಣೆ ನಡೆಯಲಿದ್ದು, ಆಯ್ಕೆ ಬಯಸಿ ಒಟ್ಟು 25 ಅಭ್ಯರ್ಥಿಗಳು ಸ್ಪರ್ಧಿಸಿದ್ದಾರೆ. ಜಿಲ್ಲೆಯ 4 ತಾಲೂಕಿನಲ್ಲಿ ಕಾಂಗ್ರೆಸ್ ಹಾಗೂ ಬಿಜೆಪಿ ಬೆಂಬಲಿತ ಅಭ್ಯರ್ಥಿಗಳ ನಡುವೆ ಜಿದ್ದಾಜಿದ್ದಿ ಏರ್ಪಟ್ಟಿದ್ದು, ಈ ಎರಡೂ ಪಕ್ಷಗಳಿಗೂ ಬಂಡಾಯ ಅಭ್ಯರ್ಥಿಗಳು ತಲೆ ನೋವು ತಂದಿದ್ದಾರೆ. ಹನೂರು ತಾಲೂಕಿನಲ್ಲಿ ಕಾಂಗ್ರೆಸ್, ಬಿಜೆಪಿ ಹಾಗೂ ಜೆಡಿಎಸ್ ಬೆಂಬಲಿತರ ನಡುವೆ ತ್ರಿಕೋನ ಸ್ಪರ್ಧೆ ಏರ್ಪಟ್ಟಿದೆ.

ಚಾಮರಾಜನಗರ ತಾಲೂಕಿನಲ್ಲಿ ಕಾಂಗ್ರೆಸ್ ಹಾಗೂ ಬಿಜೆಪಿ ಬೆಂಬಲಿತ ಅಭ್ಯರ್ಥಿಗಳಿಗೆ ಬಂಡಾಯ ಅಭ್ಯರ್ಥಿಗಳ ಸ್ಪರ್ಧಿಗಳ ಕಾಟ ಶುರುವಾಗಿದೆ. ಹಾಗೆಯೇ ಗುಂಡ್ಲುಪೇಟೆ ತಾಲೂಕಿನಲ್ಲಿ ಬಿಜೆಪಿಗೆ ಬಂಡಾಯ ಎದುರಾಗಿದೆ. ಹನೂರು ತಾಲೂಕಿನಲ್ಲಿ ಕಾಂಗ್ರೆಸ್, ಬಿಜೆಪಿ ಹಾಗೂ ಜೆಡಿಎಸ್ ಅಭ್ಯರ್ಥಿಗಳು ಸ್ಪರ್ಧಿಸಿದ್ದು, ತ್ರಿಕೋನ ಸ್ಪರ್ಧೆ ಏರ್ಪಟ್ಟಿದೆ. ಕೊಳ್ಳೇಗಾಲ ಹಾಗೂ ಯಳಂದೂರು ತಾಲೂಕಿನಲ್ಲಿ ಕಾಂಗ್ರೆಸ್ ಹಾಗೂ ಬಿಜೆಪಿ ಬೆಂಬಲಿತ ಅಭ್ಯರ್ಥಿಗಳ ನಡುವೆ ನೇರ ಹಣಾಹಣಿ ಏರ್ಪಟ್ಟಿದೆ.

ಜಿಲ್ಲಾ ಮಹಿಳಾ ಕ್ಷೇತ್ರ: ಈ ಕ್ಷೇತ್ರದ 1 ಸ್ಥಾನಕ್ಕೆ ಆಯ್ಕೆ ಬಯಸಿ ಇಬ್ಬರು ಸ್ಪರ್ಧಿಸಿದ್ದಾರೆ. ಕಾಂಗ್ರೆಸ್ ಬೆಂಬಲಿತರಾಗಿ ಶಾಸಕ ಸಿ.ಪುಟ್ಟರಂಗಶೆಟ್ಟಿ ಅವರ ಪುತ್ರಿ ಶೀಲಾ ಪುಟ್ಟರಂಗಶೆಟ್ಟಿ ಸ್ಪರ್ಧಿಸಿದ್ದಾರೆ. ಪಕ್ಷೇತರ ಅಭ್ಯರ್ಥಿಯಾಗಿ ಚಾಮುಲ್ ನಿರ್ದೇಶಕಿ ಪ್ರಮೋದಾ.ಜಿ ಸ್ಪರ್ಧಿಸಿದ್ದಾರೆ. ಇವರಿಬ್ಬರು ಮಾತ್ರ ಸ್ಪರ್ಧಿಸಿರುವುದರಿಂದ ನೇರ ಹಣಾಹಣಿ ಏರ್ಪಟ್ಟಿದೆ. ಪಕ್ಷೇತರ ಅಭ್ಯರ್ಥಿಯಾಗಿರುವ ಪ್ರಮೋದಾ ಅವರ ಪತಿ ಬಸವಟ್ಟಿ ಗ್ರಾಮದ ಶಂಕರಮೂರ್ತಿ, ಇವರು ಎಪಿಎಂಸಿ ಮಾಜಿ ಅಧ್ಯಕ್ಷರು, ಕಾಂಗ್ರೆಸ್ ಮುಖಂಡರು, ಪ್ರಮೋದಾ ಅವರು ಪಕ್ಷದ ಬೆಂಬಲಿತ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದಾರೆ ಎನ್ನಲಾಗಿದೆ. ಈ ಕ್ಷೇತ್ರದಿಂದ ಬಿಜೆಪಿ ತನ್ನ ಬೆಂಬಲಿತ ಅಭ್ಯರ್ಥಿಯನ್ನು ಕಣಕ್ಕೆ ಇಳಿಸಿಲ್ಲ. ಇದು ಪ್ರಮೋದಾ ಅವರಿಗೆ ವರವಾಗಿ ಪರಿಣಮಿಸಿದೆ ಎಂದು ವಿಶ್ಲೇಷಿಸಲಾಗುತ್ತಿದೆ.

ಚಾಮರಾಜನಗರ: ತಾಲೂಕಿನ 2 ಸ್ಥಾನಕ್ಕೆ 8 ಅಭ್ಯರ್ಥಿಗಳು ಸ್ಪರ್ಧಿಸಿದ್ದಾರೆ ಬಿಜೆಪಿ ಬೆಂಬಲಿತ ಅಭ್ಯರ್ಥಿಗಳಾಗಿ ವಿ.ಸಿ.ಹೊಸೂರು ಗ್ರಾಮದ ಹೆಚ್.ಎಸ್.ಬಸವರಾಜು, ಕಿಲಗೆರೆ ಗ್ರಾಮದ ಕೆ.ಆರ್.ಬಸವರಾಜು. ಕಾಂಗ್ರೆಸ್ ಬೆಂಬಲಿತರಾಗಿ ಬಂದಿಗೌಡನಹಳ್ಳಿಯ ಬಿ.ಕೆ.ರವಿಕುಮಾರ್, ಆಲೂರಿನ ಸಿ.ರಾಜಶೇಖರ್ ಸ್ಪರ್ಧಿಸಿದ್ದಾರೆ. ಚಾಮುಲ್ ಹಾಲಿ ನಿರ್ದೇಶಕ ಮಲೆಯೂರು ಎಂ.ಎಸ್.ರವಿಶಂಕರ್, ತಾಪಂ ಮಾಜಿ ಸದಸ್ಯ ಕೆ.ಎಲ್.ರವಿಕುಮಾರ್, ಮೈಮುಲ್ ನಿರ್ದೇಶಕ ಕೋಡಿಮೋಳೆ ರಾಜಶೇಖರ್ ಬಿಜೆಪಿ ಮುಖಂಡರಾಗಿದ್ದಾರೆ. ಇವರು ಸಹ ಸ್ಪರ್ಧಿಸಿರುವುದು ಬಿಜೆಪಿಗೆ ತಲೆನೋವಾಗಿದೆ. ಕಾಂಗ್ರೆಸ್‌ನಲ್ಲಿ ಗುರುತಿಸಿಕೊಂಡಿರುವ ಸದಾಶಿವಮೂರ್ತಿ ಅವರು ಬಿಜೆಪಿ ಕಣದಲ್ಲಿ ಉಳಿದಿರುವುದು ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿಗಳಿಗೆ ತಲೆಬಿಸಿ ತಂದಿದೆ.

ಗುಂಡ್ಲುಪೇಟೆ: ತಾಲೂಕಿನ 2 ಸ್ಥಾನಗಳಿಗೆ 5 ಅಭ್ಯರ್ಥಿಗಳು ಸ್ಪರ್ಧಿಸಿದ್ದಾರೆ. ಕಾಂಗ್ರೆಸ್ ಬೆಂಬಲಿತರಾಗಿ ಚಾಮುಲ್ ಹಾಲಿ ಅಧ್ಯಕ್ಷ ಹೆಚ್.ಎಸ್.ನಂಜುಂಡ ಪ್ರಸಾದ್, ಹಂಗಳ ಗ್ರಾಮದ ಮುಖಂಡ ನಂಜಪ್ಪ ಅವರ ಪುತ್ರ ಹೆಚ್.ಎನ್.ನಟೇಶ್ ಸ್ಪರ್ಧಿಸಿದ್ದಾರೆ. ಬಿಜೆಪಿ ಬೆಂಬಲಿತರಾಗಿ ಚಾಮುಲ್ ಹಾಲಿ ನಿರ್ದೇಶಕ ಟಿ.ಮಾದಪ್ಪ ಹಾಗೂ ಎಂ.ಸುಜೇಂದ್ರ ಸ್ಪರ್ಧಿಸಿದ್ದಾರೆ. ಬಿಜೆಪಿ ಮುಖಂಡ ಎಂ.ಪಿ.ಸುನಿಲ್ ಸ್ಪರ್ಧಿಸಿರುವುದು ಬಿಜೆಪಿಗೆ ಸಮಸ್ಯೆ ತಂದೊಡ್ಡಿದೆ.

ಹನೂರು: ತಾಲೂಕಿನ 2 ಸ್ಥಾನಕ್ಕೆ 6 ಅಭ್ಯರ್ಥಿಗಳು ಸ್ಪರ್ಧಿಸಿದ್ದಾರೆ. ಕಾಂಗ್ರೆಸ್ ಬೆಂಬಲಿತರಾಗಿ ಸಿ.ಎಸ್.ಗುರುಮಲ್ಲಪ್ಪ ಹಾಗೂ ಶಾಹುಲ್ ಅಹಮ್ಮದ್ ಸ್ಪರ್ಧಿಸಿದ್ದರೆ. ಬಿಜೆಪಿ ಬೆಂಬಲಿತವಾಗಿ ಎಂ.ಮಹಾದೇವಪ್ರಭು ಹಾಗೂ ಸಿ.ಸೋಮಶೇಖರ್ ಸ್ಪರ್ಧಿಸಿದ್ದಾರೆ. ಜೆಡಿಎಸ್ ಬೆಂಬಲಿತರಾಗಿ ಎಸ್.ಮಹದೇವಸ್ವಾಮಿ ಹಾಗೂ ಬಸವರಾಜು ಕಣದಲ್ಲಿದ್ದಾರೆ. ಈ ಮೂರು ಪಕ್ಷಗಳಲ್ಲೂ ಹಣಾಹಣಿ ಏರ್ಪಟ್ಟಿದೆ.

ಕೊಳ್ಳೇಗಾಲ: ತಾಲೂಕಿನ 1 ಕ್ಷೇತ್ರಕ್ಕೆ ಕಾಂಗ್ರೆಸ್ ಬೆಂಬಲಿತವಾಗಿ ಎಂ.ನಂಜುಂಡಸ್ವಾಮಿ ಸ್ಪರ್ಧಿಸಿದ್ದರೆ. ಬಿಜೆಪಿ ಬೆಂಬಲಿತವಾಗಿ ಎಂ.ಪುಟ್ಟಣ್ಣ ಕಣದಲ್ಲಿದ್ದಾರೆ. ಗೆಲುವಿಗಾಗಿ ಇವರಿಬ್ಬರ ನಡುವೆ ನೇರ ಹಣಾಹಣಿ ಏರ್ಪಟ್ಟಿದ್ದು, ತೀವ್ರ ಕುತೂಹಲ ಕೆರಳಿಸಿದೆ.

ಯಳಂದೂರು: ತಾಲೂಕಿನ 1 ಕ್ಷೇತ್ರಕ್ಕೆ ಕಾಂಗ್ರೆಸ್ ಬೆಂಬಲಿತವಾಗಿ ಜಿಪಂ ಮಾಜಿ ಸದಸ್ಯ ಜೆ.ಯೋಗೇಶ್, ಬಿಜೆಪಿ ಬೆಂಬಲಿತರಾಗಿ ವೈ.ಸಿ.ನಾಗೇಂದ್ರ ಸ್ಪರ್ಧಿಸಿದ್ದಾರೆ. ಇವರಿಬ್ಬರಲ್ಲಿ ಗೆಲುವಿಗಾಗಿ ಭಾರೀ ಪೈಪೋಟಿ ಏರ್ಪಟ್ಟಿದೆ.

ಮಹೀಂದ್ರಾ ಬೊಲೆರೋ ಪಿಕ್‌ಅಪ್ ವಾಹನ ಕಳ್ಳತನ ಪ್ರಕರಣ

ಇಬ್ಬರು ಅಂತರರಾಜ್ಯ ಕಳ್ಳರ ಬಂಧನ

ಮಡಿಕೇರಿ, ಜೂ.11– ಮಹೀಂದ್ರಾ ಬೊಲೆರೋ ಪಿಕ್‌ಅಪ್ ವಾಹನ ಕಳ್ಳತನ ಪ್ರಕರಣಕ್ಕೆ ಸಂಬಂಧಿಸಿದಂತೆ ಇಬ್ಬರು ಅಂತರರಾಜ್ಯ ಕಳ್ಳರನ್ನು ಬಂಧಿಸುವಲ್ಲಿ ಕೊಡಗು ಜಿಲ್ಲಾ ಡಿಸಿಐಬಿ ಹಾಗೂ ನಾಪೋಕ್ಲು ಪೊಲೀಸರು ಯಶಸ್ವಿಯಾಗಿದ್ದಾರೆ.



ಕೇರಳದ ಕಾಸರಗೋಡು ಮೂಲಕ ರಂಷಾನ್ ಅಲಿಯಾಸ್ ಮೊಟ್ಟೆ(24), ಮಹಮ್ಮದ್ ಸಮೀರ್(29) ಬಂಧಿತ ಆರೋಪಿಗಳು. ಬಂಧಿತರಿಂದ ಬೊಲೆರೋ ವಾಹನ ಮತ್ತು ಕೃತ್ಯಕ್ಕೆ ಬಳಸಿದ ಮತ್ತೊಂದು ಗೂಡ್ಸ್ ಆಟೋವನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ.

ವಿವರ: ಇತ್ತೀಚೆಗೆ ನಾಪೋಕ್ಲು ಪಟ್ಟಣದ ಕಾಂಪ್ಲೆಕ್ಸ್‌ವೊಂದರ ಬಳಿ ನಿಲ್ಲಿಸಿದ್ದ ಮಹೀಂದ್ರಾ ಬೊಲೆರೊ ಪಿಕ್‌ಅಪ್ ವಾಹನವನ್ನು ರಾತ್ರಿ ವೇಳೆ ಕಳವು ಮಾಡಲಾಗಿತ್ತು. ಈ ಸಂಬಂಧ ನಾಪೋಕ್ಲು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದ ಜಿಲ್ಲಾ ಡಿಸಿಐಬಿ ಮತ್ತು ನಾಪೋಕ್ಲು ಪೊಲೀಸರು, ಕಳುವಾದ ವಾಹನದ ಮಾಹಿತಿ ಸಂಗ್ರಹಿಸಿ ಕೇರಳದ ಕಾಸರಗೋಡು ಮೂಲದ ಇಬ್ಬರನ್ನು ಬಂಧಿಸಿ, ಮಹೀಂದ್ರಾ ಬೊಲೆರೊ ಪಿಕಪ್ ವಾಹನ ಹಾಗೂ ಕಳ್ಳತನ ಮಾಡಲು ಬಳಸಿದ ಟಾಟಾ ಏಸ್ ವಾಹನ ವಶಪಡಿಸಿಕೊಂಡಿದ್ದಾರೆ.

ಬಂಧಿತ ಆರೋಪಿ ರಂಷಾನ್ ಕುಖ್ಯಾತ ವಾಹನ ಚೋರನಾಗಿದ್ದು, ಈತನ ವಿರುದ್ಧ ಮಡಿಕೇರಿ ಗ್ರಾಮಾಂತರ, ಸುಳ್ಯ, ಉಳ್ಳಾಲ, ಮೂಡಬಿದ್ರೆ, ಹಾಸನ ಹಾಗೂ ಕೇರಳ ರಾಜ್ಯದ ಬೇಕಲ್, ಕಾಸರಗೋಡು, ವಿದ್ಯಾನಗರ, ಕಣ್ಣನೂರು ಮತ್ತು ತ್ರಿಶೂರ್ ಠಾಣೆಗಳಲ್ಲಿ ಪ್ರಕರಣ ದಾಖಲಾಗಿದೆ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ಪೊಲೀಸ್ ವರಿಷ್ಠಾಧಿಕಾರಿ ಕ್ಯಾಪ್ಟನ್ ಎಂ.ಎ.ಅಯ್ಯಪ್ಪ, ಮಡಿಕೇರಿ ಉಪ ವಿಭಾಗದ ಡಿವೈಎಸ್‌ಪಿ ಜಿ.ಎಸ್.ಗಜೇಂದ್ರ ಪ್ರಸಾದ್ ಮಾರ್ಗದರ್ಶನದಲ್ಲಿ ಡಿಸಿಐಬಿ ಇನ್ಸ್‌ಪೆಕ್ಟರ್ ನಾಗೇಶ್ ಕದ್ರಿ, ಮಡಿಕೇರಿ ಗ್ರಾಮಾಂತರ ವೃತ್ತ ನಿರೀಕ್ಷಕ ಅನೂಪ್ ಮಾದಪ್ಪ ನಾಪೋಕ್ಲು ಠಾಣೆ ಎಸ್‌ಐ ಸದಾಶಿವ, ಡಿಸಿಐಬಿ ಸಿಬ್ಬಂದಿಗಳಾದ ವೆಂಕಟೇಶ್, ಯೋಗೇಶ್ ಕುಮಾರ್, ನಿರಂಜನ್, ವಸಂತ, ಅನಿಲ್‌ಕುಮಾರ್, ಸುರೇಶ್, ಶರತ್ ರೈ, ಶಶಿಕುಮಾರ್, ನಾಪೋಕ್ಲು ಠಾಣೆಯ ಸಾಜನ್, ನವೀನ್ ಮತ್ತು ಸಿಡಿಆರ್ ರವಿಕುಮಾರ್, ರಾಜೇಶ್, ಗಿರೀಶ್ ಹಾಗೂ ಪ್ರವೀಣ್ ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದರು.

ಮರದಿಂದ ಬಿದ್ದು ಕಾರ್ಮಿಕ ಸಾವು

ಸೋಮವಾರಪೇಟೆ, ಜೂ.11– ಮರದಿಂದ ಬಿದ್ದು ಕಾರ್ಮಿಕ



ನೋರ್ವ ಸ್ಥಳದಲ್ಲೇ ಮೃತಪಟ್ಟಿರುವ ಘಟನೆ ಶನಿವಾರ ತಣ್ಣೀರುಹಳ್ಳ ಗ್ರಾಮದಲ್ಲಿ ನಡೆದಿದೆ. ಕರ್ಕಳ್ಳಿ ಗ್ರಾಮದ ನಿವಾಸಿ ನಾರಾಯಣ (40) ಸಾವನ್ನಪ್ಪಿದವರು. ದೀಪಕ್ ಎಂಬವರ ಕಾಫಿ ತೋಟದಲ್ಲಿ ಮರ ಕಪಾತು ಮಾಡಲು ಮರ ಏರಿದ ಸಂದರ್ಭ ಆಕಸ್ಮಿಕವಾಗಿ ಬಿದ್ದು ಮೃತಪಟ್ಟಿದ್ದಾರೆ. ಈ ಸಂಬಂಧ ಸೋಮವಾರಪೇಟೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಖೇಲೋ ಇಂಡಿಯಾ ಗೇಮ್ಸ್‌ನಲ್ಲಿ ಕೊಡಗಿನ ಯುವತಿಗೆ ಚಿನ್ನದ ಪದಕ

ಮಡಿಕೇರಿ,ಜೂ.11– ಉದಯೋನ್ಮುಖ ಕ್ರೀಡಾತಾರೆ ಕರ್ನಾಟಕವನ್ನು ಪ್ರತಿನಿಧಿಸುತ್ತಿರುವ ಕೊಡಗಿನ ಯುವತಿ ಬೊಳ್ಳಂಡ ಉನ್ನತಿ ಅಯ್ಯಪ್ಪ ಖೇಲೋ ಇಂಡಿಯಾ ಯೂತ್ ಗೇಮ್ಸ್‌ನ ಬಾಲಕಿಯರ 100 ಮೀಟರ್ಸ್ ಹರ್ಡಲ್ಸ್‌ನಲ್ಲಿ ಚಿನ್ನದ ಪದಕ ಪಡೆದಿದ್ದಾರೆ. ಹರಿಯಾಣದ ಪಂಚಕುಲದಲ್ಲಿ ನಡೆಯುತ್ತಿರುವ ಖೇಲೋ ಇಂಡಿಯಾ ಕ್ರೀಡಾಕೂಟದಲ್ಲಿ ಉನ್ನತಿ ಈ ಸಾಧನೆ ಮಾಡಿದ್ದಾರೆ. 100 ಮೀ. ಹರ್ಡಲ್ಸ್‌ನಲ್ಲಿ 14 ಸೆಕೆಂಡ್‌ಗಳಲ್ಲಿ ಗುರಿ



ತಲುಪುವ ಮೂಲಕ ಗಮನ ಸೆಳೆದಿದ್ದಾರೆ.

ಅಂತರರಾಷ್ಟ್ರೀಯ ಅಥ್ಲೇಟ್ ಹಾಗೂ ತರಬೇತುದಾರರಾಗಿರುವ ಮಡಿಕೇರಿಯ ಬೊಳ್ಳಂಡ ಅಯ್ಯಪ್ಪ ಹಾಗೂ ಮಾಜಿ ಒಲಿಂಪಿಯನ್ ಪ್ರಮೀಳಾ ಅಯ್ಯಪ್ಪ ಅವರ ಪುತ್ರಿ ಉನ್ನತಿ ವಿವಿಧ ಕ್ರೀಡಾಕೂಟಗಳಲ್ಲಿ ಉತ್ತಮ ಸಾಧನೆ ತೋರುತ್ತಿದ್ದು, ಭವಿಷ್ಯದ ತಾರೆಯಾಗುವ ನಿರೀಕ್ಷೆ ಮೂಡಿಸಿದ್ದಾರೆ ಸ್ವತಃ ಪೋಷಕರೇ ಈಕೆಯ ತರಬೇತುದಾರರೂ ಆಗಿರುವುದು ಮತ್ತೊಂದು ವಿಶೇಷವಾಗಿದೆ.

ಕಾಡಾನೆ ದಾಳಿ: ಬೈಕ್ ಸವಾರ ಸ್ಥಳದಲ್ಲೇ ಸಾವು





ಗೋಣಿಕೊಪ್ಪ ಜೂ.11– ಕಾಡಾನೆ ದಾಳಿಗೆ ಬೈಕ್ ಸವಾರ ಸ್ಥಳದಲ್ಲೇ ಸಾವನ್ನಪ್ಪಿರುವ ಘಟನೆ ಪೊನ್ನಂಪೇಟೆ ತಾಲೂಕಿನ ಧನುಗಾಲ ಗ್ರಾಮದಲ್ಲಿ ಶನಿವಾರ ಬೆಳಗ್ಗೆ ನಡೆದಿದೆ. ಇಲ್ಲಿನ ಮರಪಾಲ ಮಹದೇಶ್ವರ ಕಾಲೋನಿ ನಿವಾಸಿ ಚೋಮ(48) ಸಾವನ್ನಪ್ಪಿದವರು.

ವಿವರ: ಮರಪಾಲ ಮಹದೇಶ್ವರ ಕಾಲೋನಿ ನಿವಾಸಿಗಳಾದ ಚೋಮ ಹಾಗೂ ಸಿದ್ದಪ್ಪ ಶನಿವಾರ ಮುಂಜಾನೆಯೇ ಇಲ್ಲಿನ ಮಾರಮ್ಮ ದೇವಸ್ಥಾನಕ್ಕೆ ತೆರಳಿ ಬೈಕ್‌ನಲ್ಲಿ ಹಿಂತಿರುಗುತ್ತಿದ್ದರು. ಈ ವೇಳೆ ಕೋಣನಕಟ್ಟೆ ಸಮೀಪದ ಮುಖ್ಯರಸ್ತೆ ತಿರುವಿನಲ್ಲಿ ಕಾಡಾನೆ ದಾಳಿ ನಡೆಸಿದೆ. ಈ ವೇಳೆ ಬೈಕ್ ಹಿಂಬದಿ ಕುಳಿತ್ತಿದ್ದ ಸಿದ್ದಪ್ಪ ಹಾರಿ ಸಣ್ಣಪುಟ್ಟ ಗಾಯಗಳೊಂದಿಗೆ ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಆದರೆ ಬೈಕ್‌ನಿಂದ ಕೆಳಗೆ ಬಿದ್ದ ಚೋಮನನ್ನು ಕಾಡಾನೆ ತುಳಿದು ಬಲಿ ಪಡೆದು ಪಕ್ಕದಲ್ಲೇ ಇದ್ದ ತೋಟ ಸೇರಿಕೊಂಡಿತು. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಗೋಣಿಕೊಪ್ಪ ಠಾಣೆ ಪೊಲೀಸರು ಪರಿಶೀಲನೆ ನಡೆಸಿ ಪ್ರಕರಣ ದಾಖಲಿಸಿಕೊಂಡು, ಶವವನ್ನು ಸ್ಥಳೀಯ ಸಮುದಾಯ ಆಸ್ಪತ್ರೆಗೆ ರವಾನಿಸಿ ಮರಣೋತ್ತರ ಪರೀಕ್ಷೆ ಬಳಿಕ ವಾರಸುದಾರರಿಗೆ ಒಪ್ಪಿಸಿದರು.

ಪ್ರತಿಭಟನೆ: ಕಾಡಾನೆ ದಾಳಿಯಿಂದ ಮೃತಪಟ್ಟ ಚೋಮನ ಕುಟುಂಬಕ್ಕೆ ಸೂಕ್ತ ಪರಿಹಾರ ನೀಡಬೇಕು ಹಾಗೂ ಕಾಡಾನೆ ಸೆರೆಗೆ ಕ್ರಮ ವಹಿಸಬೇಕು ಎಂದು ಆಗ್ರಹಿಸಿ ರೈತ ಸಂಘ, ಮಾಜಿ ಎಂಎಲ್‌ಸಿ ಅರುಣ್ ಮಾಚಯ್ಯ ನೇತೃತ್ವದಲ್ಲಿ ಘಟನಾ ಸ್ಥಳದಲ್ಲಿ ಪ್ರತಿಭಟನೆ ನಡೆಸಲಾಯಿತು. ಈ ವೇಳೆ ಮಾತನಾಡಿದ ಮುಖಂಡರು ಕಾಡಾನೆ ದಾಳಿಯಿಂದ ಸ್ಥಳೀಯರು ಭಯಭೀತರಾಗಿದ್ದಾರೆ. ಆಗಾಗ್ಗೆ ಕಾಡಾನೆ ದಾಳಿ ನಡೆಯುತ್ತಿದ್ದರೂ, ಅರಣ್ಯ ಇಲಾಖೆ ಅಧಿಕಾರಿಗಳು ಯಾವುದೇ ಕ್ರಮಕೈಗೊಂಡಿಲ್ಲ. ಹೀಗಾಗಿ ಕೂಡಲೇ ಕಾಡಾನೆ ಸೆರೆಗೆ ಕ್ರಮ ವಹಿಸಬೇಕು ಎಂದು ಆಗ್ರಹಿಸಿದರು. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಎಸಿಎಫ್ ಸತೀಶ್ ಕಾರ್ಮಿಕನ ಸಾವಿಗೆ ಕಾರಣವಾದ ಕಾಡಾನೆಯನ್ನು ಕಾಡಿಗೆ ಅಟ್ಟಲಾಗುವುದು. ನಂತರ ಸೆರೆ ಹಿಡಿಯಲಾಗುವುದು ಎಂದು ಭರವಸೆ ನೀಡಿದರು. ಈ ವೇಳೆ ಸ್ಥಳದಲ್ಲಿದ್ದ ನಾಗರಹೊಳೆ ಡಿಸಿಎಫ್ ಮಹೇಶ್‌ಕುಮಾರ್ ಚೋಮನ ಪತ್ನಿ, ಸುಬ್ಬಿ ಅವರಿಗೆ 2 ಲಕ್ಷದ ಚೆಕ್ ಹಸ್ತಾಂತರ ಮಾಡಿದರು. ಉಳಿದ 5 ಲಕ್ಷ ರೂ.ಗಳ ಚೆಕ್ ಅನ್ನು ಶೀಘ್ರದಲ್ಲೇ ನೀಡಲಾಗುವುದು ಎಂದರು.

ಈ ವೇಳೆ ಸ್ಥಳೀಯ ಕಾಫಿ ಬೆಳೆಗಾರರು, ಕಾರ್ಮಿಕ ವರ್ಗ, ರೈತ ಸಂಘದ ಸದಸ್ಯರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಜೂ.21ಕ್ಕೆ ಸೈನಿಕರ ಕುಂದುಕೊರತೆ ಸಭೆ

ಮಡಿಕೇರಿ, ಜೂ.11– ಕೊಡಗು ಜಿಲ್ಲೆಯ ಪೊನ್ನಂಪೇಟೆ ತಾಲೂಕಿನಲ್ಲಿ ವಾಸ್ತವ್ಯವಿರುವ ಮಾಜಿ ಸೈನಿಕರು ಮತ್ತು ಅವರ ಅವಲಂಬಿತರು, ಅವರುಗಳ ಯಾವುದೇ ಸಾಮೂಹಿಕ ಅಥವಾ ವೈಯುಕ್ತಿಕ ಕುಂದುಕೊರತೆಗಳು ಇದ್ದಲ್ಲಿ ಅವುಗಳ ಬಗ್ಗೆ ಚರ್ಚಿಸಲು, ಜಿಲ್ಲಾಧಿಕಾರಿ ಅಧ್ಯಕ್ಷತೆಯಲ್ಲಿ ಜೂ.21 ರಂದು ಬೆಳಗ್ಗೆ 11.30 ಗಂಟೆಗೆ ಪೊನ್ನಂಪೇಟೆ ತಹಶೀಲ್ದಾರರ ಕಾರ್ಯಾಲಯ ಸಭಾಂಗಣದಲ್ಲಿ ಸೈನಿಕರ ಕುಂದುಕೊರತೆಗಳ ಸಭೆ ನಡೆಯಲಿದೆ.

ಜೂ.16 ರೊಳಗೆ ಜಂಟಿ ನಿರ್ದೇಶಕರ ಕಾರ್ಯಾಲಯ, ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ, ಮಡಿಕೇರಿ, ಕೊಡಗು ಜಿಲ್ಲೆ, ಇವರಿಗೆ ಪತ್ರ ಅಥವಾ ಮಿಂಚಂಚೆ (ಇ–ಮೇಲ್ jtdirectordswmdk@yahoo.com) ಮೂಲಕ ತಮ್ಮ ಕುಂದುಕೊರತೆಗಳ ಅರ್ಜಿಗಳು, ಜೊತೆಗೆ ದಾಖಲಾತಿಗಳನ್ನು ಸಲ್ಲಿಸುವಂತೆ ಕೋರಿದೆ.

ಕುಂದುಕೊರತೆ ಸಲ್ಲಿಸುವಾಗ ತಮ್ಮ ಮಾಜಿ ಸೈನಿಕರ ಗುರುತಿನ ಚೀಟಿ ಪ್ರತಿ ಮತ್ತು ಮೊಬೈಲ್ ಸಂಖ್ಯೆಯನ್ನು ನಮೂದಿಸುವಂತೆ ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆಯ ಜಂಟಿ ನಿರ್ದೇಶಕರು ತಿಳಿಸಿದ್ದಾರೆ.



ವಾರದಮಿತ್ರ
ಸಾಪ್ತಾಹಿಕ ಪುರವಣಿ
ಮೈಸೂರು ಮಿತ್ರ
ಭಾನುವಾರ
12-6-2022

2ಜಿ, 3ಜಿ, 4ಜಿ ಆಯ್ತು, ಈಗ 5ಜಿ



ಕಳಪೆ ನೆಟ್‌ವರ್ಕ್‌ನಿಂದ ಕರೆಗಳು, ಮೆಸೇಜ್‌ನಲ್ಲಿ ತೊಂದರೆ, ಡೌನ್‌ಲೋಡ್ ಸ್ಲೋ ಅಂಥಾ ಸಮಸ್ಯೆಗಳಿಂದ ಬಳಲುತ್ತಿದ್ದವರಿಗೆ ಇದಕ್ಕೆಲ್ಲಾ ಪರಿಹಾರಾರ್ಥವಾಗಿ ಈಗ 5ಜಿ ಬರುತ್ತಿದೆ. ಇದನ್ನು ಬರಮಾಡಿಕೊಳ್ಳಲು ಗ್ರಾಹಕರು ಉತ್ಸುಕರಾಗಿದ್ದಾರೆ.

ಆರ್.ಪವನ್‌ಕುಮಾರ್
ಮೊ: 9945842882.

ಹೌದು, ಭಾರತದ ಟೆಲಿಕಾಂ ವಲಯ ಮತ್ತೊಂದು ಮಹತ್ತರ ಬದಲಾವಣೆಗೆ ಸಿದ್ಧವಾಗಿದೆ. ಹಿಂದಿನ ಬಳಕೆಯಲ್ಲಿದ್ದ 2ಜಿ, 3ಜಿ ಸೇವೆಗಳ ಅವಧಿ ಮುಗಿದಂತೆ ಈಗ 4ಜಿ ಸೇವೆ ಕಾಲವೂ ಅಂತ್ಯಗೊಳ್ಳುವುದು ಸನ್ನಿಹಿತವಾಗಿದೆ. ಬಹುದಿನಗಳಿಂದ ಸುದ್ದಿಯಲ್ಲಿದ್ದ ಎಲ್ಲರ ಅಪಾರ ನಿರೀಕ್ಷೆಯ 5ಜಿ ಭಾರತದಲ್ಲಿ ತನ್ನ ಸೇವೆಯನ್ನು ಈ ವರ್ಷದ ಅಂತ್ಯದ ವೇಳೆಗೆ ಆರಂಭಿಸುವ ಸೂಚನೆ ದೊರೆತಿದೆ. ಈಗಾಗಲೇ ಪ್ರಧಾನಿ ನರೇಂದ್ರ ಮೋದಿಯವರು ಅಧಿಕೃತವಾಗಿ ಮೊದಲ 5ಜಿ ಟೆಸ್ಟ್ ಬೆಡ್ ಅನ್ನು ಮೇ ತಿಂಗಳಲ್ಲಿ ಲೋಕಾರ್ಪಣೆ ಮಾಡಿದ್ದಾರೆ. ಇನ್ನೂ ಅದು ಗ್ರಾಹಕರ ಬಳಕೆಗೆ ಲಭ್ಯವಾಗಬೇಕಷ್ಟೆ.

5ಜಿಗಾಗಿ ಕಾದು ಕುಂತವರಿಗೆ ಇದೊಂದು ಶುಭ ಸುದ್ದಿ. ಇರುವ ನೆಟ್‌ವರ್ಕ್‌ನಿಂದ ಆಗಾಗ ತೊಂದರೆ ಅನುಭವಿಸಿ, ಮತ್ತಷ್ಟು ಸ್ಪೀಡ್ ನಿರೀಕ್ಷಿಸುತ್ತಿದ್ದವರಿಗೆ 5ಜಿ ವರವಾಗಿ ಬಂದಿದೆ. ಅದು ಹೇಗೆ ಕಾರ್ಯನಿರ್ವಹಿಸುವುದೆಂಬ ನಿರೀಕ್ಷೆ ಎಲ್ಲರಲ್ಲೂ ಸಹಜವಾಗಿದ್ದು, ಕೆಲವು ಖಾಸಗಿ ಟೆಲಿಕಾಂ ಕಂಪನಿಗಳು ಈ ಕುರಿತು ಮೊದಲೇ ತಮ್ಮ ಪ್ರಚಾರ ಶುರು ಮಾಡಿವೆ. ಪ್ರತಿ ಹೊಸತು ಬರುವಾಗ ಹಳೆತು ಮೂಲೆ ಸೇರುವಂತೆ 4ಜಿ ಬಂದು 2ಜಿ, 3ಜಿಯ ಸೆಲ್‌ಫೋನ್‌ಗಳನ್ನು ಸಂಪೂರ್ಣ ಗುಡಿಸಿತ್ತು. ಅದೇ ಬದಲಾದ ಕಾಲದಲ್ಲಿ 4ಜಿಯನ್ನು ಸರಿಗಟ್ಟಲು 5ಜಿ ಕಾದುಕೊಂಡಿದೆ. ಟೆಲಿಕಾಂಗೆ ಸಂಬಂಧಿಸಿದಂತೆ ಮಾರುಕಟ್ಟೆಯಲ್ಲಿ ವರ್ಷಗಳ ಹಿಂದೆಯೇ ಈ ಸುದ್ದಿ ಹರಿದಾಡುತ್ತಿತ್ತಾದರು ಭಾರತಕ್ಕೆ ಇದು ಎಂದು ಬರುವುದೆಂಬುದು ತಿಳಿದಿರಲಿಲ್ಲ. ಇತರೆ ದೇಶಗಳಲ್ಲಿ ಲಭ್ಯವಿದ್ದ ಈ 5ಜಿ ಸೇವೆಯ ಬಗ್ಗೆ ನಮ್ಮಲ್ಲಿ ಸಾಕಷ್ಟು ಮಾತುಕತೆ, ಚರ್ಚೆ ನಡೆಯುತ್ತಿತ್ತು. 4ಜಿಯೇ ಆ ಮಟ್ಟಿಗೆ ಕಾರ್ಯ ಮಾಡುವಾಗ ಇನ್ನೂ 5ಜಿ ಇನ್ನೆಷ್ಟು ವೇಗದಲ್ಲಿ ಡೌನಲೋಡ್‌ಗಳ ಮಾಡಬಹುದೆಂದು ಊಹಿಸಿಕೊಂಡವರಿಗೆ ಈ ವರ್ಷಾಂತ್ಯದ ವೇಳೆಗೆ ಅದು ಅನುಭವಕ್ಕೆ ಬರುವ ಎಲ್ಲಾ ಸಾಧ್ಯತೆಗಳು ದಟ್ಟವಾಗಿದೆ.

ಈ ಬಾರಿಯ ಬಜೆಟ್‌ನಲ್ಲಿ 5ಜಿ ಸೇವೆಯನ್ನು ಗ್ರಾಹಕರಿಗೆ ಒದಗಿಸುವ ಬಗ್ಗೆ ನಿರ್ಧರಿಸಿರುವುದು ತಿಳಿದಿರುವ ಸಂಗತಿ. ಅದರ ಮುಂದುವರೆದ ಭಾಗವಾಗಿ 5ಜಿ ಸೇವೆಗೆ ಚಾಲನೆ ಸಿಕ್ಕಿದೆ. ಇದನ್ನು ನಿರೀಕ್ಷಿಸಿದ್ದ ಕೆಲ ಸ್ಮಾರ್ಟ್‌ಫೋನ್ ತಯಾರಿಕಾ ಕಂಪನಿಗಳು ಕೂಡ ತಾವು ತಯಾರಿಸುವ ಉಪಕರಣವನ್ನು 5ಜಿಗೂ ಅನುಕೂಲವಾಗುವಂತೆ ಅಪ್‌ಡೇಟ್ ಮಾಡಿ ತಯಾರಿಸಿರುವ ಬಗ್ಗೆ ಹೇಳಿಕೊಂಡಿವೆ. ಆದರೂ, ನಮ್ಮಲ್ಲಿ ಬಹುತೇಕ ಚಾಲ್ತಿಯಲ್ಲಿರುವ ಎಲ್ಲರ 4ಜಿ ಸ್ಮಾರ್ಟ್‌ಗಳ ಗತಿಯೇನೆಂಬುದಕ್ಕೆ ಮಾತ್ರ ಕಾಲವೇ ಉತ್ತರಿಸಬೇಕಾಗಿದೆ. ಮೊಬೈಲ್ ತಯಾರಿಕಾ ಕಂಪನಿಗಳಂತೂ 5ಜಿಗೆಂದು ಹೊಸ ತಂತ್ರಜ್ಞಾನದ ಅತ್ಯಾಧುನಿಕ ಫ್ಯೂಚರ್‌ಗಳ ಒಳಗೊಂಡ ತಯಾರಿಯನ್ನು ಆರಂಭಿಸಿ, ಮಾರುಕಟ್ಟೆಗೆ ಬಿಟ್ಟು ಪ್ರಚಾರ ಮಾಡುತ್ತಿವೆ. 5ಜಿ ಬಂದ ನಂತರ ಹೊಸತರ ಬದಲಾವಣೆಯಂತೂ ಖಂಡಿತವಾಗಿಯೂ ಸಾಧ್ಯವಿದ್ದು, ಟೆಲಿಕಾಂ ಕ್ಷೇತ್ರದಲ್ಲಿ ಇದು ದೊಡ್ಡ ಮಟ್ಟದ ಕ್ರಾಂತಿಯನ್ನೆ ಮಾಡಬಹುದೆಂದು ಹೇಳಲಾಗುತ್ತಿದೆ.



ಈ ವೇಗ ಬಹುಶಃ ನಮ್ಮ ಊಹೆಗೂ ಮೀರಿದ್ದೆಂದರು ತಪ್ಪಿಲ್ಲ. ಇನ್ನೂ 5ಜಿ ಸೇವೆಯ ಕುರಿತು ಅಧ್ಯಯನ ನಡೆಸಿರುವ ಉನ್ನತ ಮಟ್ಟದ ತಂತ್ರಜ್ಞರು ಇದರ ಕೆಲ ಉಪಯುಕ್ತ ಮಾಹಿತಿಗಳ ಹಂಚಿಕೊಂಡಿದ್ದಾರೆ. 5ಜಿ ಸೇವೆಗೆ ಮೊಬೈಲ್‌ನ ಬ್ಯಾಟರಿ ಅಷ್ಟು ಬೇಕಾಗಿಲ್ಲ ಹಾಗೂ ಬ್ಯಾಟರಿಯ ದೀರ್ಘತೆಯನ್ನು ಇದು ಕಾಪಾಡುತ್ತದೆಯಂತೆ. ಈ 5ಜಿ ವೇಗವು ಡೌನಲೋಡ್ ವೇಗಕ್ಕಿಂತ ಹೆಚ್ಚಾಗಿರಬಹುದೆಂದು ಅಂದಾಜಿಸಲಾಗಿದೆ. ಅದರ ಪ್ರಜ್ವಲಿಸುವ ವೇಗ ಮತ್ತು ಕಡಿಮೆ ಸುಪ್ತತೆಯೊಂದಿಗೆ ಹಲವು ಸಾಧನಗಳನ್ನು ಒಂದೇ ಸಾರಿಗೆ ಪರಸ್ಪರ ಸಂಪರ್ಕಿಸಲು, ದೂರದಿಂದಲೇ ನಿಯಂತ್ರಿಸಲು ಸುಲಭವಾಗುವ ಮೂಲಕ ಇಂಟರ್‌ನೆಟ್‌ನ ಸಾಧ್ಯತೆಯನ್ನು ಹೆಚ್ಚು ಮಾಡುವ ಭರವಸೆ ಮೂಡಿಸಿದೆ. ಮುಂದಿನ ಭವಿಷ್ಯದ ಸ್ಮಾರ್ಟ್ ಸಿಟಿ ಮೂಲಸೌಕರ್ಯ, ಸ್ವಯಂ ಚಾಲಿತ ಕಾರು, ರೊಬೊಟಿಕ್ ಶಸ್ತ್ರಚಿಕಿತ್ಸೆಗಳಲ್ಲಿ, ಸ್ವಾಭಾವಿಕವಾಗಿ ಬಳಸಲು ಅನುಕೂಲವಾಗುವಂತೆ ಭವಿಷ್ಯದ 5ಜಿ ತಂತ್ರಜ್ಞಾನವಿರಲಿದೆ. ಇದು ಕ್ರೀಡಾ ಕ್ಷೇತ್ರ ಮತ್ತು ಶಿಕ್ಷಣ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಅತ್ಯುನ್ನತ ತಂತ್ರಜ್ಞಾನದ ಮೂಲಕ ಹೆಚ್ಚು ಪರಿಣಾಮಕಾರಿಯಾಗಲಿದೆ. ಜಪಾನ್, ಕೆನಡಾ, ದಕ್ಷಿಣ ಕೊರಿಯಾ, ಅಮೇರಿಕಾ ಸೇರಿದಂತೆ ಹಲವು ರಾಷ್ಟ್ರಗಳು ಈಗಾಗಲೇ 5ಜಿ ಸೇವೆಯನ್ನು ತಮ್ಮ ದೇಶದ ಗ್ರಾಹಕರಿಗೆ ನೀಡಿವೆ. ಭಾರತವು ಕೂಡ ಈ ಸೇವೆಯನ್ನು ವರ್ಷಾಂತ್ಯದೊಳಗೆ ತನ್ನ ಬಳಕೆದಾರರಿಗೆ ಒದಗಿಸುವ ಮೂಲಕ ಆ ಪಟ್ಟಿಯಲ್ಲಿ ಸ್ಥಾನ ಪಡೆಯಲಿದೆ.

5ಜಿ ನೆಟ್‌ವರ್ಕ್ ಬಳಕೆಯಲ್ಲಿ ಕೆಲವು ಲೋಪಗಳಿದೆ ಎಂದು ಅಮೇರಿಕಾ ದೇಶ ಹೇಳಿ, 5ಜಿ ಬಗ್ಗೆ ತನ್ನದೆ ಆದ ಒಂದು ರೀತಿಯ ಅಸಮಾಧಾನ, ಆತಂಕ ಹೊರಗೆ ಹಾಕಿತ್ತು. ಅದೇನೆಂದರೆ 5ಜಿ ಟವರ್‌ಗಳು ವಿಮಾನ, ಹೆಲಿಕಾಪ್ಟರ್‌ಗಳ ಹಾರಾಟಕ್ಕೆ ತುಂಬಾ ತೊಂದರೆ ಉಂಟುಮಾಡುತ್ತದೆ ಎಂದು. 5ಜಿ ಬಳಸುವ ಯಾವ ದೇಶಗಳು ಈ ರೀತಿಯ ದೂರು ನೀಡದೆ ಇರುವಾಗ ಅಮೇರಿಕಾ ಮಾತ್ರ 5ಜಿಯನ್ನು ವಿರೋಧಿಸುವ ಕುರಿತು ಸುದ್ದಿಗಳು ಹೊರಗೆ ಬಿತ್ತು.

> ಜಗತ್ತಿನಲ್ಲಿ ಮೊದಲ ಬಾರಿಗೆ ಜಪಾನ್ ದೇಶವು ಪರಿಚಯಿಸಿದ 1ಜಿ ವೇಗವು ಬರಿಯ ಕರೆ ಮತ್ತು ಮೆಸೇಜ್‌ಗಷ್ಟೆ ಸೀಮಿತವಾಗಿತ್ತು. ಇದರಲ್ಲಿ ಅಷ್ಟು ಸ್ಪಷ್ಟತೆ ಕೂಡ ಇರಲಿಲ್ಲ. ಇದೇ ಮುಂದೆ ಕಾಲಾನುಕ್ರಮದಲ್ಲಿ ತಂತ್ರಜ್ಞಾನವನ್ನು ಬಳಸಿಕೊಂಡು ಅಭಿವೃದ್ಧಿ ಹೊಂದಿದಂತೆ 2ಜಿ, 3ಜಿ ಸೇವೆಗಳಾಗಿ ಅನೇಕ ಅನುಕೂಲಗಳ ಒದಗಿಸಿ ತಂತ್ರಜ್ಞಾನದಲ್ಲಿ ಹಿಂದೆಂದಿಗಿಂತ ಹೆಚ್ಚಿನ ವೇಗದ ಬದಲಾವಣೆಗೆ ಕಾರಣವಾಗಿತ್ತು. ಅದರ ಮುಂದುವರೆದ ಭಾಗವಾಗಿ 4ಜಿಯ ನಂತರ 5ಜಿ ಬಳಕೆಗೆ ಬರುತ್ತಿದೆ. ಇದರ ಉದ್ದೇಶ ಬಳಕೆದಾರರಿಗೆ ಉತ್ತಮ ಮಟ್ಟದ ವೇಗದ ಸೇವೆ ನೀಡುವುದು. 5ಜಿ ಅತಿ ವೇಗದಲ್ಲಿ ಗ್ರಾಹಕರಿಗೆ ಸೇವೆ ಒದಗಿಸುವ ಭರವಸೆಯೊಂದಿಗೆ ಇದರ ತಂತ್ರಜ್ಞಾನ ರೂಪುಗೊಳ್ಳುತ್ತಿದೆ. ಸದ್ಯದ 4ಜಿ ನೆಟ್‌ವರ್ಕ್ 50 ಮಿಲಿ ಸೆಕೆಂಡ್‌ಗಳಲ್ಲಿ ತನ್ನ ಸೇವೆ ಒದಗಿಸಿದರೆ ಮುಂದೆ ಬರುವ 5ಜಿ ಇದಕ್ಕಿಂತ ಹೆಚ್ಚಿನಪಟ್ಟು ಅಂದರೆ ಕೇವಲ ಒಂದು ಮಿಲಿ ಸೆಕೆಂಡ್‌ನಲ್ಲಿ ತನ್ನ ಕೆಲಸ ಮಾಡಲಿದೆ ಎಂದು ತಜ್ಞರು ತಿಳಿಸಿದ್ದಾರೆ.

ಈ ಸುದ್ದಿಯ ಕುರಿತು ತಜ್ಞರು ಪರಿಶೀಲಿಸಲು ಸಿಕ್ಕ ಮಾಹಿತಿ ಏನೆಂದರೆ ಬೇರೆಲ್ಲಾ 5ಜಿ ಬಳಸುವ ದೇಶಗಳ ಫ್ರೀಕ್ವೆನ್ಸಿ ಕಡಿಮೆಯಾಗಿದ್ದರೆ, ಅಮೇರಿಕಾ 5ಜಿಯಲ್ಲಿ ಬಳಸುವ ಫ್ರೀಕ್ವೆನ್ಸಿ ಹೆಚ್ಚಿನದಾಗಿತ್ತು. ಈ ಕಾರಣದಿಂದ ಅಲ್ಲಿ ವಿಮಾನ, ಹೆಲಿಕಾಪ್ಟರ್‌ಗಳ ಲ್ಯಾಡಿಂಗ್‌ಗೆ, ಹಾರಾಟಕ್ಕೆ ಈ ಹೈ ಫ್ರೀಕ್ವೆನ್ಸಿ ಅಡ್ಡವಾಗಿತ್ತು. ತಂತ್ರಜ್ಞರು ಹೇಳುವಂತೆ ನಾವು ಬಳಸುವ 5ಜಿ ಫ್ರೀಕ್ವೆನ್ಸಿ ಹೆಚ್ಚಾದಷ್ಟು ಈ ರೀತಿಯ ಸಮಸ್ಯೆಗಳು ಕಾಣಿಸಿಕೊಳ್ಳುವುದು ಸಾಮಾನ್ಯವಾಗಿದ್ದು, ಭಾರತವು ಕೂಡ ಮುಂದೆ 5ಜಿ ಟವರ್‌ಗಳ ಹಾಕುವಾಗ ಈ ಅಂಶವನ್ನು ಗಮನದಲ್ಲಿರಿಸಿ ಕೊಂಡು 5ಜಿ ಸೇವೆಯನ್ನು ಬಳಕೆದಾರರಿಗೆ ನೀಡಬೇಕಾಗಿದೆ. 5ಜಿ ಭಾರತಕ್ಕೆ ಕಾಲಿಡುವ ಹೊಸ್ತಿಲಲ್ಲೇ ಮುಂದೆ ಇದಕ್ಕೆ ಮೀರಿದಂತೆ ಭವಿಷ್ಯದಲ್ಲಿ ಬರಲಿರುವ 6ಜಿಯ ಕುರಿತು ಮಾತುಗಳು ಕೇಳಿ ಬರುತ್ತಿವೆ. 5ಜಿಗಿಂತ ಉತ್ತಮ ರೀತಿಯಲ್ಲಿ ಹೆಚ್ಚು ವೇಗದ ಸಾಮರ್ಥ್ಯದೊಂದಿಗೆ 6ಜಿ ಕೆಲಸ ಮಾಡಬಲ್ಲದೆಂದು ಹೇಳಲಾಗುತ್ತಿದೆ. ಆದರೆ, ಭವಿಷ್ಯದಲ್ಲಿ ಬರುವ 6ಜಿ ಬರಿಯ ಸ್ಮಾರ್ಟ್‌ಫೋನ್‌ಗಷ್ಟೇ ಮೀಸಲಾಗಿರದೆ ಅಗತ್ಯ ಸೂಕ್ಷ್ಮ ಶಸ್ತ್ರ ಚಿಕಿತ್ಸೆ, ಹೋಲೋಗ್ರಾಮ್ ಮುಂತಾದ ಅನೇಕ ಸೇವೆಗಳು ಗ್ರಾಹಕರಿಗೆ ಲಭ್ಯವಾಗು ವಂತೆ ಮಾಡಲಿದೆ. ಇನ್ನೂ ಮುಂದಿನ ಒಂದು ದಶಕದಲ್ಲಿ 6ಜಿ ಸೇವೆಯ ಮೂಲಕ ಆಗುವ ವಿವಿಧ ಬದಲಾವಣೆಯ ರೂಪು-ರೇಷೆಯು ನಮ್ಮ ಕಣ್ಮುಂದೆಯಿದೆ. ಅಲ್ಲಿಗೆ ಈ 'ಜಿ'ಗಳು ಕಾಲಾಂತರದಲ್ಲಿ ತಮ್ಮ ಎಲ್ಲೆಗಳ ಮೀರಿ ಜಿಗಿಯುತ್ತಲೇ ಇರುತ್ತವೆ ಎಂಬುದಂತು ಸತ್ಯ. ನಾವು ಈಗ ಬರಮಾಡಿಕೊಳ್ಳಬೇಕಾಗಿರುವುದು ಸದ್ಯಕ್ಕೆ ಬಳಕೆಗೆ ಸಿದ್ಧವಿರುವ 5ಜಿಯನ್ನು. ಇದಕ್ಕೆಂದು ನಮ್ಮಲ್ಲಿ ಕಾದವರ ಸಂಖ್ಯೆಯೇನು ಕಮ್ಮಿಯಿಲ್ಲ ಅವರೆಲ್ಲಾ 5ಜಿಯ ಬಳಸುವಿಕೆಯ ವೇಗಕ್ಕೆ ಮರುಳಾಗಲು ತುದಿಗಾಲಲ್ಲಿ ಕಾತುರರಾಗಿದ್ದರೆ. ಆದ್ದರಿಂದ ಟೆಲಿಕಾಂ ಕ್ಷೇತ್ರದಲ್ಲಿನ ಈ ಆಧುನಿಕ ಹೊಸ ತಂತ್ರಜ್ಞಾನ ತನ್ನ ಎಂದಿನ ನಾಗಲೋಟವನ್ನು ಮುಂದುವರೆಸುವುದರಲ್ಲಿ ಯಾವ ಅನುಮಾನಗಳು ಇಲ್ಲ.

ವಾರ ಭವಿಷ್ಯ



12.6.2022 ರಿಂದ 18.06.2022

ಈ ವಾರದಲ್ಲಿ ಗ್ರಹಗಳ ರಾಶಿ ಸಂಚಾರ
ರವಿ-ವೃಷಭ, ಮಿಥುನ, ಚಂದ್ರ-ತುಲಾ, ವೃಶ್ಚಿಕ, ಧನುಸ್ಸು, ಮಕರ, ಕುಜ-ಮೀನ, ಬುಧ-ವೃಷಭ, ಗುರು, ಮೀನ, ಶುಕ್ರ-ಮೇಷ, ಶನಿ-ಕುಂಭ, ರಾಹು-ಮೇಷ ಮತ್ತು ಕೇತು-ತುಲಾ



ವಿ.ಕೇಶವಮೂರ್ತಿ
ಜ್ಯೋತಿಷ್ಯ ವಿದ್ವಾಂಸರು, 'ಭಾವಸಾರ ರತ್ನ'
'ಚೈತನ್ಯಶ್ರೀ ಪ್ರಶಸ್ತಿ ಪುರಸ್ಕೃತರು". ಕಲ್ಪದ್ರುಮ ಜ್ಯೋತಿಷ್ಯ ಅಧ್ಯಯನ ಕೇಂದ್ರ, ವಿಳಾಸ : 533, 6ನೇ ಕ್ರಾಸ್, ಬೋಗಾದಿ ಉತ್ತರ 2ನೇ ಹಂತ, ಮೈಸೂರು ನಿರ್ಮಿತಿ ಕೇಂದ್ರ ಹತ್ತಿರ. ಮೈಸೂರು.
ಮೊ.9740973224, 9739548720

ಮೇಷ (ಚು.ಚೆ.ಲ.ಲಿ.ಲು.ಲೆ.ಲೋ.ಅ)

ವಾರದಾರಂಭಕ್ಕೆ ಧನ, ವಸ್ತ್ರಾಭರಣ, ಸ್ತ್ರೀ ಸುಖಗಳು ಲಭಿಸುತ್ತವೆ. ಮಾತು ಮತ್ತು ಕೃತಿ ಸ್ವಚ್ಛವಾಗಿರುತ್ತದೆ. ವಿಜ್ಞಾನಿಗಳಿಗೆ ಸಂಶೋಧನೆಯಲ್ಲಿ ಆಸಕ್ತಿ ಮೂಡುವುದು. ದಾನ-ಧರ್ಮ ಪ್ರವೃತ್ತಿ, ಧಾರ್ಮಿಕ ಉತ್ಸವಾದಿಗಳಲ್ಲಿ ಭಾಗಿ. ತಾಯಿ ಸಂಬಂಧ, ಆಸ್ತಿ ವಿಷಯಗಳು ಸುಖಾಂತ್ಯವನ್ನು ಹೊಂದುವುದು. ನಿರೀಕ್ಷಿತ ಧನ ಕೈ ಸೇರುವಲ್ಲಿ ವಿಳಂಬವಾಗುವುದು. ಕಫ ಜನಿತ ರೋಗ ಕಾಡಬಹುದು. – ಶ್ರೀ ವಿಘ್ನೇಶ್ವರನಿಗೆ ಕ್ಷೀರ ಸಮರ್ಪಣೆ, ಶುಭಸಂಖ್ಯೆ-1.

ವೃಷಭ (ಇ.ಉ.ಎ.ಒ.ವ.ವಿ.ವು.ವೆ.ವೊ)

ಶುಭ ಗುರುವಿನ ಪರಿಣಾಮ ಭಾಗ್ಯದಲ್ಲಿ ವೃದ್ಧಿ. ಸುವರ್ಣ ವ್ಯಾಪಾರಿಗಳಿಗೆ ಹೆಚ್ಚಿನ ಧನಲಾಭ. ಪರೀಕ್ಷೆ, ಸಂದರ್ಶನಗಳಲ್ಲಿ ಸಫಲತೆ ಹಾಗೂ ಯಶಸ್ಸು. ಮಕ್ಕಳ ಸಾಧನೆಯಿಂದ ಹರುಷ. ಹೊಸ ವೃತ್ತಿ ಅನ್ವೇಷಕರಿಗೆ ಶುಭವಾರ್ತೆ ಬರುವುದು. ಯುವತಿಯರಿಗೆ ಕನ್ಯಾಸೆರೆಯಿಂದ ಬಿಡುಗಡೆ. ಪಿತೃಸಮಾನ ವ್ಯಕ್ತಿಯ ವಿಯೋಗದಿಂದ ದುಃಖ. ಕಬ್ಬಿಣಧಾತು ವ್ಯಾಪಾರಿಗಳು ನಷ್ಟಕ್ಕೆ ಗುರಿಯಾಗುವರು. – ಶ್ರೀ ಚಾಮುಂಡೇಶ್ವರಿ ದರ್ಶನ, ಶುಭಸಂಖ್ಯೆ-6.

ಮಿಥುನ (ಕ.ಕಿ.ಕು.ಘ.ಜ.ಛ.ಕೆ.ಕೊ.ಹ)

ಉತ್ತಮ ಕೆಲಸಗಳಿಂದ ಜನಾಧರ ಗಳಿಸುವಿರಿ. ಆಸ್ತಿ ಸಂಪಾದನೆಯಲ್ಲಿ ಹಿತೈಷಿಗಳ ಸಹಕಾರ ದೊರೆಯುತ್ತದೆ. ಆತುರದಿಂದ ಆಗುವ ಕೆಲಸ ಎಡವಟ್ಟಾದೀತು. ಸರ್ಕಾರಿ ಕಚೇರಿಗಳಿಗೆ ವೃಥಾ ಅಲೆದಾಟ, ಪ್ರತಿಫಲ ಮಾತ್ರ ಶೂನ್ಯ. ವಾರದ ಕಡೆಗೆ ಧಾನ್ಯ ವ್ಯಾಪಾರಿಗಳಿಗೆ ಅಧಿಕ ಲಾಭ ದೊರೆಯುವುದು. ಶೇರು ವ್ಯವಹಾರಗಳಿಂದ ಲಾಭ ದೊರೆಯುವ ಸಾಧ್ಯತೆ ಇದೆ. ಮನೆ ಕೆಲಸದ ಆಳುಗಳನ್ನು ನಂಬದಿರಿ. – ಶ್ರೀ ಶ್ರೀನಿವಾಸ ದರ್ಶನ, ಶುಭಸಂಖ್ಯೆ-7.

ಕಟಕ (ಹೊ.ಹು.ಹೆ.ಹೊ.ಡ.ಡಿ.ಡು)

ಗುರು ಕೃಪೆಯಿಂದ ಹಣಕಾಸಿನ ಪರಿಸ್ಥಿತಿಯಲ್ಲಿ ಕೊರತೆಯೇನೂ ಆಗದು. ಗೃಹ ಬಳಕೆ ವಸ್ತು ಹಾಗೂ ಭಾರಿ ಬೆಲೆಬಾಳುವ ವಸ್ತುಗಳನ್ನು ಕೊಳ್ಳುವಿರಿ. ನ್ಯಾಯಾಲಯ ವ್ಯವಹಾರಗಳಲ್ಲಿ ವಿಜಯ. ಲೇಖಕರಿಗೆ, ಕಲಾಕ್ಷೇತ್ರದವರಿಗೆ ಉತ್ತಮ ಫಲ, ಪಾರಿತೋಷಕಗಳು ದೊರೆಯುವ ಸಂಭವ. ಸರ್ಕಾರಿ ನೌಕರರಿಗೆ ಉನ್ನತ ಪದವಿ ದೊರೆತು, ಸ್ಥಾನದಲ್ಲಿ ಬದಲಾವಣೆ ಆದೀತು. ವಾರಾಂತ್ಯಕ್ಕೆ ಕುಲ ದೇವತಾ ದರ್ಶನ. – ಶ್ರೀ ದೇವಿ ಸ್ತುತಿ, ಶುಭಸಂಖ್ಯೆ-8.

ಸಿಂಹ (ಮ.ಮಿ.ಮು.ಮೊ.ಮೆ.ಟ.ಟಿ.ಟು.ಟೆ)

ಶುಭ ಕಾರ್ಯಕ್ಕೆ ಪ್ರಯತ್ನಗಳು ಮುಂದುವರೆಯಲಿ. ಭವಿಷ್ಯದ ಕೆಲಸ ಕಾರ್ಯಗಳಿಗೆ ಕಾಲಮಿತಿ ಹಾಕಿಕೊಳ್ಳುವುದು ಒಳ್ಳೆಯದು. ಸಪ್ತಮದಲ್ಲಿ ಶನಿದೇವನ ಹಾಗೂ ಅಷ್ಟಮದಲ್ಲಿ ಗುರುದೇವನ ಸಂಚಾರ ನಿಮ್ಮ ಅನಿರೀಕ್ಷಿತ ನಡವಳಿಕೆಗೆ ಕಾರಣವಾಗುವುದು. ಸ್ಥಿರತೆ ಇಲ್ಲದ ನಿರ್ಧಾರಗಳಿಂದ ಕಾರ್ಯ ಯೋಜನೆ ಉಲ್ಟಾ ಹೊಡೆಯವುದು. ವಾರಾಂತ್ಯಕ್ಕೆ ಶಾರ್ಟ್‌ಟ್ರಿಪ್ ಉಂಟಾದೀತು. ದೀನರಿಗೆ ಸಹಾಯ ಮಾಡಿ. – ಶ್ರೀ ಶನಿ, ಶ್ರೀ ಗುರು ಪ್ರಾರ್ಥನೆ, ಶುಭಸಂಖ್ಯೆ-3.

ಕನ್ಯಾ (ಟೊ.ಪ.ಪಿ.ಪು.ಷ.ಣ.ಠ.ಪೆ.ಪೊ)

ಈ ಸಪ್ತಾಹದಲ್ಲಿ ಬೃಹಸ್ಪತಿಯ ಕೃಪೆಯಿಂದ ಉದ್ಯೋಗ, ವ್ಯವಹಾರಗಳು ಲಾಭದಾಯಕವಾಗಿ ನಡೆಯುವುದು. ಸ್ಥಗಿತ ಗೊಂಡಿದ್ದ ಕೆಲಸಗಳು ಮರುಚಾಲನೆ ಪಡೆಯಲಿದೆ. ವೈವಾಹಿಕ ಜೀವನದಲ್ಲಿ ಹರ್ಷ, ಉಲ್ಲಾಸಗಳು, ಉದ್ಯೋಗ ಅರಸುವವರಿಗೆ ಸುವಾರ್ತೆ ಬರುವುದು. ಬೃಹತ್ ಉದ್ದಿಮೆದಾರರಿಗೆ ದೊಡ್ಡ ಮಟ್ಟದ ಆರ್ಡರ್ ದೊರೆಯಲಿದೆ. ಅಷ್ಟಮ ರಾಹುವಿನ ಕಾರಣ ದುಡುಕು ತೀರ್ಮಾನದಿಂದ ಸಂಕಷ್ಟಗಳು. – ಶ್ರೀ ವೈಷ್ಣವಿ ಉಪಾಸನೆ, ಶುಭಸಂಖ್ಯೆ-8.

ತುಲಾ (ರ.ರಿ.ರು.ರೆ.ರೊ.ತ.ತಿ.ತು.ತೆ)

ವಾರದಾರಂಭಕ್ಕೆ ನಿಮ್ಮ ರಾಶಿಗೆ ಬರುವ ಚಂದ್ರನಿಂದ ವಿದ್ಯಾ, ವ್ಯಾಸಂಗ ಪ್ರಸಂಗಗಳಲ್ಲಿ ಕೀರ್ತಿ. ಸ್ತ್ರೀಸುಖ, ಧಾರ್ಮಿಕ ಕಾರ್ಯಗಳಲ್ಲಿ ಪಾಲ್ಗೊಳ್ಳುವಿರಿ. ದಾನ-ಧರ್ಮ, ಬುದ್ಧಿ, ರಜತ ಪದಾರ್ಥಗಳ ಖರೀದಿ. ಆಪ್ತ ಬಂಧುವರ್ಗದವರ ಆದರ. ಪಂಚಮ ಶನಿ ಕಾರಣ ಸಿಮೆಂಟ್, ಕಬ್ಬಿಣ ವ್ಯಾಪಾರ ಮಂದಗತಿಯಲ್ಲಿ ಸಾಗುವುದು. ಉದ್ಯಮಪತಿಗಳಿಗೆ ನೌಕರ ವರ್ಗದವರ ಅಸಹಕಾರದಿಂದ ನಷ್ಟ ಸಂಭವ. – ಶ್ರೀ ವರಾಹಸ್ವಾಮಿ ದರ್ಶನ, ಶುಭಸಂಖ್ಯೆ-4.

ವೃಶ್ಚಿಕ (ತೊ.ನ.ನಿ.ನು.ನೆ.ನೊ.ಯ.ಯಿ.ಯು)

ಗುರುಕೃಪೆಯಿಂದ ನಿರೀಕ್ಷಿತ ಧನ ಕೈ ಸೇರುವುದು. ಬೋಜನ, ಶಯನ ಸುಖಗಳೂ ಉಂಟು. ಕುಟುಂಬವರ್ಗದಲ್ಲಿ ನೂತನ ಸದಸ್ಯರ ಸೇರ್ಪಡೆ. ಫ್ಯಾನ್ಸಿ ಅಂಗಡಿಯವರಿಗೆ ಹೆಚ್ಚಿನ ವ್ಯಾಪಾರವಾಗುವುದು. ಹಲವರಿಗೆ ವಿದೇಶ ಯಾತ್ರೆಯ ಯೋಗವಿದೆ. ಸುವರ್ಣ ವ್ಯಾಪಾರ ಹೆಚ್ಚಳ. ಯುವತಿಯರಿಗೆ ಕನ್ಯಾಸೆರೆಯಿಂದ ಬಿಡುಗಡೆ. ಮಕ್ಕಳ ಶ್ರೇಯಸ್ಸಿನಿಂದ ಹರುಷ. ಕಫ ಸಂಬಂಧಿ ಕಾಯಿಲೆ ಕಾಡಬಹುದು. – ಶ್ರೀ ಔದುಂಬರ ವೃಕ್ಷ ಪ್ರದಕ್ಷಿಣೆ, ಶುಭಸಂಖ್ಯೆ-2.

ಧನುಸ್ಸು (ಯೆ.ಯೊ.ಬ.ಬಿ.ಬು.ಧ.ಭ.ಢ.ಬೆ)

ವಾರದಾರಂಭಕ್ಕೆ ವಿವಿಧ ರೀತಿಯಿಂದ ಧನಲಾಭ, ಹೊಸ ವ್ಯಾಪಾರ ಅನುಷ್ಠಾನ. ರೆಡಿಮೇಡ್ ವ್ಯಾಪಾರಿಗಳಿಗೂ, ವಾಹನ ಏಜೆನ್ಸಿಗಳಿಗೂ ವಿಶೇಷ ಧನಲಾಭ. ನಿಮ್ಮ ಸಾಮರ್ಥ್ಯವನ್ನರಿತು ಕೆಲಸಗಳನ್ನು ವಹಿಸಿಕೊಳ್ಳಿ. ಸಂಭಾವಿತರೊಂದಿಗೆ ಮಾತ್ರ ವ್ಯವಹರಿಸಿ. ಸಣ್ಣ ಮಟ್ಟ ಪ್ರಯಾಣಗಳು ಪ್ರಯೋಜನಕಾರಿ ಎನಿಸಲಿದೆ. ರಾಹು ಪ್ರಭಾವದಿಂದ ನಿಮಗೆ ಸಂಬಂಧವಿಲ್ಲದ ವಿಷಯಗಳಲ್ಲಿ ತಲೆಹಾಕಿ ಸಂಕಷ್ಟಕ್ಕೆ ಸಿಲುಕಿಕೊಳ್ಳಬೇಡಿ. -ಶ್ರೀ ದತ್ತಗುರು ಪೂಜೆ, ಶುಭಸಂಖ್ಯೆ-5.

ಮಕರ (ಬೊ.ಜ.ಜೆ.ಶಿ.ಶು.ಶೆ.ಶೊ.ಗ.ಗಿ.)

ಅಪೇಕ್ಷಿತ ಕೆಲಸ ಕಾರ್ಯಗಳು ಮಂದಗತಿಯಲ್ಲಿ ಸಾಗುವುದು. ಸಾಲ ಕೊಟ್ಟು ಕೈ ಸುಟ್ಟುಕೊಳ್ಳದಿರಿ. ಯಂತ್ರ ವಾಹನಗಳ ರಿಪೇರಿಗೆ ಹಣ ಖರ್ಚಾಗುವುದು. ದ್ವಿದಳ ಧಾನ್ಯ, ಎಳ್ಳು, ಸಗಟು ವ್ಯಾಪಾರಿಗಳಿಗೆ ಹೆಚ್ಚಿನ ಲಾಭ ದೊರೆಯುವುದು. ವಾರಾಂತ್ಯಕ್ಕೆ ನಿಮ್ಮ ರಾಶಿಗೆ ಬರುವ ಚಂದ್ರನಿಂದ ಆದಾಯದಲ್ಲಿ ಹೆಚ್ಚಳ. ಇಂಜಿನಿಯರ್‌ಗಳಿಗೆ ಬೇಡಿಕೆ ಉಂಟಾಗಲಿದೆ. ದೂರ ಸರಿದಿದ್ದವರು ಹತ್ತಿರ ಬರುವರು. – ಕಪ್ಪು ಗೋವಿನ ಸೇವೆ, ಶುಭಸಂಖ್ಯೆ-3.

ಕುಂಭ (ಗು.ಗೆ.ಗೊ.ಸ.ಸಿ.ಸು.ಸೆ.ಸೊ.ದ)

ವಾರದ ಆದಿಗೆ ಗುರುಕೃಪೆಯಿಂದ ಮನಸ್ಸಿಗೆ ನೆಮ್ಮದಿ ನೀಡುವ ಪ್ರಸಂಗವೊಂದು ಘಟಿಸಲಿದೆ. ನಿಮ್ಮ ನಿಕಟವರ್ತಿಗಳು ನಿಮ್ಮ ಮಹತ್ವದ ಕಾರ್ಯ ಕಲಾಪಗಳಿಗೆ ನೆರವು ನೀಡುವರು. ಹೊಸ ಬಂಡವಾಳ ಹೂಡಿಕೆಗಳು ಸದ್ಯಕ್ಕೆ ಬೇಡ. ಹೊಸ ವಾಹನ ಖರೀದಿಯ ಕನಸು ನನಸಾಗುವ ಸಾಧ್ಯತೆ. ಕುಂಭಸ್ಥ ಶನಿದೇವನ ಕಾರಣ ಮನೆಯ ಆಂತರಿಕ ಕಲಹಗಳು ಬೀದಿಗೆ ಬಾರದಿರಲಿ. ಸಣ್ಣಮಟ್ಟ ಕಾಯಿಲೆ ಕಾಡಬಹುದು. – ಶ್ರೀ ಸಂಕಷ್ಟಹರ ಗಣಪತಿ ಸ್ತೋತ್ರ ಪಠಿಸಿ, ಶುಭಸಂಖ್ಯೆ-7.

ಮೀನ (ದಿ.ದು.ಖ.ಝ.ಥ.ತೆ.ದೊ.ಚ.ಚಿ)

ಹೆಚ್ಚು ಹಣ ಕೈ ಸೇರಿದರೂ ಜೇಬು ಮಾತ್ರ ಖಾಲಿ ಹೊಡೆಯುತ್ತದೆ. 'ಸುಖೇ ದುಃಖೇ ಸಮೇಕೃತ್ವಾ' ಎಂಬ ಶ್ರೀಕೃಷ್ಣನ ವಾಣಿಯಂತೆ ಸ್ವೀಕರಿಸಿ ನಡೆಯಿರಿ. ಅಂದುಕೊಳ್ಳುವುದು ಜೀವನವಲ್ಲ. ಹೊಂದಿಕೊಳ್ಳುವುದು ಜೀವನ. ಚಿಂತಿಸುವ ಅಗತ್ಯವಿಲ್ಲ. 'ಸೆಟ್‌ಬ್ಯಾಕ್ ನಂತರ ಕಮ್‌ಬ್ಯಾಕ್' ಇದ್ದೇ ಇರುತ್ತದೆ. ಮಹಿಳಾಮಣಿಯರು ದಾರಿಗಳ್ಳರಿಂದ ಎಚ್ಚರಿಕೆಯಾಗಿರಿ. ವಾರದ ಕಡೆಗೆ ಗುರುದರ್ಶನದಿಂದ ಗುರಿ ಕಾಣುತ್ತದೆ. – ಶ್ರೀ ರಾಮಾಷ್ಟೋತ್ತರ ಪಠಿಸಿ, ಶುಭಸಂಖ್ಯೆ-9.

ಆರೋಗ್ಯ ಕವಚ ಕಪ್ಪು ವಜ್ರ!



– ವಿನಯ್‌ಕಾರೇಕುರ
ಮೊ: 9686893234



ಹಳ್ಳಿಯಿಂದ ಪಟ್ಟಣದವರೆಗೆ, ಕಿರಿಯರಿಂದ ವೃದ್ಧರವರೆಗೆ ಎಲ್ಲರಿಗೂ ಇಷ್ಟವಾಗುವ ಕಪ್ಪು ವಜ್ರ 'ಜಂಬು ನೇರಳೆ'. ನೈಸರ್ಗಿಕವಾಗಿ ಬೆಳೆಯುವ ನೇರಳೆ ಈಗ ರೈತರ ಹೊಲದಲ್ಲಿ ಹಣ್ಣಿನ ಬೆಳೆ ಸ್ಥಾನ ಪಡೆದಿದ್ದು ವಿಶೇಷ ರುಚಿ, ಔಷಧೀಯ ಗುಣಗಳನ್ನು ಒಳಗೊಂಡಿರುವ ನೇರಳೆ, ನೋಡಿದವರ ಬಾಯಲ್ಲಿ ನೀರೂರಿಸುತ್ತದೆ.

ವರ್ಷಕ್ಕೊಮ್ಮೆ ಸಿಗುವ ಅಪರೂಪದ ಹಣ್ಣು. ಮೇ, ಜೂನ್ ತಿಂಗಳಲ್ಲಿ ಮಾತ್ರ ಇದು ಲಭ್ಯ. ರಾಸಾಯನಿಕ ಗೊಬ್ಬರ, ಕೀಟನಾಶಕ ಬಳಕೆಯಿಲ್ಲದೆ ನೈಸರ್ಗಿಕವಾಗಿ ಬೆಳೆಯುತ್ತಿದ್ದ ನೇರಳೆ ಇದೀಗ ತೋಟಗಾರಿಕಾ ಕೃಷಿ ಸ್ವರೂಪಕ್ಕೆ ತಿರುಗುತ್ತಿದೆ.

ನಾಯಿ ನೇರಳೆ, ಜಂಬು ನೇರಳೆ ಎಂಬ ಹೆಸರುಗಳಲ್ಲಿ ಗುರುತಿಸಲಾಗುತ್ತದೆ. ನಾಯಿ ನೇರಳೆ ಮಲೆನಾಡಿನ ಭಾಗದಲ್ಲಿ ಸಿಗುವ ಚಿಕ್ಕ ಗಾತ್ರದ ಹಣ್ಣು ದೊಡ್ಡ ಗಾತ್ರದ ಜಂಬು ನೇರಳೆ ಈಚೆಗೆ ಹೊರ ರಾಜ್ಯಗಳಿಂದಲೂ ಬರುತ್ತಿರುವುದು ವಿಶೇಷ. ಈ ಹಣ್ಣುಗಳ ಗಾತ್ರ, ರುಚಿಯಲ್ಲಿ ವ್ಯತ್ಯಾಸ ವಿದ್ದರೂ, ಔಷಧೀಯ ಗುಣ ಮಾತ್ರ ಎರಡರಲ್ಲೂ ಒಂದೇ ಇರಲಿದೆ.

ನೇರಳೆ ಹಣ್ಣು ಮಾತ್ರವಲ್ಲ ಎಲೆ, ಕಾಯಿ, ತೊಗಟೆ, ಬೀಜ ಎಲ್ಲವೂ ಔಷಧೀಯ ಗುಣ ಹೊಂದಿವೆ. ಹಾಗಾಗಿ, ಈ ಹಣ್ಣಿಗೆ ಬೇಡಿಕೆಯೂ ಹೆಚ್ಚು. ಇದರ ಪರಿಣಾಮ ಮಾರುಕಟ್ಟೆಯಲ್ಲಿ ಪ್ರಸ್ತುತ ಒಂದು ಕೆ.ಜಿ. ಹಣ್ಣಿಗೆ 200ರಿಂದ 280ರ ಧಾರಣೆಯಿದೆ. ತುಟ್ಟಿಯಾದರೂ ಹಣ್ಣು ಖರೀದಿಸಿ, ಸವಿಯುವವರ ಸಂಖ್ಯೆ ದಿನದಿಂದ ದಿನಕ್ಕೆ, ವರ್ಷದಿಂದ ವರ್ಷಕ್ಕೆ ಸಾಕಷ್ಟು ಹೆಚ್ಚುತ್ತಿದೆ.

ಒಂದೂವರೆ ವರ್ಷಗಳಿಂದ ಕೊರೊನಾ ಜಗತ್ತಿನಾದ್ಯಂತ ಎಲ್ಲಾ ವಲಯಗಳ ಮೇಲೂ ತನ್ನ ಬಾಹುಗಳನ್ನು ಚಾಚಿತ್ತು. ಹಾಗೆಯೇ ಕೃಷಿ ವಲಯಕ್ಕೂ ಕೊರೊನಾ ದೊಡ್ಡ ಮಟ್ಟದ ಹೊಡೆತವನ್ನೇ ನೀಡಿತ್ತು ಪರಿಣಾಮ ರೈತರು ಬೆಳೆದ ಹಲವು ಬೆಳೆಗೆ ಸೂಕ್ತ ಮಾರುಕಟ್ಟೆ, ಬೆಲೆ ದೊರೆಯದೆ ಭಾರೀ ನಷ್ಟವುಂಟಾಯಿತು. ಇಂದಿಗೂ ಎಷ್ಟೋ ಬೆಳೆಗಳ ಬೆಲೆ ಸುಧಾರಣೆಯೇ ಆಗಿಲ್ಲ. ಆದರೆ, ಕಪ್ಪು ವಜ್ರ ಮಾತ್ರ ವರ್ಷದಿಂದ ವರ್ಷಕ್ಕೆ ಬೆಲೆ, ಬೇಡಿಕೆಯನ್ನು ಹೆಚ್ಚಿಸಿಕೊಂಡಿದೆ.

ರೈತರು ಮೊದಲೆಲ್ಲಾ ನೇರಳೆ ಬೆಳೆಯನ್ನು ಜಮೀನುಗಳ ಬೇಲಿ ಸಾಲಿನಲ್ಲಿ ಬೆಳೆಯುತ್ತಿದ್ದರು. ಆದರೆ, ಈಗ ಹೆಚ್ಚಾಗಿ ಬೆಳೆಯದ ಕಾರಣ ಹಾಗೂ ವ್ಯಾಪಕ ಅರಣ್ಯ ನಾಶದಿಂದ ಇಳುವರಿ ಕಡಿಮೆಯಾಗಿದೆ. ಇದೇ ಬೆಲೆ ಹೆಚ್ಚಾಗಲು ಪ್ರಮುಖ ಕಾರಣ ಎನ್ನುತ್ತಾರೆ ವ್ಯಾಪಾರಿಗಳು.

ನೇರಳೆಯಲ್ಲಿ ಕಸಿ, ಹೈಬ್ರೀಡ್, ಜಂಬು ತಳಿಗಳನ್ನೂ ಕಾಣಬಹುದಾಗಿದೆ ಸೀಡ್‌ಲೆಸ್ ಹಣ್ಣಿನ ತಳಿಗಳು ಚಾಲ್ತಿಗೆ ಬರುತ್ತಿವೆ. ಜೂನ್ ತಿಂಗಳು ನೇರಳೆ ನಾಟಿಗೆ ಸೂಕ್ತ ಕಾಲ. ನೇರಳೆ ಗಿಡ ಅನೇಕ ದಿನಗಳವರೆಗೆ ನೀರು ಹಿಡಿದಿರುವ ಸಾಮರ್ಥ್ಯ ಹೊಂದಿರುವುದರಿಂದ ಪ್ರತಿ ದಿನ ನೀರುಣಿಸುವ ಅಗತ್ಯವಿಲ್ಲ. ಇತರ ಬೆಳೆಗಳಿಗೆ ಹೋಲಿಸಿದರೆ ನಿರ್ವಹಣೆ ಸುಲಭ. ವರ್ಷಕ್ಕೊಮ್ಮೆ ಗೊಬ್ಬರ ನೀಡಿದರೆ, ನಾಟಿ ಮಾಡಿದ ಮೂರು ವರ್ಷಗಳಲ್ಲಿ ಉತ್ತಮ ಇಳುವರಿ ಪಡೆಯಬಹುದು.

ಔಷಧೀಯ ಗುಣಗಳು..!

ನೇರಳೆ ಹಣ್ಣಿನಲ್ಲಿ ಗ್ಲೂಕೋಸ್ ಹಾಗೂ ಫ್ರೋಕ್ಟೋಸ್ ಎಂಬ ಸಕ್ಕರೆ ಅಂಶಗಳಿವೆ. 'ಸಿ' ಜೀವಸತ್ವ ಸಾಕಷ್ಟು ಪ್ರಮಾಣದಲ್ಲಿರುವ ಈ ಹಣ್ಣಿನಲ್ಲಿ ಖನಿಜ ಲವಣಗಳಿದ್ದು, ಮಧುಮೇಹ ಚಿಕಿತ್ಸೆಗೆ ನೇರಳೆ ಹಣ್ಣು ಉತ್ತಮ.

ತಿನ್ನಲು ಯೋಗ್ಯವಾದ 100ಗ್ರಾಂ ನೇರಳೆ ಹಣ್ಣಿನಲ್ಲಿ ಸಾರಜನಕ-0.7ಗ್ರಾಂ, ನಾರು-0.9ಗ್ರಾಂ, ಕಬ್ಬಿಣ-12ಮಿಲಿಗ್ರಾಂ, ಕ್ಯಾಲ್ಸಿಯಂ-15ಮಿಲಿಗ್ರಾಂ, 'ಸಿ' ಜೀವಸತ್ವ-15 ಮಿಲಿಗ್ರಾಂ, ಪೋಲಿಕ್‌ಆಮ್ಲ-3 ಮಿಲಿಗ್ರಾಂ ಇರುತ್ತದೆ. ಗಾಯದಿಂದ ರಕ್ತ ಸೋರಿಕೆ ತಡೆಯುವ ವಿಶಿಷ್ಟ ಗುಣ ಈ ಹಣ್ಣಿನಿಂದ ಸಿಗಲಿದೆ.

ನೇರಳೆ ಹಣ್ಣಿನಲ್ಲಿ ಹೇರಳವಾಗಿರುವ ಪೊಟ್ಯಾಶಿಯಂ ರಕ್ತದೊತ್ತಡ ನಿಯಂತ್ರಿಸಲಿದೆ. ರಕ್ತಹೀನತೆ ನಿವಾರಣೆಗೂ ರಾಮಬಾಣವಿದು. ಪಿತ್ತ ದೋಷ ನಿವಾರಣೆಯಲ್ಲೂ ಈ ಹಣ್ಣು ಸೇವನೆ ಪ್ರಮುಖ ಪಾತ್ರ ವಹಿಸಲಿದೆ. ಕಿಡ್ನಿಯಲ್ಲಿನ ತೊಂದರೆ ನಿವಾರಣೆಗೆ ಈ ಹಣ್ಣು ಸಹಕಾರಿ.

ಕ್ಯಾನ್ಸರ್ ರೋಗಿಗಳಿಗೆ ನೇರಳೆ ಬೀಜ ಸಹಿತ ಹಣ್ಣಿನ ಜ್ಯೂಸ್ ಅತ್ಯುತ್ತಮ. ಹೃದಯ ಸಂಬಂಧಿ ರೋಗಕ್ಕೂ ಇದು ಮದ್ದಾಗಲಿದೆ. ವಸಡಿನ ರಕ್ತಸ್ರಾವ ನಿಯಂತ್ರಣ, ಕರುಳು ಸ್ವಚ್ಛಗೊಳಿಸುವಿಕೆಗೆ, ಗಾಯ ವಾಸಿಯಾಗಲು ಇದು ಉಪಯೋಗಕಾರಿ.

ಕಬ್ಬಿಣಾಂಶ, ವಿಟಮಿನ್, ಕ್ಯಾಲ್ಸಿಯಂ ಈ ಹಣ್ಣಿನಲ್ಲಿ ಹೇರಳವಾಗಿದೆ. ಅಸ್ತಮಾ ರೋಗಿಗಳು ಅಡುಗೆ ಅರಿಶಿಣ, ಕಾಳು ಮೆಣಸು ಬೆರೆಸಿದ ನೇರಳೆ ಹಣ್ಣಿನ ಜ್ಯೂಸ್ ಕುಡಿದರೆ ಆರೋಗ್ಯ ಸುಧಾರಿಸಲಿದೆ. ರೋಗ ನಿರೋಧಕ ಶಕ್ತಿಯನ್ನು ನೇರಳೆ ಹೊಂದಿದೆ. ನೇರಳೆಯ ಜ್ಯೂಸ್ ರಕ್ತದ ಪ್ರತಿ ಕಣವನ್ನು ಶುದ್ಧೀಕರಿಸುವ ಸಾಮರ್ಥ್ಯ ಹೊಂದಿದೆ ಎನ್ನುತ್ತಾರೆ ಆಯುರ್ವೇದ ತಜ್ಞರು. ಒಟ್ಟಿನಲ್ಲಿ ತಿನ್ನಲು ರುಚಿ ಹಾಗೂ ಔಷಧೀಯ ಗುಣಗಳಿರುವ ನೇರಳೆ ಹಣ್ಣು ವರ್ಷಕ್ಕೊಮ್ಮೆ ಮಾರುಕಟ್ಟೆಯಲ್ಲಿ ದೊರೆಯುತ್ತದೆ. ಜನರು ಇಷ್ಟಪಟ್ಟು ಖರೀದಿಸುತ್ತಿದ್ದಾರೆ. ಆದರೆ, ಬೇಡಿಕೆಗೆ ತಕ್ಕಂತೆ ಮಾರುಕಟ್ಟೆಯಲ್ಲಿ ಹಣ್ಣಿನ ಲಭ್ಯತೆ ಇಲ್ಲ. ನೇರಳೆ ಹಣ್ಣುಗಳ ತಿರಳನ್ನು ವೈನ್, ವಿನೆಗರ್, ಜೆಲ್ಲಿ, ಜಾಮ್ ತಯಾರಿಕೆಗೂ ಬಳಸಲಾಗುತ್ತದೆ.

ಧರ್ಮ ಸಂಘರ್ಷ ತಂದಿಡುವವರೇ ದೇಶ ದ್ರೋಹಿಗಳು

ಆರ್‌ಎಸ್‌ಎಸ್, ಬಿಜೆಪಿ ವಿರುದ್ಧ ಹರಿಹಾಯ್ದ ಶಾಸಕ ಪ್ರಿಯಾಂಕ್ ಖರ್ಗೆ

ತಿ.ನರಸೀಪುರ, ಜೂ.11(ಎಸ್‌ಕೆ)– ಧರ್ಮದ ಹೆಸರಲ್ಲಿ ಕೋಮು ಸೌಹಾರ್ದತೆ ಹಾಳುಗೆಡುವವಲು ಧರ್ಮ ಸಂಘರ್ಷ ತಂದಿಡುವವರೇ ನಿಜವಾದ ದೇಶ ದ್ರೋಹಿಗಳು ಎಂದು ಆರ್‌ಎಸ್‌ಎಸ್, ಬಿಜೆಪಿ ವಿರುದ್ಧ ಶಾಸಕ ಪ್ರಿಯಾಂಕ್ ಖರ್ಗೆ ಹರಿಹಾಯ್ದರು.

ಪಟ್ಟಣದ ಶ್ರೀಮಹದೇಶ್ವರ ಕಲ್ಯಾಣ ಮಂಟಪದಲ್ಲಿ ಶನಿವಾರ ದಲಿತ ಸಂಘರ್ಷ ಸಮಿತಿಯಿಂದ ಬಸವ ಜಯಂತಿ ಪ್ರಯುಕ್ತ ಸರ್ವಧರ್ಮ ಸಂಘಟನೆಗಳ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಂಡಿದ್ದ 'ಬುದ್ಧ, ಬಸವ, ಅಂಬೇಡ್ಕರ್ ಮಾರ್ಗದೆಡೆಗೆ ನಮ್ಮ ಚಿಂತನೆ ಹಾಗೂ ಜಾತಿ, ಧರ್ಮ, ದೇಶ, ಭಾಷೆ ಗಡಿಮೀರಿದ ಬಸವ ತತ್ವದ ಸಾರ ಅರಿಯೋಣ ಬಾರೆ ಉಪನ್ಯಾಸ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಬ್ರಿಟಿಷರ ಕಾಲದಲ್ಲಿ ಆಡಳಿತ ಅವರ ಕೈಯಲ್ಲಿ ಇದ್ದುದ್ದರಿಂದ ಸ್ವಾತಂತ್ರ್ಯ ಹೋರಾಟಗಾರರೇ ದೇಶದ್ರೋಹಿಗಳಾಗುತ್ತಿದ್ದರು ಎಂದರು.

ಸ್ವಾತಂತ್ರ್ಯಕ್ಕಾಗಿ ರಕ್ತ ಹರಿಸದೇ, ದೇಶ ಕಟ್ಟಲು ಹನಿ ಬೆವರನ್ನೂ ಸುರಿಸದವರು ದೇಶಭಕ್ತರು ಅಂದುಕೊಳ್ಳುತ್ತಿದ್ದಾರೆ. ಜನರನ್ನು ಎತ್ತಿಕಟ್ಟಿ ಸಾಮರಸ್ಯ ಕದಡಲು ಧರ್ಮಗಳ ನಡುವೆ ವಿಷಬೀಜ ಬಿತ್ತುವವರನ್ನು ದೇಶದ್ರೋಹಿಗಳು ಎಂದು ಕರೆಯಬೇಕು. ಈ ಬಗ್ಗೆ ಸಂವಿಧಾನ ರಚನಾ ಸಭೆಯಲ್ಲಿ ಅಂಬೇಡ್ಕರ್ ಹೇಳಿದ್ದರು ಎಂದರು.

ಹಿಂದೂ ಧರ್ಮವನ್ನು ತ್ಯಜಿಸುವ ಸಂದರ್ಭ ಅಂಬೇಡ್ಕರ್ ಅವರನ್ನು ಲಿಂಗಾಯತ ಧರ್ಮ ಆಯ್ಕೆ ಮಾಡಿಕೊಳ್ಳುವಂತೆ ಎಸ್.ನಿಜಲಿಂಗಪ್ಪ ಅವರು ಬಸವಣ್ಣನವರ ಪುಸ್ತಕ ಕೊಟ್ಟಾಗ ಅದನ್ನು ಓದಿದ ಅಂಬೇಡ್ಕರ್ ಬಸವ ತತ್ವಗಳನ್ನು ಬಚ್ಚಿಟ್ಟಿದ್ದಕ್ಕೆ ಬಹಿರಂಗವಾಗಿ ಅಸಮಾಧಾನವನ್ನು ವ್ಯಕ್ತಪಡಿಸಿದರು ಎಂದರು.

ಭಾರತದ ಚರಿತ್ರೆಯಲ್ಲಿ ಅಂಬೇಡ್ಕರ್, ನೆಹರು, ಸರ್ದಾರ್ ವಲ್ಲಭಬಾಯ್ ಪಟೇಲ್ ಹಾಗೂ ರವೀಂದ್ರನಾಥ ಠಾಗೋರ್ ಅವರ ನೈಜ ಇತಿಹಾಸ ದಾಖಲಿಸಿಲ್ಲ ಅವರ ಸಾಲಿಗೆ ಬಸವಣ್ಣ ಕೂಡ ಸೇರ್ಪಡೆಯಾ ಗುತ್ತಾರೆ. ಅರಿವೇ ಗುರು ಎಂದ ಬಸವಣ್ಣ ಅವರು 12ನೇ ಶತಮಾನದಲ್ಲಿ ಅನುಭವ ಮಂಟಪದ ಮೂಲಕ ಪ್ರಜಾಪ್ರಭುತ್ವ ಹಾಗೂ ಸಂವಿಧಾನಕ್ಕೆ ಮುನ್ನುಡಿ ಹಾಕಿದ್ದರು. ನಿಜವಾದ ಇತಿಹಾಸ ಅರಿತು, ಭ್ರಾತೃತ್ವವನ್ನು ಪ್ರತಿಯೊಬ್ಬರು ಬೆಳೆಸಿಕೊಳ್ಳಬೇಕು. ಆಧುನಿಕ ಭಾರತಕ್ಕೆ ಅಂಬೇಡ್ಕರ್ ಅವರೇ ಅಂದೇ ಅಡಿಪಾಯ ಹಾಕಿಕೊಟ್ಟಿದ್ದಾರೆ. ದೇಶ ನಡೆಸುತ್ತಿರುವುದು ಸಂವಿಧಾನವೇ ಹೊರತು ಯಾವುದೇ ಧರ್ಮ ಗ್ರಂಥವಲ್ಲ ಎಂದರು.

ಕಾರ್ಯಕ್ರಮದಲ್ಲಿ ಸಾರ್ವಜನಿಕ ಆಸ್ಪತ್ರೆ ಖ್ಯಾತ ಶಸ್ತ್ರಚಿಕಿತ್ಸಾ ತಜ್ಞ ಡಾ.ರೇವಣ್ಣ, ಅನಾಥ ಶವಗಳ ಮೋಕ್ಷದಾತ ಡಾ.ಮಾದೇಶ್, ರಾಷ್ಟ್ರಮಟ್ಟದ ಕ್ರೀಡಾಪಟು ಮಂಡ್ಯ ಬೆಟ್ಟಹಳ್ಳಿ ಎಂ.ಮಂಜು ಹಾಗೂ ಜಾಗೃತಿ ಶಿಕ್ಷಕ ಎಂ.ಜಯಪ್ಪ ಅವರನ್ನು ಸನ್ಮಾನಿಸಲಾಯಿತು. ದಸಂಸ ಜಿಲ್ಲಾ ಸಂಚಾಲಕ ಸಿ.ಉಮಾ ಮಹದೇವ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಜಾಗತಿಕ ಲಿಂಗಾಯತ ಮಹಾಸಭಾದ ಬಸವತತ್ವ ಪ್ರಚಾರಕ ಲಿಂಗರಾಜು ಚೌಹಳ್ಳಿ ಉಪನ್ಯಾಸ ನೀಡಿದರು.

ಕಾರ್ಯಕ್ರಮದ ಸಾನಿಧ್ಯವನ್ನು ಸಿದ್ಧಲಿಂಗ ಶಿವಾಚಾರ್ಯ ಸ್ವಾಮೀಜಿ, ಮನೋರಖ್ಖಿತ ಭಂತೇಜಿ ಹಾಗೂ ಫಾದರ್ ಅಂತೋನಿ ರಾಜ್ ವಹಿಸಿದ್ದರು. ಕಬ್ಬು ಬೆಳೆಗಾರರ ಸಂಘದ ರಾಜ್ಯಾಧ್ಯಕ್ಷ ಶಾಂತರಾಜು, ಶರಣ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಸಿದ್ದಪ್ಪ, ಕೆಪಿಸಿಸಿ ಕಾರ್ಯದರ್ಶಿ ಸಿ.ನರೇಂದ್ರ, ಜಿಪಂ ಮಾಜಿ ಅಧ್ಯಕ್ಷ ಎಸ್.ಎನ್.ಸಿದ್ಧಾರ್ಥ, ಪ್ರಾಧ್ಯಾಪಕ ಡಾ.ಬಿ.ಕೆ.ಜ್ಞಾನಪ್ರಕಾಶ್, ವೀರಶೈವ ಮಹಾಸಭಾ ಅಧ್ಯಕ್ಷ ಮಹದೇವಸ್ವಾಮಿ, ಉಪನ್ಯಾಸಕ ಕುಮಾರಸ್ವಾಮಿ, ನಾಯಕರ ಸಂಘದ ಅಧ್ಯಕ್ಷ ಚಿಕ್ಕಯ್ಯ, ಜಿಪಂ ಮಾಜಿ ಸದಸ್ಯರಾದ ಮಂಜುನಾಥನ್, ಕೆ.ಮಹದೇವ, ರೈತ ಸಂಘದ ಅಧ್ಯಕ್ಷರಾದ ಕುಮಾರಸ್ವಾಮಿ, ಪ್ರದೀಪ್, ಕಬ್ಬು ಬೆಳೆಗಾರರ ಸಂಘದ ಜಿಲ್ಲಾ ಕಾರ್ಯದರ್ಶಿ ಶಂಕರ್, ಸೇವಾಶ್ರಯ ಫೌಂಡೇಷನ್ ಅಧ್ಯಕ್ಷ ಆರ್.ಮಣಿಕಂಠರಾಜ್ ಗೌಡ, ದಸಂಸ ಸಂಚಾಲಕ ರಾಜು, ಸಿದ್ದರಾಜು, ಮೃಗಾಲಯ ಪ್ರಾಧಿಕಾರದ ಮಾಜಿ ನಿರ್ದೇಶಕ ಅಮ್ಜದ್ ಖಾನ್, ಯುವ ಕಾಂಗ್ರೆಸ್ ಮಾಜಿ ಜಿಲ್ಲಾಧ್ಯಕ್ಷ ಮೋಸಿನ್ ಖಾನ್, ಚಿಂತಕ ಎಸ್.ಜಯಕುಮಾರ್, ಸವಿತಾ ಸಮಾಜದ ಅಧ್ಯಕ್ಷ ನಾಗೇಂದ್ರ, ಮಡಿವಾಳರ ಸಂಘದ ಅಧ್ಯಕ್ಷ ಮಹದೇವಸ್ವಾಮಿ, ಬೌದ್ಧ ಮಹಾಸಭಾ ಅಧ್ಯಕ್ಷ ಶ್ರೀಧರ್, ಸಿಐಟಿಯು ಅಧ್ಯಕ್ಷ ಸಿ.ಪುಟ್ಟಮಲ್ಲಯ್ಯ, ಉಪ್ಪಾರ ಜನಕಲ್ಯಾಣ ಟ್ರಸ್ಟ್ ಅಧ್ಯಕ್ಷ ರಾಮಶೆಟ್ಟಿ, ಕಾರ್ಯದರ್ಶಿ ಶಾಂತರಾಜು, ರಂಗಸ್ವಾಮಿ ಇನ್ನಿತರರಿದ್ದರು.



ಸಾರ್ವಜನಿಕ ಆಸ್ಪತ್ರೆ ಖ್ಯಾತ ಶಸ್ತ್ರಚಿಕಿತ್ಸಾ ತಜ್ಞ ಡಾ.ರೇವಣ್ಣ, ಅನಾಥ ಶವಗಳ ಮೋಕ್ಷದಾತ ಡಾ.ಮಾದೇಶ್, ರಾಷ್ಟ್ರಮಟ್ಟದ ಕ್ರೀಡಾಪಟು ಮಂಡ್ಯ ಬೆಟ್ಟಹಳ್ಳಿ ಎಂ.ಮಂಜು ಹಾಗೂ ಜಾಗೃತಿ ಶಿಕ್ಷಕ ಎಂ.ಜಯಪ್ಪ ಅವರನ್ನು ಸನ್ಮಾನಿಸಲಾಯಿತು.

ಬಡವರ ಮಕ್ಕಳ ಕೊರಳಿಗೆ ಕೇಸರಿ ಶಾಲು

ಆರ್‌ಎಸ್‌ಎಸ್ ಅಥವಾ ಬಿಜೆಪಿಯವರ ಮಕ್ಕಳ್ಯಾರೂ ಕೇಸರಿ ಶಾಲನ್ನು ಧರಿಸಿಲ್ಲ. ಅವರ ಮಕ್ಕಳನ್ನು ವಿದೇಶಗಳಲ್ಲಿ ಉನ್ನತ ವ್ಯಾಸಂಗ ಮಾಡಿಸುತ್ತಿದ್ದಾರೆ. ಬಡವರ ಮಕ್ಕಳ ಕೊರಳಿಗೆ ಕೇಸರಿ ಶಾಲು ಹಾಕಿ ಗೋ ರಕ್ಷಣೆಗೆಂದು ಸಂಘರ್ಷಕ್ಕೆ ಬಿಡುತ್ತಿದ್ದಾರೆ. ಹಾಗಾಗಿ, ಕೇಸರಿ ಶಾಲಿಗೆ ಪರ್ಯಾಯವಾಗಿ ಸಂವಿಧಾನದ ಸಂಕೇತವಾಗಿರುವ ನೀಲಿ ಶಾಲು ಪ್ರದರ್ಶಿಸಿ.

-ಪ್ರಿಯಾಂಕ್ ಖರ್ಗೆ, ಶಾಸಕ.

ಪರಿಸರ ಸಂರಕ್ಷಣೆ ನಮ್ಮೆಲ್ಲರ ಹೊಣೆ



ಕಂಪಲಾಪುರ, ಜೂ.11(ಸದಾ)– ನಮ್ಮ ಸುತ್ತಲಿನ ಪರಿಸರ ಉಳಿಸುವುದು ನಮ್ಮೆಲ್ಲರ ಹೊಣೆ ಎಂದು ಗ್ರಾಪಂ ಸದಸ್ಯ ಕೆ.ಎನ್.ಸೋಮಶೇಖರ್ ತಿಳಿಸಿದರು.

ವಿಶ್ವ ಪರಿಸರ ದಿನದ ಅಂಗವಾಗಿ ಶ್ರೀಬಿಳಿಗಿರಿ ರಂಗಸ್ವಾಮಿ ಸರ್ವೀಸ್ ಸ್ಟೇಷನ್ ಆವರಣದಲ್ಲಿ ಆಯೋಜಿಸಿದ್ದ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಇತ್ತೀಚಿನ ದಿನಗಳಲ್ಲಿ ಉರುವಲಿಗಾಗಿ ಕಾಡುಗಳನ್ನು ನಾಶ ಮಾಡಲಾಗುತ್ತಿದೆ. ಇದನ್ನು ತಡೆಯಲು ನಾವೆಲ್ಲಾ ಧೃಢ ಸಂಕಲ್ಪ ಮಾಡಬೇಕು. ಮುಂದಿನ ಪೀಳಿಗೆ ಉಳಿವಿಗಾಗಿ ನಾವು ಮನೆ ಅಕ್ಕಪಕ್ಕ ಹಾಗೂ ಜಮೀನಿನ ಖಾಲಿ ಜಾಗದಲ್ಲಿ ಸಸಿಗಳನ್ನು ನೆಟ್ಟು ಸಾಮಾಜಿಕ ಜವಾಬ್ದಾರಿ ಹೆಚ್ಚಿಸಿಕೊಳ್ಳಬೇಕು. ಕಾಡು ಬೆಳೆಸುವುದರಿಂದ ಉಸಿರಾಡಲು ಆರೋಗ್ಯಯುತ ಗಾಳಿ ದೊರೆಯುವ ಜೊತೆಗೆ ಮನುಕುಲ ಉಳಿಯುತ್ತದೆ ಎಂದರು. ಅರಣ್ಯ ಇಲಾಖೆ ಪೃಥ್ವಿ ಸ್ವಾರಿಸ್, ಬಂಕ್ ಮಾಲೀಕ ಕೆ.ಪಿ.ನಿಂಗರಾಜು, ಕೆ.ಎನ್.ಅಶೋಕ್ ಮತ್ತಿತರರಿದ್ದರು.



ಬನ್ನೂರಿನ ಕೆಎಸ್‌ಆರ್‌ಟಿಸಿ ಬಸ್‌ನಿಲ್ದಾಣದ ಆವರಣದಲ್ಲಿ ನಡೆದ ಸಮಾರಂಭದಲ್ಲಿ ಸಾರಿಗೆ ಇಲಾಖೆಯ ನಿವೃತ್ತ ಡಿಎಂಇ ಮಲ್ಲೇಶ್ ಮತ್ತು ಮೇಲ್ವಿಚಾರಕ ಅಬ್ದುಲ್ ರಹೀಂ ಅವರನ್ನು ಸನ್ಮಾನಿಸಲಾಯಿತು. ಈ ವೇಳೆ ಮುಖಂಡರಾದ ರಾಧಾಕೃಷ್ಣ, ಪಾರ್ಥಸಾರಥಿ, ದಿನೇಶ್‌ಕುಮಾರ್, ಮಾಯಪ್ಪ, ಬಿ.ಸಿ.ಮಹೇಶ್, ಅಂಬಿಕಾ, ಫಾತೀಮಾ, ಚಿಕ್ಕಚನ್ನೇಗೌಡ, ಮಲ್ಲಿಕಾರ್ಜುನ, ಮಹದೇವು, ಗುರು, ಸಿದ್ಧಾರ್ಥ, ಮಹೇಂದ್ರ, ಶಂಕರ್, ರಾಜೇಶ್, ಸತೀಶ್, ಗೋವಿಂದೇಗೌಡ, ಐಓಬಿ ಶಿವಕುಮಾರ್, ಹುಚ್ಚೇಗೌಡ ಸೇರಿದಂತೆ ಹಲವರು ಉಪಸ್ಥಿತರಿದ್ದರು.




ಹುಣಸೂರು ನಗರದ ಗೋಕುಲ ಬಡಾವಣೆಯಲ್ಲಿ ಶನಿವಾರ ಕರ್ನಾಟಕ ರಾಜ್ಯ ಮಹಿಳಾ ಕಾಂಗ್ರೆಸ್ ಘಟಕದ ರಾಜ್ಯಾಧ್ಯಕ್ಷೆ ಡಾ.ಪುಷ್ಪ ಅಮರನಾಥ್ ಅವರು ಪದವೀಧರ ಮತದಾರರ ಮನೆಗೆ ಭೇಟಿ ನೀಡಿ ದಕ್ಷಿಣ ಪದವೀಧರ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಮಧು ಜಿ.ಮಾದೇಗೌಡರ ಅವರ ಪರ ಮತಯಾಚಿಸಿದರು. ಈ ವೇಳೆ ರಾಜ್ಯ ಮಹಿಳಾ ಘಟಕದ ಉಪಾಧ್ಯಕ್ಷೆ ಪುಷ್ಪವಲ್ಲಿ, ಮುಖಂಡರಾದ ಬಿಳಿಕೆರೆ ಮಧು, ಬಾಬಣ್ಣ, ಜಿಲ್ಲಾ ಕಾಂಗ್ರೆಸ್ ಮಾಧ್ಯಮ ವಕ್ತಾರ ಕೆ.ಮಹೇಶ್ ಇದ್ದರು.

ವ್ಯಾಪಾರದ ಮನೋಭಾವ ಪ್ರಜಾಪ್ರಭುತ್ವಕ್ಕೆ ಅಪಾಯ: ವಾಟಾಳ್ ನಾಗರಾಜ್

ಹೆಚ್.ಡಿ.ಕೋಟೆ, ಜೂ.11(ಮಂಜು)– ವ್ಯಾಪಾರದ ಮನೋಭಾವ ಪ್ರಜಾಪ್ರಭುತ್ವದ ಬೆಳವಣಿಗೆಗೆ ಅಪಾಯಕಾರಿ ಎಂದು ವಾಟಾಳ್ ನಾಗರಾಜ್ ತಿಳಿಸಿದರು.

ಪಟ್ಟಣದ ಪತ್ರಕರ್ತರ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪದವೀಧರರು ಸ್ವಲ್ಪ ಬದಲಾವಣೆಯಾಗುತ್ತಾರೆ ಎಂಬ ನಂಬಿಕೆ ಇದೆ. ಪದವೀಧರರಿಗೆ ಪ್ರಾಮಾಣಿಕತೆ, ಚಿಂತನೆ ಇರುವುದರಿಂದ ನನಗೆ ಮೊದಲ ಪ್ರಾಶಸ್ತ್ಯ ಮತ ನೀಡಿ ಗೆಲ್ಲಿಸಿ ಎಂದು ಮನವಿ ಮಾಡಿದರು.



ಎಲ್ಲಾ ಚುನಾವಣೆಗಳು ಇತ್ತೀಚಿನ ದಿನಗಳಲ್ಲಿ ಜಾತಿ ಹಣದ ಆಧಾರದ ಮೇಲೆ ನಡೆಯುತ್ತವೆ. ಇದು ಒಳ್ಳೆಯ ಬೆಳವಣಿಗೆಯಲ್ಲ. ಪ್ರಜಾಪ್ರಭುತ್ವದ ಮೇಲೆ ಗಂಭೀರ ಪರಿಣಾಮ ಬೀರುತ್ತದೆ. ಮೇಲ್ಮನೆಯಲ್ಲಿ ಚುನಾವಣೆ ವಿಧಾನ ಪರಿಷತ್ ಪವಿತ್ರವಾದುದು. ಪ್ರಾಮಾಣಿಕರು ಚಿಂತಕರು ಆಯ್ಕೆಯಾಗಬೇಕು ಎಂದರು.

ನನಗೆ ಸೋಲು ಜಾಸ್ತಿಯಾಗಿದೆ. ಇದಕ್ಕೆ ಕಾರಣ ಪ್ರಾಮಾಣಿಕತೆ, ತತ್ವ–ಸಿದ್ಧಾಂತ ಕಾರಣ. ವ್ಯಾಪಾರ ಮಾಡಲು ನಾನು ಮುಂದಾಗುವುದಿಲ್ಲ. ಇಂದು ಸಮಗ್ರವಾಗಿ ಚುನಾವಣೆ ಕಾಯ್ದೆ ಬದಲಾವಣೆ ಆಗಬೇಕು. ಇಲ್ಲದಿದ್ದರೆ ಮುಂದಿನ ದಿನಗಳಲ್ಲಿ ಚುನಾವಣೆ ಅಪಾಯಕಾರಿ ಬೆಳವಣಿಗೆಯಾಗುತ್ತದೆ. ಆ ದೃಷ್ಟಿಯಿಂದ ಮೈಸೂರು, ಹಾಸನ, ಮಂಡ್ಯ, ಚಾಮರಾಜನಗರ ಪದವೀಧರರ ಚುನಾವಣೆಯಲ್ಲಿ ಪದವೀಧರರು ಪ್ರಾಮಾ ಣಿಕವಾಗಿ ನಡೆದುಕೊಂಡು ನನನ್ನು ಗೆಲ್ಲಿಸಿ ಎಂದು ಮನವಿ ಮಾಡಿದರು. ಗೋಷ್ಠಿಯಲ್ಲಿ ಬೀರಪ್ಪ, ನಾರಾಯಣಸ್ವಾಮಿ, ಅಜಯ್, ಪಾರ್ಥಸಾರಥಿ, ಮಣಿ ಮುಂತಾದವರಿದ್ದರು.

ಪ್ರಬುದ್ಧ ಭಾರತ ನಿರ್ಮಾಣಕ್ಕೆ ಸಲಹೆ

ನಂಜನಗೂಡು, ಜೂ.11(ಸುದರ್ಶನ)– ಬಡತನದಿಂದ ನೊಂದು ಶಿಕ್ಷಣ ಕಲಿತವರು ಉತ್ತಮ ಪ್ರಜೆಯಾಗಿ ದೇಶಕ್ಕೆ ಕೊಡುಗೆ ನೀಡುತ್ತಿದ್ದಾರೆ ಎಂದು ದೊಡ್ಡಕವಲಂದೆ ಸರ್ಕಾರಿ ಪ್ರೌಢಶಾಲೆಯ ಉಪ ಪ್ರಾಂಶುಪಾಲ ಜೆ.ರಾಜು ಹೇಳಿದರು.

ನಂಜನಗೂಡು ತಾಲೂಕಿನ ದೊಡ್ಡ ಕವಲಂದೆ ಗ್ರಾಮದ ಸರ್ಕಾರಿ ಪ್ರೌಢಶಾಲೆಯಲ್ಲಿ ಹಿರಿಯ ವಿದ್ಯಾರ್ಥಿಗಳ ಸಂಘದಿಂದ ಗುರುವಂದನಾ ಹಾಗೂ ಸ್ನೇಹ ಸಮ್ಮಿಲನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಹಿರಿಯ ವಿದ್ಯಾರ್ಥಿಗಳು ಓದುತ್ತಿರುವ ಸಂದರ್ಭದಲ್ಲಿ ಸರ್ಕಾರಿ ಶಾಲೆಗಳಲ್ಲಿ ಮೂಲ ಸೌಕರ್ಯಗಳ ಕೊರತೆ ಇತ್ತು. ಇದನೆಲ್ಲ ಎದುರಿಸಿ ವಿದ್ಯಾರ್ಥಿಗಳು ತಮ್ಮ ವಿದ್ಯಾಭ್ಯಾಸ ಮಾಡಿದ್ದಾರೆ. ಬಡತನದಲ್ಲಿ ಹುಟ್ಟಿ ಸಾಧನೆ ಮಾಡುತ್ತಿದ್ದಾರೆ. ಶಾಲೆಗಳು ಅಭಿವೃದ್ಧಿ ಹೊಂದಬೇಕಾದರೆ ಹಿರಿಯ ವಿದ್ಯಾರ್ಥಿಗಳ ಸಹಕಾರ ಮುಖ್ಯವಾಗುತ್ತದೆ. ವಿದ್ಯಾರ್ಥಿಗಳು ಉನ್ನತ ಮಟ್ಟಕ್ಕೆ ಹೋಗಬೇಕು. ಸಮಾಜಕ್ಕೆ ತಮ್ಮದೆ ಸೇವೆ ನೀಡುವ ಮೂಲಕ ಪ್ರಬುದ್ಧ ಭಾರತ ನಿರ್ಮಾಣ ಮಾಡಬೇಕು ಎಂದು ಸಲಹೆ ನೀಡಿದರು.

ಇನ್ನೂ ಹಿರಿಯ ವಿದ್ಯಾರ್ಥಿಗಳ ಸಂಘದಿಂದ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಶಾಲೆಗೆ ಪ್ರಥಮ ಸ್ಥಾನ ಪಡೆದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಮತ್ತು ಗುರುಗಳಿಗೆ ಗುರುವಂದನಾ ಸಲ್ಲಿಸಿದರು.



ಕಾರ್ಯಕ್ರಮದಲ್ಲಿ ಗ್ರಾಪಂ ಸದಸ್ಯರಾದ ಪ್ರಶಾಂತ್, ಗಟ್ಟವಾಡಿ ಮಂಜುನಾಥ್, ಪತ್ರಕರ್ತರಾದ ಸಿ.ಎಂ.ಸುಗಂಧರಾಜು, ಕವಲಂದೆ ಶಿವಕುಮಾರ್, ದಸಂಸ ಸಂಚಾಲಕ ಗಟ್ಟವಾಡಿ ಮಹೇಶ್, ಎಸ್‌ಡಿಎಂಸಿ ಅಧ್ಯಕ್ಷ ನಜೀಬುಲ್ಲಾ ಖಾನ್, ಶಿಕ್ಷಕರಾದ ಅರ್ಚನಾ, ಮಧುಶ್ರೀ, ಶೃತಿ, ಅಮೂಲ್ಯ, ಹಿರಿಯ ವಿದ್ಯಾರ್ಥಿ ಮುಜಾಹಿದ್, ತ್ಯಾಗರಾಜ್, ಸಂಜಯ್, ಸಂತೋಷ್ ಸೇರಿದಂತೆ ವಿದ್ಯಾರ್ಥಿಗಳು ಹಾಜರಿದ್ದರು.

ವಿದ್ಯಾರ್ಥಿನಿಯರನ್ನು ಚುಡಾಯಿಸುತ್ತಿದ್ದ ಯುವಕರ ಬಂಧನ

ಸರಗೂರು, ಜೂ.11(ನಾಗೇಶ್)– ಶಾಲಾ ವಿದ್ಯಾರ್ಥಿನಿಯರನ್ನು ಚುಡಾಯಿಸುತ್ತಿದ್ದ ನಾಲ್ವರು ಯುವಕರನ್ನು ಪೊಲೀಸರು ಬಂಧಿಸಿ, ಪೊಕ್ಸೊ ಕಾಯ್ದೆಯಡಿ ಪ್ರಕರಣ ದಾಖಲಿಸಿರುವ ಘಟನೆ ಪಟ್ಟಣದಲ್ಲಿ ನಡೆದಿದೆ.

ನಾಲ್ವರು ಆರೋಪಿಗಳು ತಾಲೂಕಿನ ಮುಳ್ಳೂರು, ಚಾಮಲಾಪುರ ಗ್ರಾಮದವರಾಗಿದ್ದಾರೆ. ಇವರು ಪಟ್ಟಣದ ಗ್ರಾಮವೊಂದರ ಸರ್ಕಾರಿ ಪ್ರೌಢಶಾಲೆ ವಿದ್ಯಾರ್ಥಿನಿಯರನ್ನು ಹಿಂಬಾಯಿಸಿಕೊಂಡು ಚುಡಾಯಿಸುತ್ತಿದ್ದರು ಎನ್ನಲಾಗಿದೆ. ಹೀಗಾಗಿ ಪ್ರಕರಣ ದಾಖಲಿಸಿಕೊಂಡು ಪೊಲೀಸರು ಆರೋಪಿಗಳನ್ನು ಬಂಧಿಸಿ, ನ್ಯಾಯಾಲಯಕ್ಕೆ ಹಾಜರುಪಡಿಸಿ, ಜೈಲಿಗೆ ಕಳುಹಿಸಲಾಗಿದೆ.

ಘಟನೆ: ವಿದ್ಯಾರ್ಥಿನಿಯರು ತಮ್ಮ ಗ್ರಾಮದಿಂದ ಶಾಲೆಗೆ ಹೋಗುತ್ತಿದ್ದ ಸಂದರ್ಭದಲ್ಲಿ ಅವರನ್ನು 20 ದಿನಗಳಿಂದ ನಾಲ್ವರು ಯುವಕರು ಚುಡಾಯಿಸಿಕೊಂಡು, ಹಿಂಬಾಲಿಸುತ್ತಿದ್ದರು. ಇದರಿಂದ ಮನನೊಂದ ವಿದ್ಯಾರ್ಥಿನಿಯರು ಪೋಷಕರಿಗೆ ವಿಷಯ ತಿಳಿಸಿದ್ದಾರೆ. ಬಳಿಕ, ಪೋಷಕರು ಸರಗೂರು ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದರು. ಈ ಹಿನ್ನೆಲೆಯಲ್ಲಿ ಸರಗೂರು ತಾಲೂಕು ಸಿಪಿಐಎನ್ ಆನಂದ್ ಅವರ ನೇತೃತ್ವದಲ್ಲಿ ಪಿಎಸ್‌ಐ ಶ್ರವಣ್‌ದಾಸ್ ರೆಡ್ಡಿ ಹಾಗೂ ತಂಡವರು ಆರೋಪಿಗಳನ್ನು ಪತ್ತೆ ಹಚ್ಚಿ ಬಂಧಿಸಿದ್ದಾರೆ.

ರಾಜ್ಯದ ಅಭಿವೃದ್ಧಿಗೆ ಪ್ರಾದೇಶಿಕ ಪಕ್ಷ ಅವಶ್ಯಕ: ಶಾಸಕ ಸಾರಾ

ಕೆ.ಆರ್.ನಗರ, ಜೂ.11– ರಾಜ್ಯದ ಅಭಿವೃದ್ಧಿಗೆ ಪ್ರಾದೇಶಿಕ ಪಕ್ಷದ ಅವಶ್ಯಕತೆ ಇದೆ. ಆದ್ದರಿಂದ ಪದವೀಧರ ಮತದಾರರು ದಕ್ಷಿಣ ಪದವೀಧರ ಚುನಾವಣೆಯಲ್ಲಿ ಜೆಡಿಎಸ್ ಅಭ್ಯರ್ಥಿ ಹೆಚ್.ಕೆ.ರಾಮು ಅವರನ್ನು ಗೆಲ್ಲಿಸುವ ಮೂಲಕ ಪ್ರಾದೇಶಿಕ ಪಕ್ಷದ ಕೈಬಲಪಡಿಸಿ ಎಂದು ಮತದಾರರಲ್ಲಿ ಶಾಸಕ ಸಾ.ರಾ.ಮಹೇಶ್ ಮನವಿ ಮಾಡಿದರು.

ಪಟ್ಟಣದ ಸಮೀಪದ ಡಿಸಿಬಿ ಕಲ್ಯಾಣ ಮಂಟಪದಲ್ಲಿ ದಕ್ಷಿಣ ಪದವೀಧರ ಕ್ಷೇತ್ರದ ಚುನಾವಣಾ ಪ್ರಚಾರ ಸಭೆ ಉದ್ದೇಶಿಸಿ ಮಾತನಾಡಿದ ಅವರು, ಈ ಚುನಾವಣೆ ಎರಡೂ ರಾಷ್ಟ್ರೀಯ ಪಕ್ಷಗಳು ಮತ್ತು ಪ್ರಾದೇಶಿಕ ಜೆಡಿಎಸ್ ನಡುವೆ ನಡೆಯುತ್ತಿರುವ ಚುನಾವಣೆ ಎಂದರು.

ರಾಜ್ಯದ ಇತಿಹಾಸದಲ್ಲೇ ಇಷ್ಟೊಂದು ಭ್ರಷ್ಟಾಚಾರ ನಡೆಸಿದ ಸರ್ಕಾರವನ್ನು ನೋಡಿರಲ್ಲಿಲ್ಲ ಶಾಸಕರು ಮತ್ತು ಸಚಿವರು ದಿನಕ್ಕೊಂದು ಗೊಂದಲದ ಹೇಳಿಕೆ ನೀಡುತ್ತಾ ಹಣ ಮಾಡುವ ದಂಧೆಯಲ್ಲಿ ತೊಡಗಿದ್ದಾರೆ. ಅಭಿವೃದ್ಧಿ ಕಾರ್ಯ ಹೇಳಿ ಮತ ಕೇಳದೇ ಕೇವಲ ಮತೀಯ ಭಾವನೆ ಕೆರಳಿಸುವ ಹೇಳಿಕೆ ನೀಡುವ ಪಕ್ಷದ ಅಭ್ಯರ್ಥಿಗೆ ಮತ ನೀಡುತ್ತೀರಾ? ಎಂದು ಪ್ರಶ್ನಿಸಿದರು.

5 ವರ್ಷ ಆಡಳಿತ ನಡೆಸಿದ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯನವರು ರಾಜ್ಯ ಕಂಡರಿಯದಷ್ಟು ಸಾಲ ಮಾಡಿ ರಾಜ್ಯದ ಜನತೆ ಮೇಲೆ ಹೊರಿಸಿದ್ದೆ ಅವರ ಸಾಧನೆ. ಕೇವಲ ವೇದಿಕೆಯಲ್ಲಿ ಭಾಷಣ ಮಾಡುವ ಸಿದ್ದರಾಮಯ್ಯ ಆಡಿದ ಮಾತಿನಂತೆ ನಡೆಯುವವರೇ. ಇಂತಹ ಪಕ್ಷದ ಅಭ್ಯರ್ಥಿಗೆ ಮತ ನೀಡಬೇಕೆ ಎಂಬುದನ್ನು ನೀವೇ ನಿರ್ಧಾರ ಮಾಡಿ ಎಂದರು.

ವಿಧಾನ ಪರಿಷತ್ ಸದಸ್ಯ ಶ್ರೀಕಂಠೇಗೌಡ ಮಾತನಾಡಿ, ಈಗಾಗಲೇ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಅವರು ಎನ್‌ಪಿಎಸ್ ರದ್ದು ಪಡಿಸುವ ಭರವಸೆ ನೀಡಿದ್ದಾರೆ. ಅವರ ಅಧಿಕಾರ ವಧಿಯಲ್ಲಿ ವಕೀಲರಿಗೆ ನಿರುದ್ಯೋಗ ಭತ್ಯೆ ನೀಡಿದ್ದಾರೆ. ಅದೇ ರೀತಿ ನಿರುದ್ಯೋಗಿ ಪದವೀಧರರಿಗೂ ನಿರುದ್ಯೋಗ ಭತ್ಯೆ ನೀಡುವ ಭರವಸೆ ನೀಡಿದ್ದಾರೆ. ನುಡಿದಂತೆ ನಡೆಯುವ, ರಾಜ್ಯದ ಅಭಿವೃದ್ಧಿಗೋಸ್ಕರ ಶ್ರಮಿಸುವ ಹೆಚ್.ಡಿ.ಕುಮಾರಸ್ವಾಮಿ ಅವರ ಕೈ ಬಲಪಡಿಸಬೇಕಾದರೆ ಜೆಡಿಎಸ್ ಅಭ್ಯರ್ಥಿ ಹೆಚ್.ಕೆ.ರಾಮು ಅವರನ್ನು ಗೆಲ್ಲಿಸುವ ಜವಾಬ್ದಾರಿ ನಿಮ್ಮದಾಗಿದೆ ಎಂದರು.

ಪದವೀಧರ ಕ್ಷೇತ್ರದ ಅಭ್ಯರ್ಥಿ ಹೆಚ್.ಕೆ.ರಾಮು, ನವನಗರ ಬ್ಯಾಂಕ್ ಅಧ್ಯಕ್ಷ ಕೆ.ಎನ್.ಬಸಂತ್, ಜಿಲ್ಲಾ ಮಹಿಳಾಧ್ಯಕ್ಷೆ ಬೃಂದಾ, ಚುನಾವಣಾ ಉಸ್ತುವಾರಿ ಹೇಮಾವತಿ, ಕೆ.ಆರ್.ನಗರ ತಾಲೂಕು ಜೆಡಿಎಸ್ ಅಧ್ಯಕ್ಷ ಕುಮಾರ್, ಸಾಲಿಗ್ರಾಮ ಅಧ್ಯಕ್ಷ ರಾಜಣ್ಣ, ರಾಜ್ಯ ಕಾರ್ಯದರ್ಶಿ ಚಂದ್ರಶೇಖರ್, ಎಂ.ಟಿ.ಕುಮಾರ್, ಎಂ.ಟಿ.ಅಣ್ಣೇಗೌಡ, ನಾಗರಾಜ್, ಧನಂಜಯ, ವಕೀಲ ತಿಮ್ಮಪ್ಪ, ಕುಚೇಲ, ಡೈರಿ ಪ್ರಕಾಶ, ಗಿರೀಶ, ಕಿಶೋರ, ರಾಜಲಕ್ಷ್ಮೀ, ಸುಜಯ್ ಸೇರಿದಂತೆ ಇನ್ನಿತರರಿದ್ದರು.



ಜೆಡಿಎಸ್‌ನಲ್ಲಿ ಅಧಿಕಾರ ಅನುಭವಿಸಿ ತಮ್ಮನ್ನು ಬೆಂಬಲಿಸಿದ ಕಾರ್ಯಕರ್ತರ ಋಣ ತೀರಿಸದೇ ಪಕ್ಷದ ವರಿಷ್ಠರನ್ನು ಟೀಕಿಸುವ ಮೂಲಕ ಉಂಡ ಮನೆಗೆ ದ್ರೋಹ ಬಗೆಯುವವರಿಗೆ ಬುದ್ಧ ಕಲಿಸಬೇಕಾದರೆ ಈ ಚುನಾವಣೆಯಲ್ಲಿ ಪಕ್ಷದ ಅಭ್ಯರ್ಥಿ ಹೆಚ್.ಕೆ.ರಾಮು ಅವರಿಗೆ ಪ್ರಥಮ ಪ್ರಾಶಸ್ತ್ಯದ ಮತ ನೀಡುವ ಮೂಲಕ ವಿರೋಧಿಗಳಿಗೆ ಎಚ್ಚರಿಕೆ ನೀಡಬೇಕೆಂದು ಎಂಎಲ್‌ಸಿ ಮರಿತಿಬ್ಬೇಗೌಡರ ಹೆಸರೆಳದೆ ಶಾಸಕ ಸಾ.ರಾ.ಮಹೇಶ್ ಪರೋಕ್ಷವಾಗಿ ಆಕ್ರೋಶ ವ್ಯಕ್ತಪಡಿಸಿದರು.

ಬೆಟ್ಟದಪುರದಲ್ಲಿ ಶಕ್ತಿದೇವತೆ ಶ್ರೀ ಶಾಂತವೀರಮ್ಮ ವಿಗ್ರಹ ಪುನರ್ ಪ್ರತಿಷ್ಠಾಪನೆ



ಬೆಟ್ಟದಪುರ, ಜೂ.11 (ಶಿವದೇವ್)– ಗ್ರಾಮದ ಶಕ್ತಿದೇವತೆ ಶ್ರೀಶಾಂತವೀರಮ್ಮ ದೇವಸ್ಥಾನದ ಜೀರ್ಣೋದ್ಧಾರ ಹಾಗೂ ವಿಗ್ರಹ ಪುನರ್ ಪ್ರತಿಷ್ಠಾಪನಾ ಕಾರ್ಯಕ್ರಮ ಸಾವಿರಾರು ಭಕ್ತರ ಸಮ್ಮುಖದಲ್ಲಿ ಶ್ರದ್ಧಾ ಭಕ್ತಿಯೊಂದಿಗೆ ನಡೆಯಿತು. ಕಳೆದ 3 ದಿನಗಳಿಂದ ದೇವಾಲಯದಲ್ಲಿ ವಿಶೇಷ ಪೂಜಾ–ಕೈಂಕರ್ಯ ನಡೆಯುತ್ತಿದ್ದು, ಬೆಳಗ್ಗೆ ಉತ್ತರಾಂಗ ಹೋಮ, ಪ್ರಾಣ ಪ್ರತಿಷ್ಠೆ, ಪ್ರಸಾದ ಕಲಶ ಪ್ರತಿಷ್ಠೆ, ಮಹಾಪೂಜೆ, ರಂಭಾಸ್ತಂಭ ಛೇದನ, ಕೂಷ್ಮಾಂಡ ಬಲಿ, ಫಲ ಪೂಜೆ ಸೇರಿದಂತೆ ವಿವಿಧ ಹೋಮ ಹವನ ಮತ್ತು ವಿಶೇಷ ಪೂಜೆ ಬಳಿಕ ವಿಗ್ರಹ ಪ್ರತಿಷ್ಠಾಪನೆ ಮಾಡಲಾಯಿತು.

ಸಲೀಲಾಖ್ಯ ಮಠದ ಶ್ರೀಚನ್ನಬಸವದೇಶೀಕೇಂದ್ರ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ದೇವಾಲಯ ನಿರ್ಮಾಣಕ್ಕೆ 20 ಲಕ್ಷ ರೂ. ನೀಡಿದ್ದ ಗ್ರಾಮದ ತಮ್ಮಯ್ಯಶೆಟ್ಟಿ ಹಾಗೂ ಅವರ ಪತ್ನಿ, ಚಿಕ್ಕವೀರಮ್ಮ ಅವರನ್ನು ಸನ್ಮಾನಿಸಲಾಯಿತು. ಮೈಮುಲ್ ಅಧ್ಯಕ್ಷ ಪಿ.ಎಂ ಪ್ರಸನ್ನ, ಮಾಜಿ ಶಾಸಕ ಕೆ.ವೆಂಕಟೇಶ್, ಮೈಸೂರು ಮಹಾನಗರ ಪಾಲಿಕೆ ಮಾಜಿ ಸದಸ್ಯ ಪ್ರಶಾಂತ್‌ಗೌಡ, ವಾಣಿಜ್ಯೋದ್ಯಮಿ ಗಗನ್, ಸೋಮಶೇಖರ್ ಸೇರಿದಂತೆ ಗ್ರಾಮಸ್ಥರು ದೇವಿಗೆ ಪೂಜೆ ಸಲ್ಲಿಸಿದರು. ಭಕ್ತರಿಗೆ ಅನ್ನಸಂತರ್ಪಣೆ ಏರ್ಪಡಿಸಲಾಗಿತ್ತು.

ಗಂಡು ಹುಲಿ ಕಳೇಬರ ಪತ್ತೆ

ಹೆಚ್.ಡಿ.ಕೋಟೆ, ಜೂ.11(ಮಂಜು)– ಸುಮಾರು 4 ವರ್ಷದ ಗಂಡು ಹುಲಿ ಕಳೇಬರ ನಾಗರಹೊಳೆ ರಾಷ್ಟ್ರೀಯ ಉದ್ಯಾನವನದ ಮೇಟಿಕುಪ್ಪೆ ಅರಣ್ಯ ವಲಯಯಲ್ಲಿ ಕಂಡು ಬಂದಿದೆ. ತಾಲೂಕಿನ ದಟ್ಟಹಳ್ಳ ಬೀಟ್‌ನಲ್ಲಿ ಮೂರ್‍ನಾಲ್ಕು ದಿನಗಳ ಹಿಂದೆ ಹುಲಿ ಸ್ವಾಭಾವಿಕವಾಗಿ ಮೃತಪಟ್ಟಿದ್ದು, ದಟ್ಟಹಳ್ಳ ಗ್ರಾಮದ ಮಸಿಕಟ್ಟೆ ಹೆಬ್ಬಳ್ಳದಲ್ಲಿ ಅರಣ್ಯ ಇಲಾಖೆ ಸಿಬ್ಬಂದಿ ಶುಕ್ರವಾರ ಸಂಜೆ ಗಸ್ತಿನಲ್ಲಿದ್ದಾಗ ಪ್ರಕರಣ ಬೆಳಕಿಗೆ ಬಂದಿದೆ. ಶನಿವಾರ ಸ್ಥಳಕ್ಕೆ ಮೇಟಿಕುಪ್ಪೆ ಅರಣ್ಯ ವಲಯಾಧಿಕಾರಿ ಸಿದ್ದರಾಜು, ನಾಗರಹೊಳೆ ಡಿಸಿಎಫ್ ಮಹೇಶ್ ಕುಮಾರ್, ಅಂತರಸಂತೆ ಎಸಿಎಫ್ ಮಹದೇವು, ರಘುರಾಮ್, ವೆಂಕಟನಾಯ್ಡು ಭೇಟಿ ನೀಡಿ ಪರಿಶೀಲಿಸಿದರು. ನಾಗರಹೊಳೆ ಹುಲಿ ಸಂರಕ್ಷಿತ ಪಶುವೈದ್ಯ ಅಧಿಕಾರಿ ಡಾ.ರಮೇಶ್ ಹಾಗೂ ಕಂಚುಮಳ್ಳಿ ಪಶುವೈದ್ಯ ಅಧಿಕಾರಿ ಡಾ.ಪ್ರಸನ್ನ ಮರಣೋತ್ತರ ಪರೀಕ್ಷೆ ನಡೆಸಿದರು.



ಏಷ್ಯಾದ ಅತೀ ದೊಡ್ಡ 'ದಂತ' ಶೂರ

ಕಬಿನಿಯ ಭೋಗೇಶ್ವರ ಇನ್ನಿಲ್ಲ



ಹೆಚ್.ಡಿ.ಕೋಟೆ, ಜೂ.11(ಎಂಟಿವೈ)– ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ ಹೆಚ್.ಡಿ.ಕೋಟೆ ತಾಲೂಕು ವ್ಯಾಪ್ತಿಯ ಕಬಿನಿ ಹಿನ್ನೀರಿನ ಸಮೀಪ ಕಾಣಿಸಿಕೊಂಡು ಪ್ರವಾಸಿಗರ ಆಕರ್ಷಣೀಯ ಕೇಂದ್ರಬಿಂದುವಾಗಿದ್ದ, ಏಷ್ಯಾ ಆನೆಗಳಲ್ಲಿಯೇ ಅತೀ ದೊಡ್ಡ ದಂತ ಹೊಂದಿದ್ದ ಕಾಡಾನೆ ಭೋಗೇಶ್ವರ ಮೃತಪಟ್ಟಿದ್ದು, ವನ್ಯಜೀವಿ ಪ್ರೇಮಿಗಳಿಗೆ ಆಘಾತವನ್ನುಂಟು ಮಾಡಿದೆ.

ಬಂಡೀಪುರ ಹುಲಿ ಅರಣ್ಯ ಸಂರಕ್ಷಿತ ಪ್ರದೇಶದ ಗುಂಡ್ರೆ ವಲಯದ ಲಂಟಾನಾ ಪೊದೆಯಲ್ಲಿ ಭೋಗೇಶ್ವರನ ಕಳೇಬರ ಪತ್ತೆಯಾಗಿದೆ. ಮಾಸ್ತಿಗುಡಿ ಮುಂಭಾಗದ ನಾಯಿ ಹಳ್ಳ ಪ್ರದೇಶದ ಬಳಿ ಕಳೆದ 2 ದಿನದ ಹಿಂದೆಯೇ ಭೋಗೇಶ್ವರ ಮೃತಪಟ್ಟಿದೆ. ಇಂದು ಮಧ್ಯಾಹ್ನ ಅರಣ್ಯ ಸಿಬ್ಬಂದಿ ಕಣ್ಣಿಗೆ ಅದರ ಕಲೇಬರ ಬಿದ್ದಿದೆ.

ಸುಮಾರು 65ರಿಂದ 68 ವರ್ಷದ ಈ ಕಾಡಾನೆ ಸೌಮ್ಯ ಸ್ವಭಾವದ್ದಾಗಿದ್ದು, ಡಿ.ಬಿ.ಕುಪ್ಪೆ ವಲಯದಲ್ಲಿರುವ ಅರಣ್ಯ ಪ್ರದೇಶದ ಭೋಗೇಶ್ವರ ಗುಡಿ ಸಮೀಪದಲ್ಲಿಯೇ ಹೆಚ್ಚಾಗಿ ನೆಲೆ ನಿಂತಿತ್ತು. ಹೀಗಾಗಿ ಸಫಾರಿಗೆ ಬರುತ್ತಿದ್ದ ವನ್ಯಜೀವಿ ಪ್ರೇಮಿಗಳು, ಛಾಯಾಗ್ರಾಹಕರು ಹಾಗೂ ಅರಣ್ಯ ಸಿಬ್ಬಂದಿ ಆ ಆನೆಯನ್ನು ಪ್ರೀತಿಯಿಂದ ಭೋಗೇಶ್ವರ ಎಂದು ಕರೆಯುತ್ತಿದ್ದರು.

ಕಳೆದ 3 ದಶಕಗಳಿಂದಲೂ ಕಬಿನಿ ಹಿನ್ನೀರಿನ ಸಫಾರಿ ವಲಯದಲ್ಲಿ ಸೆಲೆಬ್ರೆಟಿ ಆನೆಯಾಗಿ ಹೆಸರು ಗಳಿಸಿದ್ದ ಭೋಗೇಶ್ವರ, ಅತೀ ಹೆಚ್ಚು ಫೋಟೋ ತೆಗೆಸಿಕೊಂಡ ಆನೆ ಎಂಬ ಕೀರ್ತಿಗೂ ಪಾತ್ರನಾಗಿದ್ದ.

ಕಾಕನಕೋಟೆ (ದಮ್ಮನಕಟ್ಟೆ) ಸಫಾರಿ ಕೇಂದ್ರ, ಕಬಿನಿ ಜೆ.ಎಲ್.ಆರ್.ಸಫಾರಿ ಕೇಂದ್ರ ಹಾಗೂ ಬೋಟ್ ಸಫಾರಿಗೆ ತೆರಳುತ್ತಿದ್ದ ಪ್ರವಾಸಿಗರಿಗೆ ಭೋಗೇಶ್ವರ ದರ್ಶನ ನೀಡುತ್ತಿದ್ದ. ಸಫಾರಿ ವಾಹನ ಮತ್ತು ಬೋಟ್ ಸಮೀಪವೇ ಬಂದರೂ ಯಾರ ಮೇಲೂ ಆಕ್ರಮಣ ಮಾಡುವ ಸ್ವಾಭಾವ ಹೊಂದಿರಲಿಲ್ಲ. ಇದರಿಂದಾಗಿಯೇ ಭೋಗೇಶ್ವರ ಎಲ್ಲರ ಪ್ರೀತಿಗೆ ಪಾತ್ರವಾಗಿತ್ತು.

ಭೋಗೇಶ್ವರನ ಮರಣೋತ್ತರ ಪರೀಕ್ಷೆ ನೆರವೇರಿದ್ದು, ಮೇಲ್ನೋಟಕ್ಕೆ ವಯೋ ಸಹಜ ಸಮಸ್ಯೆಯಿಂದ ಮೃತಪಟ್ಟಿದೆ ಎಂದು ಹೇಳಲಾಗುತ್ತಿದೆ. ವರದಿ ಬಂದ ನಂತರ ನಿಖರವಾಗಿ ತಿಳಿದು ಬರಲಿದೆ ಎಂದು ಅರಣ್ಯ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ. ಸ್ಥಳಕ್ಕೆ ಎಸಿಎಫ್ ಪರಮೇಶ್, ಆರ್‌ಎಫ್‌ಓ ಅಮೃತೇಶ್ ಹಾಗೂ ಇನ್ನಿತರರು ಭೇಟಿ ನೀಡಿ, ಪರಿಶೀಲಿದರು.

8 ಅಡಿ ಉದ್ದದ ದಂತ

ಸಾಮಾನ್ಯವಾಗಿ ಏಷ್ಯಾದ ಆನೆಗಳಿಗೆ 3ರಿಂದ 4 ಅಡಿ ದಂತವಿರುತ್ತದೆ. ಆದರೆ ಕಬಿನಿಯ ಭೋಗೇಶ್ವರನಿಗೆ 8 ಅಡಿ ದಂತ ಬೆಳೆದಿದ್ದು, ದಾಖಲೆಯಾಗಿದೆ. ಈ ಆನೆ ಏಷ್ಯಾ ತಳಿಯ ಆನೆಗಳಲ್ಲಿಯೇ ಅತೀ ಉದ್ದದ ದಂತ ಹೊಂದಿದ್ದ ಆನೆ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಆಫ್ರಿಕಾ ಆನೆಗಳಿಗೆ ಉದ್ದನೆಯ ದಂತ ಇರುವುದು ಸಾಮಾನ್ಯ. ಆದರೆ ಏಷ್ಯಾ ಆನೆಗಳಿಗೆ ಇಷ್ಟು ಉದ್ದದ ದಂತ ಇರುವುದು ಅಪರೂಪ ಹಾಗೂ ಅದು ವಿಶೇಷ.

ಎರಡೂ ದಂತವು ನೆಲಕ್ಕೆ ತಾಗುವಂತಿದ್ದು, ಹಾಗಾಗಿ ಭೋಗೇಶ್ವರ ಹುಲ್ಲನ್ನು ಸರಾಗವಾಗಿ ಸೇವಿಸಲು ಸಾಧ್ಯವಾಗುತ್ತಿರಲ್ಲಿಲ್ಲ. ಇದರಿಂದ ತನ್ನ ಕಾಲಿನಲ್ಲಿ ಹುಲ್ಲನ್ನು ಬಿಡಿಸಿಕೊಂಡ ನಂತರ ಅದನ್ನು ಸೊಂಡಿಲಿನಲ್ಲಿ ಎತ್ತಿಕೊಂಡು ತಿನ್ನುತ್ತಿತ್ತು. ಬೇರೆ ಆನೆಯಂತೆ ಬಾಗಲು ಭೋಗೇಶ್ವರನಿಗೆ ಸಾಧ್ಯವಾಗುತ್ತಿರಲಿಲ್ಲ.

ಕಾಡು, ವನ್ಯಜೀವಿಗಳಿರುವವರೆಗೆ ಭೂಮಿ ಮೇಲೆ ಮನುಷ್ಯನ ಬಾಳು

ಕೆಪಿಟಿಸಿಎಲ್ ನಿವೃತ್ತ ಮುಖ್ಯ ಇಂಜಿನಿಯರ್ ಅಭಿಮತ



ಮೈಸೂರು,ಜೂ 11(ಜಿಎ)– ಇವತ್ತಿನ ಮಕ್ಕಳಿಗೆ ನಮ್ಮ ಪೂರ್ವ ಪರಂಪರೆಯ ಬೇರಿನ ಬಗ್ಗೆ ಪರಿಚಯವಿಲ್ಲ. ಅದು ತಬ್ಬಲಿಯ ಪ್ರತೀಕವಾಗಿದೆ ಎಂದು ಕೆಪಿಟಿಸಿಎಲ್ ನಿವೃತ್ತ ಮುಖ್ಯ ಇಂಜಿನಿಯರ್ ಶಂಕರ್ ದೇವನೂರು ತಿಳಿಸಿದರು.

ಮೈಸೂರಿನ ರಾಜೇಂದ್ರ ಭವನದಲ್ಲಿ ಮೈಸೂರು ನಗರ ಶರಣ ಸಾಹಿತ್ಯ ಪರಿಷತ್ತಿನ ದತ್ತಿ ಕಾರ್ಯಕ್ರಮದ ಅಂಗವಾಗಿ ಏರ್ಪಡಿಸಿದ್ದ ಕಾಯಕ ದಿನಾಚರಣೆ ಮತ್ತು ಕಾಯಕಶ್ರೀ ಪ್ರಶಸ್ತಿ ಪ್ರದಾನ ಕಾರ್ಯಕ್ರಮವನ್ನು ಉದ್ಘಾಟಿಸಿದ ಅವರು ನಾಗರತ್ನಮ್ಮ ಹಾಗೂ ಜಿ.ವಿ. ಸೋಮಶೇಖರ್ ಅವರಿಗೆ ಪ್ರಶಸ್ತಿ ಪ್ರದಾನ ಮಾಡಿ ಮಾತನಾಡುತ್ತಿದ್ದರು.

ಕಾಯಕ ದಿನಾಚರಣೆಯೊಂದಿಗೆ ಪರಿಸರ ದಿನಾಚರಣೆಯೂ ಈ ಮಾಸದಲ್ಲಿ ಬಂದಿದೆ. ಪರಿಸರವನ್ನು ನಾವು ಸ್ಮರಿಸಲೇ ಬೇಕು ಏಕೆಂದರೆ ಶರಣರು ತಮ್ಮ ಇಡೀ ಬದುಕನ್ನು ನಿಸರ್ಗದೊಂದಿಗೆ ಸಮ್ಮಿಳಿತಗೊಳಿಸಿಕೊಂಡು ಬದುಕುತ್ತಿದ್ದರು. ಅದರಂತೆ ಮನುಷ್ಯನ ಜೀವನಕ್ಕೆ ಆಸರೆಯಾಗಿ ಕಾಡು–ಮೇಡು, ವನ್ಯ ಜೀವಿಗಳು ಇವೆ ಎಂದು ಪೂರ್ವಿಕರು ಹೇಳಿದ್ದಾರೆ. ಆ ಮಾತು ಇಂದಿನ ದಿನಗಳಿಗೂ ಅನ್ವಯಿಸುತ್ತದೆ ಎಂದರು.

ಕಾಡು, ಮೇಡು ವನ್ಯಜೀವಿಗಳು ಇರುವವರೆಗೆ ಮಾತ್ರ ಭೂಮಿ ಮೇಲೆ ಮನುಷ್ಯ ಬದುಕಬಹುದು. ಈ ಮಾತಿನ ಬಗ್ಗೆ ಆತ್ಮಾವಲೋಕನ ಮಾಡಿಕೊಳ್ಳಬೇಕು ಎಂದ ಅವರು, ನಾವು ಪರಿಸರದ ಜೊತೆಗಿರುವ ಕರುಳ ಬಳ್ಳಿಯ ಸಂಬಂಧವನ್ನು ಕಳೆದುಕೊಂಡು ಅಟ್ಟಹಾಸದಿಂದ ಮೆರೆಯುತ್ತಿದ್ದೇವೆ. ಎಷ್ಟೇ ಆಸ್ತಿ ಇದ್ದರೂ ಏನೂ ಪ್ರಯೋಜನವಿಲ್ಲ. ಆದ್ದರಿಂದ ಮಕ್ಕಳಿಗೆ ನಮ್ಮ ಪೂರ್ವ ಪರಂಪರೆಯ ಬೇರಿನ ಬಗ್ಗೆ ತಿಳಿಸಬೇಕು ಎಂದರು.

ಕಾರ್ಯಕ್ರಮಕ್ಕೂ ಮುನ್ನ ರಾಜರಾಜೇಶ್ವರಿ ಅಕ್ಕನ ಬಳಗದ ವತಿಯಿಂದ ವಚನ ಗಾಯನವನ್ನು ಏರ್ಪಡಿಸಲಾಗಿತ್ತು. ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಪ್ರೊ. ಮಲೆಯೂರು ಗುರುಸ್ವಾಮಿ, ಮೈಸೂರು ನಗರ ಶರಣ ಸಾಹಿತ್ಯ ಪರಿಷತ್ತು ಅಧ್ಯಕ್ಷ ಮ.ಗು. ಸದಾನಂದಯ್ಯ, ಕಾರ್ಯದರ್ಶಿ ಟಿ.ಎಸ್. ಕುಮಾರಸ್ವಾಮಿ ಮತ್ತು ಪದಾಧಿಕಾರಿಗಳು ಉಪಸ್ಥಿತರಿದ್ದರು.

ಹಸಿರು ನಮ್ಮ ಉಸಿರು

ಕಲ್ಲು ತೂರಿದವರ ಅಕ್ರಮ ಕಟ್ಟಡಗಳ ಮೇಲೆರಗಿದ 'ಯೋಗಿ' ಬುಲ್ಡೋಜರ್‌ಗಳು!





ಲಕ್ನೋ, ಜೂ.11– ಉತ್ತರ ಪ್ರದೇಶದಲ್ಲಿ ಸರ್ಕಾರ ಮತ್ತೆ ಕಿಡಿಗೇಡಿಗಳ ವಿರುದ್ಧ ಕ್ರಮ ಕೈಗೊಂಡಿದೆ. ಪ್ರವಾದಿ ಮಹಮ್ಮದ್ ಪೈಗಂಬರ್ ಬಗೆಗೆ ನೀಡಿದ ಹೇಳಿಕೆ ವಿರೋಧಿಸಿ, ಶುಕ್ರವಾರ ಉತ್ತರ ಪ್ರದೇಶದಲ್ಲಿ ನಡೆದ ಹಿಂಸಾಚಾರವನ್ನು ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಗಂಭೀರವಾಗಿ ಪರಿಗಣಿಸಿದ್ದಾರೆ ಹಾಗೂ ಬುಲ್ಡೋಜರ್‌ಗಳಿಗೆ ಕೀಲಿ ಕೊಟ್ಟಿದ್ದಾರೆ.

8 ರಾಜ್ಯಗಳಲ್ಲಿ ನಡೆದ ಪ್ರತಿಭಟನೆಯಲ್ಲಿ ಉತ್ತರ ಪ್ರದೇಶದಲ್ಲೇ ಅತಿ ಹೆಚ್ಚು ಜಿಲ್ಲೆಗಳಲ್ಲಿ ಪ್ರತಿಭಟನೆಯ ಕಿಚ್ಚು ಕಂಡು ಬಂದಿದೆ. ಕಾನ್ಪುರ್, ಪ್ರಯಾಗ್ ರಾಜ್, ಲಕ್ನೋ, ಮುರಾದಾಬಾದ್, ಸಹರಾನ್ಪುರ್, ಫಿರೋಜಾಬಾದ್‌ನಲ್ಲಿ ಪ್ರತಿಭಟನೆ ಜೋರಾಗಿ ನಡೆದಿದೆ. ಕಲ್ಲು ತೂರಾಟ ಮತ್ತು ಬೆಂಕಿ ಹಚ್ಚುವ ಪ್ರಯತ್ನದಿಂದಾಗಿ 40ಕ್ಕೂ ಅಧಿಕ ಮಂದಿಗೆ ಗಾಯಗಳಾಗಿವೆ. ಘಟನೆಗೆ ಸಂಬಂಧಿಸಿದಂತೆ 109 ಮಂದಿಯನ್ನು ಸದ್ಯ ಬಂಧಿಸಲಾಗಿದೆ.

ಇದೀಗ ಕಲ್ಲು ತೂರಾಟ ನಡೆದ ಅಟಲ್ ಚೌಕ್ ಸುತ್ತಮುತ್ತಲಿನ ಪ್ರದೇಶಗಳಿಗೆ ಬುಲ್ಡೋಜರ್‌ಗಳು ಬಂದಿವೆ. ದುಷ್ಕರ್ಮಿಗಳನ್ನು ಪತ್ತೆಹಚ್ಚಿದ ಬಳಿಕ ಅಕ್ರಮ ಕಟ್ಟಡಗಳನ್ನು ನೆಲಸಮಗೊಳಿಸಲು ಸಿದ್ಧತೆ ನಡೆಸಲಾಗುತ್ತಿದೆ. ಜೂನ್ 3 ರಂದು ಕಾನ್ಪುರದಲ್ಲಿ ನಡೆದ ಹಿಂಸಾಚಾರದ ಪ್ರಕರಣಕ್ಕೆ ಸಂಬಂಧಿಸಿದಂತೆ ಸರ್ಕಾರ ಕ್ರಮವನ್ನು ಶುರು ಮಾಡಿದೆ. ಹಿಂಸಾಚಾರದ ಮಾಸ್ಟರ್ ಮೈಂಡ್ ಜಾಫರ್ ಹಯಾತ್ ಹಶ್ಮಿ ಅವರ ಆಪ್ತ ಸಹಾಯಕನ ಮನೆಯ ಮೇಲೆ ಬುಲ್ಡೋಜರ್ ನುಗ್ಗಿದೆ. ಅಕ್ರಮ ಕಟ್ಟಡಗಳನ್ನು ನೆಲಸಮಗೊಳಿಸುವ ಪ್ರಕ್ರಿಯೆ ಆರಂಭವಾಗಿದೆ. ಪ್ರತಿಭಟನೆ ನಿಯಂತ್ರಣಕ್ಕೆ ಬರುತ್ತಿದ್ದಂತೆ ಇಂತಹ ಘಟನೆಗಳು ಮರುಕಳಿಸುವ ಅನುಮಾನದ ಹಿನ್ನೆಲೆಯಲ್ಲಿ ಯೋಗಿ ಆದಿತ್ಯನಾಥ್ ಉನ್ನತ ಪೊಲೀಸ್ ಅಧಿಕಾರಿಗಳ ಸಭೆ ನಡೆಸಿದ್ದಾರೆ. ಅಲ್ಲದೇ ಶಾಂತಿ ಕದಡಲು ಪ್ರಯತ್ನ ಮಾಡಿದ ಎಲ್ಲಾ ಆರೋಪಿಗಳನ್ನು ಮುಲಾಜಿಲ್ಲದೇ ಬಂಧಿಸಿ ಕ್ರಮ ತೆಗೆದುಕೊಳ್ಳಿ ಎಂದು ಸೂಚಿಸಿದ್ದಾರೆ. ಉತ್ತರ ಪ್ರದೇಶದಲ್ಲಿ ಪ್ರತಿಭಟನೆಗಳು ಹೆಚ್ಚುತ್ತಿರುವ ಹಿನ್ನೆಲೆ ಯೋಗಿ ಈ ಕ್ರಮಕ್ಕೆ ಮುಂದಾಗಿದ್ದಾರೆ.

ನಾಳೆ ಅಪ್ರೆಂಟಿಸ್ ಮೇಳ

ಮೈಸೂರು, ಜೂ.11– ಜೂ.13ರಂದು ಮುಕ್ತ ವಿವಿ ಕಾವೇರಿ ಸಭಾಂಗಣದಲ್ಲಿ ಬೆಳಗ್ಗೆ 10 ಗಂಟೆಗೆ ಅಪ್ರೆಂಟಿಸ್ ಮೇಳವನ್ನು ಆಯೋಜಿಸಲಾಗಿದೆ. ಜಿಲ್ಲೆಯ ವ್ಯಾಪ್ತಿಗೆ ಒಳಪಡುವ ಐ.ಟಿ.ಐನಲ್ಲಿ ಉತ್ತೀರ್ಣ ಹೊಂದಿರುವ ವಿವಿಧ ವೃತ್ತಿಗಳ ತರಬೇತು ದಾರರು ಹಾಗೂ ಪ್ರಸ್ತುತ ಅಂತಿಮ ವರ್ಷದಲ್ಲಿ ತರಬೇತಿ ಪಡೆಯುತ್ತಿರುವ ತರಬೇತಿದಾರರನ್ನು ಅಪ್ರೆಂಟಿಸ್‌ಶಿಪ್ ತರಬೇತಿಗೆ ಜಿಲ್ಲಾ ವ್ಯಾಪ್ತಿಗೆ ಒಳಪಡುವ ವಿವಿಧ ಕಂಪನಿಗಳಿಂದ ನೇಮಕ ಮಾಡಿಕೊಳ್ಳಲಾಗುತ್ತಿದ್ದು, ಆಸಕ್ತ ಅಭ್ಯರ್ಥಿಗಳು ಭಾಗವಹಿಸಲು ತಿಳಿಸಲಾಗಿದೆ.